The following is a short list of books recommended for use by all Scout Groups. Books marked * are recommended to the special attention of Scouters. All these books require careful reading and frequent reference by Scouters. These books may well be kept at the Group Headquarters to be lent out to boys and Scouters who seek information on specific

practical subjects. Scouters and especially Group Scoutmasters will need to keep in touch with the literature on all the three branches of Scouting.

Scout H. Q. will be happy to obtain any of the books for Groups that may require them.

Scouting for Boys—By the Chief Scout, Rs. 2.

*Aids to Scoutmastership—By the Chief Scout, Rs. 1-8-0.

*Boy Scouts—By Gilcraft, Re. 1-4-0.

Patrol System and Letters to a Patrol Leader —By Roland Philips, Re. 1-14-0.

Letters to a Patrol Leader—First Class—By Roland Phillips, As. 6.

*The Quest of the Boy—By F. W. W. Griffin, Re. 1-2-0.

*Discipline in the Scout Movement—By Gilcraft, Re. 1-8-0.

Tracking Rules for Scouters—By Gilcraft, Re. 1-8-0.

Gilcraft Book of Games, Re. 1-4-0.

*Training in Tracking—By Gilcraft, Re. 1-4-0

*Good Scouting—By Vera Barclay, Re. 1-14-0

*The Scout Way—By Vera Barclay, Re. 1-4-0

*Scouting Sketches—By Lord Hampton, Rs. 2-10-0.

Hand Book for Scoutmasters—By Boy Scouts of America, Rs. 4.

Hand Book for Boys—By Boy Scouts of America, Rs. 2-4-0.

Scouting Games—By the Chief Scout, Re. 1-4-0.

Games for Scouts—By A. W. N. McKenzie, Re. 1-14-0.

Knotting—By Gilcraft, Re. 1-4-0.

Preparing the Way; Pioneering—By Gilcraft, Re. 1-4-0.

Talks on Ambulance Work-By Gilcraft, Re. 1-4-0.

Signalling for Scouts—By D. F. Morgan and E. Scott, Rs. 1-14-0.

Scouting Out-of-Doors—By Gilcraft, Re. 1-4-0

Exploring—By Gilcraft, Re. 1-4-0.

Spare Time Activities—By Gilcraft, Re. 1-4-0.

Play Acting for Scouts—By E. S. Monro, Re. 1-14-0.

Saturday Afternoon Scouting—By F. A. Socks, Re. 1-8-0.

Standing Camps—By D. F. Morgan, Re. 1-14-0.

Notes on Camping—By the Board of Education, As. 12.

Hiking—By D. F. Morgan, Re. 1-2-0.

Camping and Woodcraft—By Kephart, Rs. 3-12-0

Camp and Character Training—By Major F. M. Crum, As. 12

Tests and How to Pass Them—By I. H. Q. Rs. 3-6-0

Tenderfoot Tests and How to Pass Them—By the Boy Scouts of Mysore, As. 0-1-6

First Class Tests and How to Pass Them, As. 4

Hand Book of Physical Education for Indian School—By Mr. H. C. Buck, Re. 1-8-0

Manual of Drill for Boy Scouts, As. 14

Policy Organisation and Rules.

Vernacular Publications.

Hints to Scoutmasters (Kannada) As. 3

Scouts' Kannada Handbook, As. 8

First Class Tests (Kannada), As. 3

Second Class Tests (Kannada), As. 2/6

Scout Geethagalu (Kannada), As. 4

Rashtrageethagalu (Kannada), As. 2

Scout's Comrade (Urdu), As. 5.

Rovering.

Rovering to Success—By Lord Baden-Powell, Re. 1-14-0

Rover Scouting—By F. W. W. Griffin, M.A., Re. 1-14-0

Rover Scouts—By Gilcraft, Re. 1-4-0
Rover Quests in Practice, Re. 1-0-0
Rover Investiture Ceremony 6 pies.

Cubbing.

Wolf Cub's Hand Book—By Lord Baden-Powell, Re. 1-8-0
Cub Book—By Lord Baden-Powell, As. 4
Wolf Cubs—By R. W. Bryan, Re. 1-2-0
Lettes to a Wolf Cub—By Gilcraft, Re. 1-4-0
Wolf Cubs Star Tests and How to Pass Them—By John Lewis, As. 4
Character Training in the Wolf Cub Pack—By N. C. Barclay, Re. 1-2-0
Cubbing, How to run a Pack—By V. C. Barclay, As. 12
How to run Wolf Cubs—By John Lewis, Re. 1-2-0
Jungle Wisdom, a book for Cubmasters—By V. C. Barclay, Re. 1-8-0
An Old Wolf's Favourities, Animal I have known—By Lord Baden-Powell, Re. 1-2-0
Jungle Books—By R. Kipling, Parts I and II, Rs. 4-8-0
Camping for Cubs—As. 12
Book of Cub Games—By V. C. Barclay, Re. 1-8-0.
Games for Cubs—By A. W. N. Mackenzie, Re. 1-8-0
Marigala Koogu (Kannada Handbook on Cubbing), Re. 1
Cubbing (Urdu)—As. 12.

LIST OF PAMPHLETS ISSUED BY I. H. Q.

1 Aims, Methods and Needs.
2 The Scout Law and Promise.
3 Wolf Cub—What they are.
4 Scouting and Education.
5 Scouting and Religion 6 annas
6 A living faith—How Scouting can help the Church.
7 Is Scouting military?—a Reply!
8 The Two Ideals.
9 Local Associations—How They can help.
10 Character Training Outside School Hours.
11 Boy Scouts—How to Start a Troop.
12 Hints to Badge Examiners.
13 Rover Scouts—What they are and what they do.
14 Rover Scouts—What they are.
15 Hints on Questing for Rovers.
16 The Investiture of a Rover Scout.

List of Equipment.

Standardised list of equipment required for a Troop of 32 boys.

As per circular No. 30/ 26-27 of the 8th February, 1927 from the Inspector General of Education, Head Masters of Schools are authorised to spend 20% of the Sports collections each year (subject to a maximum of Rs. 50 per scout troop), for the development of Scouting in the School and to grant club rooms and other facilities required for maintaining an efficient Scout Troop. It is hoped that every attempt will be made to equip each school troop with as many of these articles as possible.

For Tenderfoot Test.

1 One Mysore Flag Rs. 4-6-0
2 32 pieces of 3/8" rope each 2 yards long Rs. 2
3 4 pieces of ¾" x 1" ropes, say 5 seers of each. As. 12
4 Some length of ropes for flag hoisting etc., Rs. 2
5 Six nails for flag staff and a hammer, As. 8
6 32 Scout Staves at 2½ annas each, Rs. 5
7 One small Union Jack, Rs. 1
8 One set of wall charts—24 Rs. 9-6-0, 6 annas 9 pies each.

For Second and First Class Work.

9 32 bandages (triangular) Rs. 6-9-0 at 3 annas, 3 pies each

10 16 pairs of Semaphore flags with sticks Rs. 6 at 6 annas each.

11 16 Morse Flags with sticks Rs. 6 at 6 annas each

12 One set splints Rs. 2-4-0

13 One First Aid Box or small bottles with mddicines, 1-8-0

14 One stretcher, Rs. 10

15 Two compasses, Rs· 3, each Rs. 1-8-0.

16 One set of First Aid Charts (St· John Ambulance Association) Rs. 18·

17 One set of tools for wood work, Rs· 18·

18 Map Making outfit Rs. 5

General: For Camps, Parades etc.

Troop Flag (with troop motto and troop hero etc.), Rs. 8-12-0

Patrol Flags (of patrol animals) Rs. 2

Haversacks—individual (optional) Rs· 1-8-0

Some lanterns—say three. Troop property Rs. 4-8-0

Bucket—say four, Rs. 4

One First Aid Box—big one Rs. 6-8-0

Four boxes—to keep patrol property, record etc·, (to be the Troop Property).

One bugle Rs. 18, if funds permit

One drum Rs. 60 „

One whistle with one lanyard Re· 1

Scout Knives (individual) Rs. 1-8-0.

Books and Records.

Library Books—Vide list above.

Records—Vide Pamphlet No· 2· "Hints to Scoutmasters·"

His Highness' Photo.

His Highness the Chief Scout's Photo.

Sir Robert Baden-Powell's Photo.

Photo of Prince Jayachamaraja Wadiyar—Chief Cub.

Progress Chart.

Scout Law Posters—English and Kannada.

Other pictures—of heroes of history and mythology or scout activities.

Profsciency Badges.

Requisites depend upon the subject of study. Every Local Scout Association is expected to provide the necessary equipment and instruction with the help of the local experts.

Probable Cost.

Omitting costly things like bugle, drum (which are optional) the list of articles above may cost about Rs· 150. In some cases the cost may be reduced by purchasing less quantity say, 8 pairs of Semaphore or 3 Morse flags only, it being arranged that while one patrol is doing signalling, the other does First Aid etc. By proper arrangement of work like this, it is possible to run the troop with equipment which may be bought for, say Rs. 100. It is also not necessary that all the articles should be bought immediately· As the work progresses from stage to stage the equipment most urgently required might be bought. While the list sets a standard, individual needs of the troop are to be consulted and it should be the aim to equip each Troop completely in the course of a period of 2 years and keep them as the permanent property of the troop, preferably in charge of the Scoutmaster who will be responsible for their custody and safety.

An Imaginary Commissioner's Diary.

For August 1937.

4th—Received information from the President of the Municipality that as a protest against the remarks made by the Chief Scout, against Indians as a nation, they have resolved to stop the grant unless we dis-affiliate ourselves from the B. P. Movement.

7th—Received lists of equipment from 8 Units and passed them on to the Secretary with modifications.

8th—Wrote to the Secretary about the holding of the General Meeting of the District Scout Council.

10th—Sent Circulars to all the local Units regarding the holding of the Monthly Rally on the 21st instant.

11th—Visited the K........Troop at B.......... Found that there was some trouble between the S. M. and the A. S. M. The work of the Troop had suffered and there was bad blood in the boys as well, as a result. Sent for both and made them realise that such an attitude was opposed to Scouting ideals. Both promised to make up their differences and go on harmoniously.

15th—Received a report from Mr. A.........of K.........Primary School to the effect that he had started a Cub Pack under the orders of the H. M. Interviewed the D. E. O. and told him to issue him instructions to drop the work, as he had a bad reputation, having been brought before a Court for offences of house-breaking and theft twice, although acquitted.

17th—Received lists of equipment from 6 Units and sent them to the Secretary, 2 with modifications and the rest, as they were.

19th—Sent material to the Secretary for the preparation of the report of the District Scout Council.

21st—Attended the Monthly Rally. The number participating in the Rally being 17 Cubs and 36 Scouts. Response poor. Had Flag-Rally, 2 Relay Games and a Competition in Scout's Ear for Scouts and 2 Jungle Dances and a competition in Book Balancing for Cubs. Had a Camp-fire with half a dozen items 3 of them being commonplace. A distinguished guest from the neighbouring District gave a yarn on "How to save money". Function closed with the National Anthem.

23rd—Attended the meeting of the Executive Committee of the District Council. The report of the Committee approved. The Executive Engineer had prepared the specifications for the main building for the Council. It was resolved that tenders should be called for to reach the office on or before the 15th of September.

25th—Found that monthly reports of activities were not being sent by the Units regularly. Sent a reminder to all the Units in the Districts to send their reports within the first week of every month regularly.

29th—Attended the General Meeting of the District Scout Council. The usual routine business gone through. Suggested a camp for Patrol Leaders in addition to a Camp for Cub Masters and got provision made in the Budget.

—IMACT.

Our Photographic Competition

This competition is run subject to the following conditions :—

1. The competition is open to Cubs, Scouts, Rovers and Scouters only.

2. All prints that are sent for the competition should be connected with some Scout activity or other.

3. Any number of prints may be sent for the competition. No entrance fee is charged, but the prints should be sent with the corresponding entry coupons which are published in THE MYSORE SCOUT. If the competitor expects the prints to be sent back, he should send a stamped envelope addressed to himself with instructions that the prints should be sent back. Only prints which are not accepted, will be returned.

4. The name of the competitor, the unit to which he belongs together with the title of the print should be clearly and legibly written on the back of each print in pencil (not copying). The print or prints should be sent along with a covering letter containing all the details noted on the back of the prints.

5. The prints should be sent to the Editor, THE MYSORE SCOUT, Tumkur so as to reach him before the 20th of each month to be included in the competition in the coming issue.

6. The Declaration in the entry coupon should be filled up by the competitor and countersigned by the officer in charge of the unit in the case of Cubs, Scouts and Rovers.

7. The Editor does not take any responsibility for loss of prints in transit. Prints may be sent by registered post to guard against loss.

8. Competitors who send entries should have in their custody, the negatives of the printed, till the declaration of the final results and should send them to the Editor when called for.

9. The Editorial Committee reserves to itself the right to reject any entry or to refuse to publish it in the magazine.

10. The results will be declared in every issue. These prints will be divided into 3 groups according to their merit. Every picture declared to come under group I will carry 10 points, under group II, 5 points and under group III, 3 points. The points scored by a competitor in January, February and March competitions will be totalled up and the prizes will be awarded in the order of the total number of points secured by each competitor. The First prize is Rs. 7-8-0, second Rs. 5-0-0 and third Rs. 2-8-0 June, July and August entries will be awarded prizes in September and September, October, November and December entries will be awarded prizes in January.

11. The decision of the Editorial Committee is final and binding on all the competitors.

12. The Editorial Committee of the "Mysore Scout" will have the right to publish or republish the prints as they are and in any size they choose.

13. The prints that are sent for the competition should be solely for the "Mysore Scout" but after they are once published in the magazine or finally rejected, the competitor is at liberty to make use of the negative or print in any way he likes, subject to the rights of the "Mysore Scout" as regards publication and republication.

14. Entries that do not satisfy all the above-named conditions will not be accepted for the competition.

—EDITOR.

(COUPON ON NEXT PAGE)

THE "MYSORE SCOUT"
Photographic Competition—August 1937

Name of Competitor..Rank in Scouting..............................

Address..

Number of entries....................Negatives developed by...

Prints made by..

I, the competitor above named, on my honour declare, that the exposures relating to these entries were made by me unaided.

Date.............................. Signature...
(In the case of Cubs, Scouts, and Rovers)

I,.............................Master/Leader of....................(Pack, Troop or Crew)....................

(Place) certify to the truth and correctness of the statements made above.

Date............................. Signature...
(C.M., S.M. or R.L.)

Send this coupon along with your prints to reach the Editor, Mysore Scout, Tumkur before the 20th of September 1937.

Headquarters' Notices.

Director of Public Instruction's letter No. T.B.C. 299/36 7 dated 6th/18th August 1937 to the Organising Secretary, Boy Scouts of Mysore.

With reference to his letter No 175-72/36-7 dated 16th June 1937 regarding patronage to his monthly Journal *Mysore Scout*, has the honour to state that it is recommended for the libraries of High, Middle and District Normal Schools and Training Colleges.

(Sd.) R. JAGANNATHA RAO,
For Director.

Dasara Procession Contingent.

As usual, the Boy Scouts will have the privilege of joining the Dasara Procession and thus exhibit their loyalty to their beloved Ruler. The Headquarters Executive Committee have resolved to request the Districts to depute at least 10 Rover Scouts and elderly Scouts to join the Contingent. The District Scout Commissioners are requested to make arrangements for training as big a Contingent as possible with the help of local Military or Police forces.

Scout-craft Exhibition.

The Boy Scouts will have a stall for themselves at the All-India Exhibition to be held at Mysore during the Dasara Festivities. All Commissioners, Secretaries, Scouters and Scouts are requested to contribute their best

and make the Exhibition a success. All exhibits should be forwarded by the Units to Rao Saheb M. Ramaswamy, Secretary, District Scout Council, Mysore through the respective District Scout Commissioners.

Preliminary Training Camp for Scoutmasters.

It has been arranged to hold a Preliminary Training camp for Scoutmasters in Bangalore in the near future. Gentlemen who wish to undergo the training may apply through their respective District Scout Commissioners.

Cub Wood-Badge Course.

It is under contemplation to hold a Wood-Badge Course for Cubmasters in the State. The camp fee for the course will be Rs. 7-8-0 per head. Cubmasters who are running Cub packs for the last one year or more alone need apply through their District Scout Commissioners.

The Recognition Certificate for holding District Training Camps.

Forms are now available in the Headquarters and will be supplied to the Districts if and when required.

Warrants.

The Scouters not holding warrants are requested to apply to their respective District Scout Commissioners and get the Warrants immediately. The holders of Warrants who have not renewed are requested to get them renewed immediately. They are reminded that all Warrants should be returned to Headquarters through their District Scout Commissioners for renewal on 3rd October every year. The Services of Scouters will not be recognised unless they are in possession of Fresh Warrants, signed by the Chief Scout.

Registration.

The Scouters are requested to apply to their respective District Scout Commissioners for all forms and issue and renewal of their Warrants. For their supplies of forms, charts etc., they must write to their District Scout Commissioners and not to this office. The applications made direct to this office will have to be redirected to the District Commissioners which means a lot of delay and unnecessary correspondence.

Postal Concession.

Letter No. D. Dis. 4155-429 of 36-37, dated 25th August 1937 from the Director Public Instruction in Mysore, Bangalore to the Organising Secretary, Boy Scouts of Mysore, Bangalore.

With reference to his letter No. A. 120-55 of 36-37 dated 17th Merch 1937, regarding the free transmission of correspondence of the Boy Scout Office on Mysore Government Service, has the honor to state that the Development Secretary in his letter No. D. 1453/P. & T. 5-36-18, dated 9/10th August 1937 states that the official correspondence of the Boy Scout Movement may continue to be posted " On Mysore Government Service."

(Sd,) M. V. SUNDARESAN,
For Director.

BOYS' SECTION
ಹುಡುಗರ ಪ್ರಕರಣ

ಪೆಟ್ರೋಲ್ ಲೀಡರಿಗೊಂದು ಕಾಗದ.

(ರೋಲ್ಯಾಂಡ್ ಇ. ಫಿಲಿಪ್ಸ್‌ರವರ ಪುಸ್ತಕದ ಅನುವಾದ)

ಶ್ಯಾಮೂ,

ನಿನ್ನೆ ಸಾಯಂಕಾಲ ನಾನು ಹೊರಗೆ ಹೊರಟಾಗ ಇಬ್ಬರು ಮನುಷ್ಯರು ಸೇರಿ ಒಬ್ಬನನ್ನು ಹೊತ್ತುಕೊಂಡು ಬರುತ್ತಿದ್ದರು. ಅವನು ನಿಂತುಕೊಳ್ಳಲಾರ. ಯಾಕೆಂದರೆ ಅವನು ಬಹಳವಾಗಿ ಕುಡಿದು ಬಿಟ್ಟಿದ್ದನು. ಅವನು ನಮ್ಮೂರಿನಲ್ಲೆಲ್ಲಾ ಹೊಲಸಾಗಿರುವ ಸ್ಥಳದಲ್ಲಿರುವ ಒಂದು ಸಾರಾಯಿ ಅಂಗಡಿಯಲ್ಲಿಯೇ ಸಾಯಂಕಾಲವನ್ನೆಲ್ಲಾ ಕಳೆದಿದ್ದನು. ಅವನು ತನಗೆ ಕುಡಿಯಲು ಸಾರಾಯಿ ಬೇಕೆಂದು ತಿಳಿದುಕೊಂಡು ಆ ಅಂಗಡಿಯೊಳಗೆ ಹೋದನು. ಅವನಿಗೆ ನಿಜವಾಗಿಯೂ ಬೇಕಾಗಿದ್ದುದು ಸಾರಾಯಿಯಲ್ಲ. ಒಬ್ಬ ಸ್ನೇಹಿತ.

ಚಳಿಗಾಲದಲ್ಲಿ ಒಂದು ದಿನ ರಾತ್ರಿ ಬಹಳ ಕಳೆದ ಮೇಲೆ ನಾನು ಅಂಗಡಿ ಬೀದಿಯಲ್ಲಿ ಹೋಗುತ್ತಿದ್ದೆನು. ಅಲ್ಲಿ ರಸ್ತೆಯ ಪಕ್ಕದಲ್ಲಿ ಹೋಗುವುದಕ್ಕೆ ಮನೆಯೂ ಮಲಗುವುದಕ್ಕೆ ಹಾಸಿಗೆಯೂ ಇಲ್ಲದ ಅನೇಕರು ಎಚ್ಚರವಿಲ್ಲದೆ ಬಿದ್ದಿದ್ದರು. ಎಷ್ಟೋ ರಾತ್ರಿಗಳು ಅವರು ಅಲ್ಲಿಯೇ ಮಲಗುವುದು. ಅವರಿಗೆ ಎಂದೂ ಬೇರೆಮಾರ್ಗವೇ ಇರಲಿಲ್ಲ. ಅವರಿಗೆ ಸರಿಯಾದ ಸ್ನೇಹಿತನೊಬ್ಬನು ಸಿಕ್ಕಿದ್ದರೆ ಬೇರೆದಾರಿ ಕಾಣಿಸುತ್ತಿತ್ತು.

ಹದಿನೆಂಟು ವರುಷದ ಒಬ್ಬ ಹುಡುಗನು ಅಂಗಡಿಯಲ್ಲಿ ಏನೋ ಕಳವು ಮಾಡಿದ್ದಕ್ಕಾಗಿ ಅವನನ್ನು ಮ್ಯಾಜಿಸ್ಟ್ರೇಟರ ಮುಂದೆ ತಂದು ನಿಲ್ಲಿಸಿದರು. ಅವನು ಹಿಂದೆ ಹನ್ನೊಂದು ಬಾರಿ ಕದ್ದಿದ್ದನು. ಮುಂದೆ ಪುನಃ ಹನ್ನೊಂದು ಬಾರಿ ಕದಿಯುವುದರಲ್ಲಿ ಏನೂ ಸಂದೇಹವು ತೋರಲಿಲ್ಲ. ಅವನು ಎಂದೂ ಮತಾಚಾರಕ್ಕೆ ಗಮನಕೊಟ್ಟವನಲ್ಲ. ಮತ್ತು ಅವನಿಗೆ ಅವನು ಹುಟ್ಟಿದಾರಭ್ಯ ಯಾರೂ ಒಂದು ಒಳ್ಳೆಯ ಮಾತನ್ನಾಡಿರಲಿಲ್ಲ.

ಇವನನ್ನು ತಿದ್ದುವುದಕ್ಕೆ ಯಾವುದೋ ಒಂದು ಸ್ಥಳಕ್ಕೆ ಕಳುಹಿಸಬೇಕೆಂದು ಕೆಲವರೂ ಬೇರೆ ಇನ್ನೊಂದು ಸ್ಥಳಕ್ಕೆ ಕಳುಹಿಸಬೇಕೆಂದು ಕೆಲವರೂ ಹೇಳಿದರು. ಅವನಿಗೆ ನಿಜವಾಗಿ ಬೇಕಾಗಿದ್ದುದು ಅದಾವುದೂ ಅಲ್ಲ. ಕೇವಲ ಒಬ್ಬ ಸ್ನೇಹಿತ ಮಾತ್ರ ಬೇಕಾಗಿತ್ತು.

ನಾವು ಯಾವ ದಿಕ್ಕಿಗೆ ಹೋಗಲಿ, ಹಳ್ಳಿಗೆ ಹೋಗಲಿ, ಪಟ್ಟಣಕ್ಕೆ ಹೋಗಲಿ ದೇವರು ಕೊಟ್ಟಿರುವ ಸ್ನೇಹಿತನೆಂಬ ಅಮೂಲ್ಯವಾದ ವಸ್ತುವಿನ ಅವಶ್ಯಕತೆಯಿರುವ ಗಂಡಸರು, ಹೆಂಗಸರು ಮತ್ತು ಮಕ್ಕಳನ್ನು ಕಾಣುತ್ತೇವೆ.

ಹಾಗಾದರೆ ಈ ಸ್ನೇಹಿತರು ಎಲ್ಲಿ ದೊರೆಯಬೇಕು? "ನಮ್ಮಲ್ಲಿ ಒಂದು ವಿಧಿಯಿದೆ. ಅದು ಸ್ಕೌಟು ಎಲ್ಲರಿಗೂ ಸ್ನೇಹಿತನೆಂದು ಹೇಳುತ್ತದೆ" ಎಂಬುದೇ ನಮ್ಮ ಉತ್ತರ.

ಕೆಲವರು ಈ ನಾಲ್ಕನೆಯ ನಿಯಮವು ಕ್ರಿಯೆಗೆ ಸಂಬಂಧ ಪಟ್ಟದ್ದಲ್ಲವೆಂದು ಅಭಿಪ್ರಾಯ ಪಡುತ್ತಾರೆ.

ಮೂರನೇ ನಿಯಮವು ನೀವು ಹುಡುಕಿ ಹುಡುಕಿ ಪರೋಪಕಾರವನ್ನು ಮಾಡುತ್ತಿರಬೇಕೆಂದು ಹೇಳುತ್ತದೆ. ಆರನೇ ನಿಯಮವು ನಿಮ್ಮ ಪರೋಪಕಾರವು ಮೂಕ ಪ್ರಾಣಿಗಳ ಕಡೆಗೆ ಕೂಡ ಹರಿಯಬೇಕೆಂದು ಹೇಳುತ್ತದೆ. ಒಂಭತ್ತನೇ ನಿಯಮವು ನೀವು ಸಂಪಾದನೆ ಮಾಡುವುದರಲ್ಲಿ ಕೆಲವು ಭಾಗವನ್ನು ಉದ್ದೇಶ ಪೂರ್ವಕವಾಗಿ ಉಳಿಸಿಡಬೇಕೆಂದು ಹೇಳುತ್ತದೆ. ನಾಲ್ಕನೆಯ ನಿಯಮದ ವಿಚಾರದಲ್ಲಿ ನಾವು ಯಾವುದನ್ನೂ ಕಾರ್ಯತಃ ಮಾಡಬೇಕಾದ್ದಿಲ್ಲವೆಂತಲೂ ಆ ವಿಚಾರದಲ್ಲಿ ನಾವು ಏನೂ ತೊಂದರೆ ತೆಗೆದುಕೊಳ್ಳಬೇಕಾದ್ದಿಲ್ಲವೆಂತಲೂ, ನಾವು ಇತರ ಸ್ಕೌಟುಗಳೊಂದಿಗೆ ಒಳ್ಳೇ ಮಾತುಗಳನ್ನಾಡಿಕೊಂಡಿದ್ದರೆ ಎಲ್ಲವನ್ನೂ ಮಾಡಿದಂತಾಗುತ್ತದೆಂತಲೂ ಕೆಲವರು ಭಾವಿಸುತ್ತಾರೆ.

ಈ ಅಭಿಪ್ರಾಯವು ಬಹಳ ತಪ್ಪಾದದ್ದು. ನಾಲ್ಕನೆಯ ನಿಯಮವು ಇತರ ನಿಯಮಗಳಿಗಿಂತಲೂ ಹೆಚ್ಚಾಗಿ ಕಾರ್ಯಗಳಿಗೆ ಸಂಬಂಧಪಟ್ಟದ್ದು. "ಕಿಂ" ಎಂಬುವನು (ರಡ್ಯಾರ್ಡ್ ಕಿಪ್ಲಿಂಗ್‌ರವರ ಇದೇ ಹೆಸರಿನ ಪುಸ್ತಕದಲ್ಲಿ ಬರುವ ಮುಖ್ಯ ಪಾತ್ರ) ಸಂಪಾದಿಸಿದ ಹೆಸರನ್ನು—"ಸರ್ವ ಪ್ರಪಂಚದ ಚಿಕ್ಕ ಸ್ನೇಹಿತ" ಎಂಬುದನ್ನು—ಪ್ರತಿಯೊಬ್ಬ ಸ್ಕೌಟೂ ಸಂಪಾದಿಸಿಕೊಳ್ಳಬೇಕೆಂಬುದು ಚೀಫ್ ಸ್ಕೌಟ್‌ರವರ ಅಪೇಕ್ಷೆ.

ನೀವು ಈ "ಕಿಂ" ಎಂಬುವನ ವಿಚಾರವನ್ನೋದಿದರೆ ಅವನು ಕೆಲಸ ಮಾಡದೆ ಮೂದೇವಿಯಾಗಿ ಒಂದು ಮೂಲೆಯಲ್ಲಿ ಕುಳಿತುಕೊಂಡವನಲ್ಲವೆಂಬುದೂ ಅವನು ತನ್ನಸುತ್ತಲೂ ಇದ್ದ ಇತರರ ಮಧ್ಯೆ ಯಾವಾಗಲೂ ಓಡಾಡಿ ಕೊಂಡಿದ್ದನೆಂಬುದೂ ನಿಮಗೆ ತಿಳಿಯುತ್ತದೆ.

ಯಾರಿಗೆ ಸ್ನೇಹಿತರು ಅತ್ಯವಶ್ಯಕವಾಗಿ ಬೇಕೋ ಅವರಿಗೆ ನಾವು ಸ್ನೇಹಿತರಾಗಬೇಕು. ಉದ್ದೇಶಪೂರ್ವಕವಾಗಿ ಹುಡುಕಿಕೊಂಡುಹೋದ ಹೊರತು ಇಂಥವರು ಸ್ಕೌಟಿನ ಕಣ್ಣಿಗೆ ಬೀಳುವುದಿಲ್ಲ.

ನೀವು ನಿಮ್ಮ ಬಂಧುವರ್ಗ, ಮನೆ, ಪಾಠಶಾಲೆ, ಕಛೇರಿ, ಕಾರ್ಖಾನೆ ಅಥವಾ ಕ್ರೀಡಾ ಸಮಾಜ (cub) ಮುಂತಾದುವುಗಳಲ್ಲಿ ಎಲ್ಲಿಯಾದರೂ ಇರಲಿ, ನಿಮ್ಮ ಕಣ್ಣುಗಳನ್ನು ತೆರೆದು ನೋಡುವುದಾದರೆ ಒಬ್ಬನೋ ಅಥವಾ ಅದಕ್ಕಿಂತಲೂ ಹೆಚ್ಚು ಮಂದಿಯೋ ಕಂಗೆಟ್ಟು ಏನೋ ಒಂದು ರೀತಿಯಲ್ಲಿ ನಿರುತ್ಸಾಹಿಗಳಾಗಿರುವುದನ್ನು ಕಂಡು ಹಿಡಿದುಕೊಳ್ಳಬಹುದು.

ಅವರಿಗೆ ಒಂದೋ ಅಥವಾ ಇನ್ನೂ ಹೆಚ್ಚಾಗಿಯೋ ತೊಂದರೆಗಳು ಒದಗಿರಬಹುದು; ಅಥವಾ ಅಸ್ವಸ್ಥತೆಯಿರಬಹುದು; ಇಲ್ಲವೇ ಸಣ್ಣದೋ ದೊಡ್ಡದೋ ನಷ್ಟವುಂಟಾಗಿರಬಹುದು ಅಥವಾ ಅವರ ಮನಸ್ಸಿಗೆ ಬಹಳ ಜುಗುಪ್ಸೆಯಾಗಿರಬಹುದು. ಇಂಥಾ ಜನಗಳಲ್ಲಿಗೆ ಇಂಥಾ ಕಾಲಗಳಲ್ಲಿಯೇ ನೀವು ಸ್ಕೌಟುಗಳಾಗಿ ಹೋಗಬೇಕು.

ಯಾರು ಸ್ನೇಹಿತರಿಗಾಗಿ ದಾಹಪಡುತ್ತಿರುವರೋ ಅಂಥವರನ್ನು ನಾವು ಹುಡುಕಿ ಅವರಿಗೆ ಸ್ನೇಹಿತರಾಗಬೇಕು.

ಕೆಲವು ವರುಷಗಳ ಹಿಂದೆ ಒಬ್ಬ ದೊಡ್ಡ ಮನುಷ್ಯರು ಸಣ್ಣ ಹುಡುಗರಿಗೆ ಆಟಪಾಟಗಳಿಗಾಗಿ ಒಂದು ಸ್ಥಳವನ್ನು ಏರ್ಪಾಡುಮಾಡಿದ್ದರು. ಒಂದು ದಿನ ಹರಕು ಬಟ್ಟೆಗಳನ್ನು ಹಾಕಿಕೊಂಡಿದ್ದ ಒಬ್ಬ ಹುಡುಗನು ದಿನವೆಲ್ಲಾ ಕೆಲಸ ಮಾಡಿ ಸಾಯಂಕಾಲದಲ್ಲಿ ಎರಡು ಮೈಲಿ ದೂರದಲ್ಲಿದ್ದ ಆ ಸ್ಥಳಕ್ಕೆ ನಡೆದುಕೊಂಡು ಹೋಗುತ್ತಿ

ದ್ದನು. ದಾರಿಯಲ್ಲಿ ಸಿಕ್ಕಿದ ಮತ್ತೊಬ್ಬನು ಆ ಹುಡುಗನನ್ನು "ಅಷ್ಟು ದೂರ ಏತಕ್ಕೆ ಹೋಗುತ್ತೀಯೆ" ಎಂದು ಕೇಳಿದನು. ಅದಕ್ಕೆ ಆ ಹುಡುಗನು "ಅಲ್ಲೊಬ್ಬನಿದ್ದಾನೆ. ಅವನಿಗೆ ನಮ್ಮ ಮೇಲೆ ವಿಶ್ವಾಸ" ಎಂದು ಹೇಳಿದನು. ಉತ್ತರವೇನೋ ಚಿಕ್ಕದಾಗಿತ್ತು. ಆದರೂ ಅರ್ಥಗರ್ಭಿತವಾಗಿತ್ತು. ಇದಕ್ಕೂ ಹೆಚ್ಚು ಉತ್ತರ ಬೇಕಾಗಿದ್ದಿದ್ದರೆ ಅವನ ಹಸನ್ಮುಖದಲ್ಲಿಯೂ ಮತ್ತು ಅವನು ಹೆಜ್ಜೆಯಿಡುತ್ತಾ ಹೋದರೀತಿಯಲ್ಲಿಯೂ ವ್ಯಕ್ತವಾಗುತ್ತಿತ್ತು.

ದೇಶದಲ್ಲಿ ಮಾಡಲ್ಪಡುವ ಪಾಪಗಳು, ಕ್ರೂರ ಕರ್ಮಗಳು ಮತ್ತು ಅಪರಾಧಗಳು ಇವೆಲ್ಲವೂ ತಮ್ಮ ಆತ್ಮ ಗೌರವವನ್ನು ಕಳೆದುಕೊಂಡು ತಾವು ರುಜು ಮಾರ್ಗದಲ್ಲಿ ನಡೆಯಲಿ, ವಕ್ರಗತಿಯಲ್ಲಿ ಹೋಗಲಿ ತಮ್ಮನ್ನು ವಿಚಾರಿಸಿಕೊಂಡು ಕನಿಕರ ಪಡುವವರು ಯಾರೂ ಇಲ್ಲವೆಂತಲೂ ಮತ್ತು ತಮಗೆ ಯಾರೂ ಅಪ್ತರಿಲ್ಲವೆಂತಲೂ ತಿಳಿದುಕೊಂಡಿರುವವರಿಂದಲೇ ಮಾಡಲ್ಪಡುತ್ತವೆ.

ಈಗ ನಮ್ಮ ದೇಶದಲ್ಲಿ 2,00,000 ಸ್ಕೌಟುಗಳಿದ್ದದ್ದಾದರೆ ಇನ್ನೂ 2,00,000 ಇತರ ಕಾರಣಗಳಿಂದ ನಿರುತ್ಸಾಹಿಗಳಾದವರು ಸ್ವಲ್ಪವಾದರೂ ಸಂತೋಷವನ್ನು ತಂದುಕೊಂಡು "ಹೌದು, ನನಗೆ ಒಬ್ಬನಾದರೂ ಆಪ್ತನಿದ್ದಾನೆ. ಅವನೊಬ್ಬ ಸ್ಕೌಟ್. ಸ್ಕೌಟು ಎಲ್ಲರಿಗೂ ಸ್ನೇಹಿತನು. ನನಗೊಬ್ಬ ಸ್ಕೌಟಿನ ಪರಿಚಯವುಂಟು ಅವನು ನನ್ನ ಸ್ನೇಹಿತ" ಎಂದು ಹೇಳುವುದಾದರೆ ಎಷ್ಟು ಚೆನ್ನಾಗಿರುವುದು!

ಆಗಾಗ್ಗೆ ನಾವು ನಮ್ಮ ಟ್ರೂಪಿನಲ್ಲಿ ನಮಗಿಂತಲೂ ಕಡಮೆ ಸಂತೋಷವನ್ನು ಹೊಂದುತ್ತಿರುವವನು ಯಾರು ಎಂಬುದನ್ನು ಆಲೋಚಿಸುವುದು ಒಳ್ಳೆಯದು. ಹೀಗೆ ಮಾಡಿದರೆ ಅಂಥವರು ಸಾಮಾನ್ಯವಾಗಿ ಒಬ್ಬಿಬ್ಬರಾದರೂ ಕಂಡು ಬರುವರು.

ಬಹುಶಃ ಅವರಿಗೆ ನಿಮ್ಮಷ್ಟು ಉಲ್ಲಾಸವಿರಲಾರದು. ಅಥವಾ ಇತರ ಹುಡುಗರು ಅವರನ್ನು ಕಂಡರೆ ಹಾಸ್ಯಮಾಡುವಂತೆ ಅವರಿರಬಹುದು. ಅಥವಾ ಅವರು ತೃಣವನ್ನು ಪರ್ವತ ಮಾಡಿಕೊಂಡು ವ್ಯಥೆ ಪಡುವವರಿರಬಹುದು. ಇಲ್ಲವೇ ಆಟಗಳಲ್ಲಿ ಅವರಿಗೆ ಭಾಗವಹಿಸುವ ಯೋಗ್ಯತೆಯಿಲ್ಲದಿರಬಹುದು. ಇಂಥಾ ಸಂದರ್ಭಗಳಲ್ಲಿಯೇ ನಾಲ್ಕನೆ ನಿಯಮದ ಆಚರಣೆಗೆ ಅವಕಾಶ.

ನಿಮ್ಮ ಸ್ಕೌಟುಗಳು ಯಾರ ಮುಖದಲ್ಲಿ ನಗುವು ಬತ್ತಿ ಹೋಗಿರುವುದೋ ಯಾರ ಮುಖದ ಮೇಲೆ ದುಃಖ ಅಥವಾ ತೊಂದರೆಯ ಮುದ್ರೆಯು ಕಂಡು ಬರುವುದೋ ಅಂಥವರಲ್ಲಿಗೆ ಹೋಗಿ ಅವರು ಹಸನ್ಮುಖಿಗಳಾಗುವಂತೆ ಮಾಡುವರು.

ಇದರ ಪರಿಣಾಮವಾಗಿ ನೀವು ತೋರಿಸುವ ಭ್ರಾತೃ ಭಾವದಿಂದ ಮತ್ತು ಆ ರೀತಿ ಮಾಡಲು ನಿಮಗಿರುವ ಶಕ್ತಿ ಮತ್ತು ಅವಕಾಶದಿಂದ ಅವರು ಬಂಧಿಸಲ್ಪಟ್ಟು ಜೀವನದಲ್ಲಿ ಸಂತೋಷವನ್ನು ಪಡೆಯುವರು.

ಒಬ್ಬ ಸ್ಕೌಟು ಇನ್ನೊಬ್ಬ ಸ್ಕೌಟನ್ನು ಸಂಧಿಸಿದಾಗ ಅವನು ಅಪರಚಿತನಾಗಿದ್ದಾಗ್ಯೂ ಅವನೊಡನೆ ಮಾತನಾಡಿ ತನ್ನ ಕೈಲಾದ ಮಟ್ಟಿಗೆ ಅವನಿಗೆ ಅವಶ್ಯಕವಾದ ಸಹಾಯವನ್ನು ಮಾಡಬೇಕು.

ನೀನು ಸ್ಕೌಟ್ ಪದಕ (Badge) ವನ್ನು ಯಾವಾಗಲೂ ಧರಿಸಿರುವುದು ಬಹಳ ಮುಖ್ಯವಾದುದು. ನೀನು ನಿನ್ನ ಉಡುಪನ್ನು ಬದಲಾಯಿ

ಸಿದಾಗಲೆಲ್ಲಾ ಈ ಪದಕವನ್ನು ಹೊಸ ಬಟ್ಟೆಯ ಮೇಲೆ ಧರಿಸುವುದು ಜ್ಞಾಪಕದಲ್ಲಿರಲಿ. ಆಗ ನೀನು ದಾರಿಯಲ್ಲಿ ಹೋಗುತ್ತಿದ್ದರೆ ನಿನ್ನನ್ನು ಇನ್ನೊಬ್ಬ ಸ್ಕೌಟು ನೋಡಿದರೆ ಮುಮ್ಮೊಗವಾದ ಭಾಷೆಯ ಗುರುತಾದ ಈ ಪದಕವು ಅವನ ಕಣ್ಣಿಗೆ ಬೀಳುತ್ತದೆ.

ಈ ಹುಡುಗನು ನಿನಗೆ ವಂದನೆ ಮಾಡುವುದರ ಮೂಲಕ ನಿನ್ನ ಪರಿಚಯವನ್ನು ಪಡೆಯುತ್ತಾನೆ. ಅವನ ನಿಯಮಗಳೇ ನಿನ್ನ ನಿಯಮಗಳೆಂಬುದೂ, ನೀನೂ ಅವನೂ ಹಿಂದೆ ಎಂದೂ ಸಂಧಿಸಿಲ್ಲದಿದ್ದರೂ ಮುಂದೆ ಎಂದೂ ಸಂಧಿಸುವ ಸಂಭವವಿಲ್ಲದಿದ್ದರೂ ನೀವಿಬ್ಬರೂ ನಿಮ್ಮ ಜೀವನದಲ್ಲಿ ಒಂದೇ ಧ್ಯೇಯವನ್ನಿಟ್ಟುಕೊಂಡು ಅದನ್ನು ಸಾಧಿಸುವುದಕ್ಕೆಪ್ರಯತ್ನಿಸುತ್ತಿರುತ್ತೀರೆಂಬುದನ್ನು ತಿಳಿದುಕೊಳ್ಳುವೆ.

ಅವನನ್ನು ಸಂಧಿಸುವುದಕ್ಕೆ ಮುಂಚೆ ಸ್ಕೌಟ್ ನಿಯಮಗಳಿಗನುಸಾರವಾಗಿ ನಡೆಯುವುದು ಎಷ್ಟು ಕಷ್ಟವೆಂದು ನೀನು ಯೋಚಿಸುತ್ತಿದ್ದಿರಬಹುದು. ಈಗ ಅದಕ್ಕಾಗಿ ಪ್ರಯತ್ನಿಸುವವನು ಇನ್ನೂ ಒಬ್ಬನಿದ್ದಾನೆಂದು ತಿಳಿದುದರಿಂದ ಅದು ಈಗ ಹೆಚ್ಚು ಸುಲಭವಾಯಿತು.

ನೀನು ನಿನ್ನ ಮನಃಪೂರ್ವಕವಾಗಿ ನಿನ್ನ ಎಡಗೈಯಿಂದ ಅವನ ಎಡಗೈ ಹಿಡಿದು ಅಲ್ಲಾಡಿಸುವೆ. ಇದರ ಅಭಿಪ್ರಾಯವು ನಿನ್ನ ಹೃದಯವನ್ನು ಅವನಿಗೆ ಕೊಟ್ಟಂತೆ. ಅದನ್ನು ಅವನಿಗೆ ಕೊಡಬೇಕೆಂಬುದೇ ನಿನ್ನ ಆಕಾಂಕ್ಷೆ.

ಪ್ರಪಂಚವು ಪ್ರಾರಂಭವಾದಂದಿನಿಂದ ಆಗಿ ಹೋಗಿರುವ ಪವಿತ್ರವಾದ ಸ್ನೇಹದ ಕಥೆಗಳನ್ನು ಚರಿತ್ರೆಗಳಲ್ಲಿ ಕಂಡು ಬಂದಂತೆ ನೀನು ನಿನ್ನ ಪೆಟ್ರೋಲಿನವರಿಗೆ ತಿಳಿಸುವೆ. ಆದುದರಿಂದ ನಾನು ಇನ್ನು ಹೆಚ್ಚು ಹೇಳುವುದಿಲ್ಲ. ಯಾಕೆಂದರೆ ನಾಲ್ಕನೇ ನಿಯಮವನ್ನು ಸರಿಯಾಗಿ ನಡೆಸಿಕೊಂಡು ಬರುವುದೆಂದರೆ ಐದನೇ ನಿಯಮಕ್ಕೂ ಅನುಸಾರವಾಗಿ ನಡೆಯಲೇಬೇಕು. ಅದನ್ನು ಕುರಿತು ನನ್ನ ಮುಂದಿನ ಕಾಗದದಲ್ಲಿ ಬರೆಯುತ್ತೇನೆ.

ನಿನ್ನ ಸಹೋದರ
ಎಸ್. ಬಿ.

ಮರಿಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ನಾವು ಮರಿಗಳ ಶಿಕ್ಷಣದ ಉದ್ದೇಶಗಳನ್ನು ವಿಮರ್ಶೆ ಮಾಡಿದಾಗ ಅದು ಭಾವೀ ಪ್ರಜೆಗಳ ಕಾರ್ಯನಿರ್ವಾಹಕ ಶಕ್ತಿಯನ್ನು ಅಭಿವೃದ್ಧಿಗೊಳಿಸುವುದೆಂತ ನಿರ್ಧಾರಮಾಡಿದ್ದೇವೆ. ಈ ಸಾಮಾನ್ಯ ಅಭಿಪ್ರಾಯವು ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಡಬಹುದು. ನಡತೆ ಅಥವಾ ಶೀಲ (Character) ಶರೀರ ದಾರ್ಢ್ಯ (Physical health) ಕೈಕೆಲಸದ ಚಟುವಟಿಕೆ (Handcraft skill) ಸಹಾಯಪರತೆ (Helpfulness). ಈ ನಾಲ್ಕು ಮುಖವಾದ ಉದ್ದೇಶಗಳನ್ನು ಒಂದೇ

ಸಮವಾಗಿ ಪಡೆಯುವುದಕ್ಕಾಗುವಂತೆ ಮರಿಗಳ ಶಿಕ್ಷಣವು ಒಟ್ಟಿನಲ್ಲಿ ವಿಧಾಯಕವಾಗಿದೆ. ಅದನ್ನು ಪರಸ್ಪರ ಸಂಬಂಧವಿಲ್ಲದ ಭಾಗಗಳನ್ನಾಗಿ ವಿಭಾಗಿಸುವುದು ಸಾಧ್ಯವಿಲ್ಲ. ಮತ್ತು ಶಿಕ್ಷಣದ ಹಿಂದೊಂದು ಭಾಗದಿಂದ ಮೇಲೆ ಹೇಳಿರುವವುಗಳಲ್ಲಿ ಇಂಥಾ ಒಂದೇ ಉದ್ದೇಶವೇ ಸಾರ್ಥಕವಾಗುತ್ತದೆಂತಲೂ ಹೇಳುವುದಕ್ಕಾಗುವುದಿಲ್ಲ. ಆದರೂ ಶಿಕ್ಷಣದಲ್ಲಿ ಯಾವ ಕೆಲಸವಾಗಲಿ ಸಾಮಾನ್ಯ ಉದ್ದೇಶದ ಯಾವುದಾದರೂ ಒಂದು ಗೊತ್ತಾದ ಫಲಕ್ಕೆ ಬಹಳ ಮಟ್ಟಿಗೆ ಸಂಬಂಧಿಸಿರುತ್ತದೆಂತ ಹೇಳಬಹುದು. ಬೇರೆ ರೀತಿಯಲ್ಲಿ ಹೇಳುವುದಾದರೆ ಮೇಲೆ ಹೇಳಿದ ನಾಲ್ಕು ಮುಖವಾದ ಉದ್ದೇಶದಲ್ಲಿ ಯಾವ ಭಾಗವೇ ಆಗಲಿ ಶಿಕ್ಷಣ ಕ್ರಮದ ಇಂಥಾ ಅಂಶಗಳ ಅಥವಾ ಕೆಲಸಗಳ ಮೂಲಕ ಸಫಲವಾಗುವುದೆಂತ ಹೇಳಬಹುದು. ಉದಾಹರಣೆಗಾಗಿ, ಆಟಗಳು ಶರೀರ ದಾರ್ಢ್ಯಕ್ಕೆ ಸಂಬಂಧಪಟ್ಟವು. ಅವುಗಳಿಂದ ಶರೀರದ ಚಟುವಟಿಕೆಯಾಗುವುದಲ್ಲದೆ ಹಿಂಡಿಗೆ ಸಂಬಂಧಪಟ್ಟ ಅನೇಕ ಸದ್ಗುಣಗಳೂ ಉಂಟಾಗುವುವು.

ಮರಿಯ ವ್ಯಕ್ತಿಸಂಬಂಧವಾದ ಅಭಿವೃದ್ಧಿಯನ್ನು ನಾವು ಪರಿಶೀಲನೆ ಮಾಡಿದರೆ ಅದರ ಮೇಲೆ ಪರಿಣಾಮವನ್ನುಂಟುಮಾಡುವ ಅಂಶಗಳು ನಾಲ್ಕು ಎಂದು ನಾವು ಕಂಡುಹಿಡಿಯಬಹುದು ಅವು ಯಾವುವೆಂದರೆ:—

೧. ಆಕೇಲನ ವ್ಯಕ್ತಿಸಂಬಂಧವಾದ ನಡತೆ ಮತ್ತು ಅವನ ಆದರ್ಶ.

೨. ಹಿಂಡಿನಶಿಸ್ತು ಮತ್ತು ಸಂಮಿಳಿತ ಜೀವನ (corporate life)

೩. ಪ್ರಕೃತಿ ವಿಮರ್ಶೆ.

೪. ಕಥಾನಿರೂಪಣ.

ಈ ಕಥಾನಿರೂಪಣವೆಂಬುದು ಗತಿಸಿಹೋದ ಕಲೆಯಾಗಿತ್ತು. ಈಚೆಗೆ ನಾವು ಮಕ್ಕಳ ಶಿಕ್ಷಣದಲ್ಲಿ ಅದಕ್ಕಿರುವ ಬೆಲೆಯನ್ನು ಸ್ವಲ್ಪ ಸ್ವಲ್ಪವಾಗಿ ತಿಳಿದುಕೊಳ್ಳುತ್ತಿದ್ದೇವೆ. ಹಿಂಡಿನ ಕ್ರಮದಲ್ಲಿ ಅದರ ಅವಶ್ಯಕತೆಯ ವಿಚಾರವಾಗಿ ಇಲ್ಲಿ ಹೆಚ್ಚು ವಾದ ಮಾಡಬೇಕಾಗಿಲ್ಲ. ಕಥಾನಿರೂಪಣ ಮತ್ತು ಆಟಗಳು ನಮ್ಮ ಶಿಕ್ಷಣದ ಹೆಗ್ಗುರುತುಗಳಾಗಿವೆ. ಈ ವಿಚಾರದಲ್ಲಿ ಅಂದರೆ ಕಥಾನಿರೂಪಣದ ಬೆಲೆಯ ವಿಚಾರದಲ್ಲಿ ನಿಮಗೇನಾದರೂ ಸಂದೇಹವಿದ್ದಲ್ಲಿ ನೀವು ಮಿಸ್. ಬಾರ್ಕ್ಲೆಯವರಿಂದ ಬರೆಯಲ್ಪಟ್ಟಿರುವ “ತೋಳದ ಮರಿಗಳ ಹಿಂಡಿನಲ್ಲಿ ನಡತೆಯ ಶಿಕ್ಷಣ” (Character Training in the Wolf Cub Pack) ಎಂಬ ಪುಸ್ತಕವನ್ನು ಓದಿರಿ.

ಅಲ್ಲಿ ಇದರ ಪಕ್ಷವಾಗಿ ಹೇಳಲ್ಪಟ್ಟಿರುವ ಮುಖ್ಯವಾದ ವಾದಗಳು ಯಾವುವೆಂದರೆ:— ಕಥೆಗಳು ಮರಿಯ ಅನುಭವಕ್ಕೆ ಮುಖ್ಯವಾದ ಆಧಾರವಾಗಿರುತ್ತವೆ. ಅವನಿಗೆ ಜೀವನದಲ್ಲಿ ವ್ಯಕ್ತವಾದ ಮತ್ತು ಪ್ರವೃತ್ತಿ ರೂಪವಾದ ಉತ್ಸಾಹವನ್ನು ಹುಟ್ಟಿಸುತ್ತವೆ. ಅವನ ಆಶೆಯನ್ನು ಉದ್ರೇಕಗೊಳಿಸಿ ಘನವಾದ ಧ್ಯೇಯಗಳು ಅವನ ಮನಸ್ಸಿನಲ್ಲಿ ಮೊಳೆಯುವಂತೆ ಮಾಡುತ್ತವೆ. ಯಾವ ಧರ್ಮಾಧರ್ಮ ಪರಿಜ್ಞಾನದ ಮೇಲೆ ನಮ್ಮ ಮನುಷ್ಯ ಜೀವನವೆಂಬುದು ನಿಂತಿದೆಯೋ ಅಂಥಾ ಮೂಲತತ್ವಗಳನ್ನು ಅವನ ಆತ್ಮದ ಒಂದು ನಿಸರ್ಗವಾದ ಅಂಶವನ್ನಾಗಿ ಮಾಡುತ್ತವೆ. “ಅನುಭವ, ಉತ್ಸಾಹ, ಆಸೆ, ನಿರ್ಧಾರ, ತತ್ವಗಳು ಮತ್ತು ಧ್ಯೇಯಗಳು ಇವುಗಳ ಒಟ್ಟುಗೂಡುವಿಕೆಯಲ್ಲದೆ ಶೀಲವೆಂಬುದು ಬೇರೆ ಯಾವುದುಂಟು”?

ಅಂದರೆ ಹಿಂಡಿನ ಕಾರ್ಯಕ್ರಮದಲ್ಲಿ ಕಥಾ ನಿರೂಪಣಕ್ಕೆ ಒಂದು ಸ್ಥಾನವು ಗೊತ್ತಾಯಿತು. ಪ್ರತಿಯೊಂದು ಕೂಟದಲ್ಲಿಯೂ ಒಂದಾದರೂ ಕಥೆಯಿದ್ದೇ ತೀರಬೇಕೆಂಬುದು ನಮ್ಮ ಧ್ಯೇಯವಾಗಿರಬೇಕು. ಇದನ್ನು ಕಾರ್ಯತಃ ಸಫಲ ಮಾಡಿಕೊಳ್ಳುವುದಕ್ಕೆ ನಿಜವಾಗಿಯೂ ಯಾವ ಆಂತಕವೂ ಇರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಒಂದು ವಾರಕ್ಕೆ ಎರಡು ಮೂರು ವೇಳೆ ಹಿಂಡು ಕೂಡಬಹುದು. ಒಂದೆರಡು ಕೂಟಗಳಲ್ಲಿ ನಿರ್ದಿಷ್ಟವಾದ ಕೆಲವು ಕಾರ್ಯಗಳು ನಡೆಯಬೇಕಾಗಿರಬಹುದು. ಇಂಥಾ ಸಂದರ್ಭಗಳಲ್ಲಿ ಒಂದು ಅಥವಾ ಎರಡು ಕೂಟಗಳಲ್ಲಿಯಾದರೂ ಕಥೆಯಿದ್ದೇ ತೀರಬೇಕು. ಪ್ರಾತಃ ಕಾಲದಲ್ಲಿ ಕೂಟಗಳು ಸೇರಿದರೆ ಆಗ ಏನಾದರೂ ಶರೀರಕ್ಕೆ ಲವಲವಿಕೆಯುಂಟಾಗುವ ಕೆಲಸಗಳನ್ನು ಮಾಡಬೇಕೆಂಬ ಆಶೆಯುಂಟಾಗುವುದರಿಂದ ಅಂಥಾ ಕಾಲಗಳಲ್ಲಿ ಬೇಕಾದರೆ ಕಥೆಯನ್ನು ಬಿಡಬಹುದು. ಯಾವ ಸಂದರ್ಭದಲ್ಲಿಯೇ ಆಗಲಿ ವಾರಕ್ಕೊಂದು ಕಥೆಯು ಇರಲೇ ಬೇಕು.

ಕೆಲವರಿಗೆ ಕಥೆ ಹೇಳುವ ಶಕ್ತಿಯು ದೈವದತ್ತವಾಗಿರುತ್ತದೆ. ಅವರು ಹುಟ್ಟುವಾಗಲೇ ಕಥೆ ಹೇಳುವ ಶಕ್ತಿಯನ್ನು ಜೊತೆಯಲ್ಲಿ ತಂದಿರುತ್ತಾರೆ. ಅಂಥವರಿಗೆ ಕಥೆಗಳ ಭಂಡಾರದ ಬೀಗದ ಕೈ ಸಿಕ್ಕಿರುತ್ತದೆ. ನಾನಾದರೋ ಅಷ್ಟು ಅದೃಷ್ಟ ಶಾಲಿಯಲ್ಲ; ನನಗೆ ಕಥೆ ಹೇಳುವ ಶಕ್ತಿಯು ಸ್ವಾಭಾವಿಕವಾಗಿ ಬಂದಿಲ್ಲ. ಅದಕ್ಕೋಸ್ಕರವೇ ನಾನು ನಿಮಗೆ ಸಹಾಯ ಮಾಡಬೇಕೆಂದು ಹೊರಟಿರುವೆನು. (ಇದು ನಿಮಗೆ ಸ್ವಲ್ಪ ಮಟ್ಟಿಗೆ ವಿಸ್ಮಯವನ್ನುಂಟು ಮಾಡಬಹುದು.) ಯಾಕೆಂದರೆ ಯಾರೇ ಆಗಲಿ ಸ್ವಲ್ಪ ಶ್ರಮಪಟ್ಟು ಅಭ್ಯಾಸ ಮಾಡಿದರೆ ಚೆನ್ನಾಗಿ ಕಥೆ ಹೇಳುವುದನ್ನು ಕಲಿತುಕೊಳ್ಳಬಹುದು. ಅಷ್ಟಕ್ಕೂ ನಿಮಗೆ ಶಕ್ತಿಯಿಲ್ಲವೆಂತ ಕಂಡು ಬಂದರೆ (ಇದು ನಿಜವಿರಲಾರದು) ನೀವು ಕಥೆಗಳನ್ನು ಓದಿ ಹೇಳಬಹುದು. ಕಥೆಯನ್ನು ಹೇಳುವುದು ಓದುವುದಕ್ಕಿಂತಲೂ ಉತ್ತಮವಾದದ್ದು. ಆದರೆ ಕಥೆಯೇ ಇಲ್ಲದಿರುವುದಕ್ಕಿಂತಲೂ ಅದನ್ನು ಓದುವುದಾದರೂ ಮೇಲು.

ನಮಗಿರುವ ಕಷ್ಟವೇನೆಂದರೆ ನಮ್ಮನ್ನು ನಾವು ಮರೆತುಕೊಳ್ಳುವ ಗುಣದ ಅಭಾವ. ಇದಕ್ಕೆ ಅರ್ಥವೇನೆಂದರೆ (೧) ನಾವು ಯಾರು ಏನೆಂದುಕೊಳ್ಳುತ್ತಾರೋ ಎಂದು ಹೆದರಿಕೊಳ್ಳುವುದು "ಸಭಾಕಂಪ" ವೆಂದಾದರೂ ಹೇಳಬಹುದು. ಆಗ ನಮ್ಮ ಬುದ್ಧಿಯು ಮುಂದೆ ಹೋಗುವುದೇ ಇಲ್ಲ. (೨) ಅಥವಾ ನಾವು ನಮ್ಮ ಅಂತಸ್ತು ಯೋಗ್ಯತೆ ಮುಂತಾದ ವಿಚಾರಗಳನ್ನು ಮನಸ್ಸಿಗೆ ತಂದುಕೊಳ್ಳುತ್ತೇವೆ. ನಾವು ಹೇಳುವ ಕಥೆಯಲ್ಲಿ ನಾವು ಮಗ್ನರಾಗುವುದಿಲ್ಲ.

ಇವುಗಳಲ್ಲಿ ಮೊದಲನೆಯದಕ್ಕೆ ಕಥೆಯನ್ನು ಮೊದಲು ಕಂಠ ಪಾಠಮಾಡುವುದೇ ತಕ್ಕ ಪರಿಹಾರ. (ಕಾಡಿನ ಪುಸ್ತಕದಲ್ಲಿರುವ ಕಥೆಗಳು ಸ್ವಲ್ಪ ದೊಡ್ಡವು. ಇಲ್ಲದ ಪಕ್ಷದಲ್ಲಿ ಅವು ಕಂಠ ಪಾಠಮಾಡಲು ಬಹಳ ಚೆನ್ನಾಗಿವೆ. ಶಬ್ದಗಳು ಅವುಗಳಲ್ಲಿ ಬಹಳ ಮುಖ್ಯವಾದವುಗಳು. ಕಥೆಗಳನ್ನು ಚಿಕ್ಕ ಚಿಕ್ಕ ಭಾಗಗಳನ್ನಾಗಿ ಮಾಡಿಕೊಂಡು ಅವುಗಳನ್ನು ಒಂದು ತರಂಗದಂತೆ ಹೇಳಬಹುದು). ನಿಮ್ಮ ಕಥೆಯು ನಿಮಗೆ ಕಂಠ ಪಾಠವಾಗಿದ್ದರೆ ನೀವು ಹೆಚ್ಚು ಧೈರ್ಯದಿಂದ ಪ್ರಾರಂಭಿಸುತ್ತೀರಿ ಮತ್ತು ನಿಮ್ಮ ಬುದ್ಧಿಯು ಸಹ ಸರಿಯಾಗಿ ಕೆಲಸಮಾಡುತ್ತದೆ. ಅಥವಾ ಸ್ವಲ್ಪ ಮಟ್ಟಿಗೆ ನೀವು ಅಸ್ಥಿರರಾದರೂ ನಿಮ್ಮ ಕಥೆಯು ತಾನೇ ಮುಂದುವರಿಯುತ್ತದೆ.

ಎರಡನೆಯದಕ್ಕೆ ನಾವು ಕಥೆ ಹೇಳುವ ವಿಚಾರದಲ್ಲಿ ಒಂದು ಮುಖ್ಯವಾದ ಅಂಶವನ್ನು ಮರೆತು ಬಿಡುವುದೇ ಕಾರಣ. ಕಥೆಯು ನಮ್ಮ ಕಣ್ಣೆದುರಿಗೆ ನಡೆದ ಹಾಗೆ ನಾವು ಮನಸ್ಸಿನಲ್ಲಿ ಚಿತ್ರಗಳನ್ನು ಮಾಡಿಕೊಳ್ಳುವುದಿಲ್ಲ. ಕಥೆಯಲ್ಲಿ ಕಥಾನಾಯಕ ಅಥವಾ ಬೇರೆ ಯಾರಾದರೂ ಒಬ್ಬರ ಸ್ಥಾನದಲ್ಲಿ ನಾವಿರುವಂತೆ ಭಾವಿಸಿಕೊಳ್ಳಬೇಕು. ಈ ವಿಚಾರವನ್ನು ಮುಂದೆ ವಿಸ್ತಾರವಾಗಿ ಹೇಳುತ್ತೇನೆ.

ಯಾವ ಮಾದರಿಯ ಕಥೆಯನ್ನು ಆರಿಸಿಕೊಳ್ಳಬೇಕೆಂಬುದನ್ನು ಮೊದಲು ನಾವು ಯೋಚಿಸಬೇಕು. ವಾಸ್ತವವಾಗಿ ನಡೆದ ಸಣ್ಣ ಸಣ್ಣ ಘಟನೆಗಳನ್ನು ಬಿಟ್ಟರೆ ಕಥೆಗಳನ್ನು ಸಾಮಾನ್ಯವಾಗಿ ಮೂರು ಮುಖ್ಯ ಭಾಗಗಳನ್ನಾಗಿ ಮಾಡಬಹುದು. ಮೊದಲನೆಯದು ಸಣ್ಣಕಥೆ. ಇದು ಸಂಪೂರ್ಣವಾಗಿರುತ್ತದೆ. ಒಂದು ಕಥೆಗೂ ಇನ್ನೊಂದು ಕಥೆಗೂ ಯಾವ ಸಂಬಂಧವೂ ಇರುವುದಿಲ್ಲ. ಇದು ಬಹಳ ಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ. ಇದು ಮುಖ್ಯವಾದದ್ದೇ ನಿಜ. ಆದರೂ ಉಳಿದ ಎರಡು ಮಾದರಿಯ ಕಥೆಗಳೂ ಕೂಡ ಹಿಂಡಿನ ಕಾರ್ಯಕ್ರಮದಲ್ಲಿ ಅಗತ್ಯವಾಗಿ ಸೇರಿರಬೇಕು. ಎರಡನೆಯದು ಅನುಬಂಧ (Serial)ಮೂರನೆಯದುತರಂಗ(Story-cycle). ಎರಡನೆಯ ಮಾದರಿಯಲ್ಲಿ ಕಥೆಗಳು ಅಲ್ಲಿಗಲ್ಲಿಗೆ ನಿಂತರೂ ಅವು ಅಪೂರ್ಣ. ಮೂರನೆಯ ಮಾದರಿಯಲ್ಲಿ ಪ್ರತಿಯೊಂದು ಕಥೆಯೂ ಪೂರ್ಣವಾಗಿದ್ದರೂ ಎಲ್ಲಾ ಕಥೆಗಳೂ ಒಂದೇ ವ್ಯಕ್ತಿಗೆ ಅಥವಾ ಒಂದೇ ವಿಷಯಕ್ಕೆ ಸಂಬಂಧಿಸಿದವುಗಳಾಗಿರುತ್ತವೆ.

[ಒಂದನೆಯ ಮಾದರಿಗೆ ಈಸೋಪನ ನೀತಿ ಕಥಾಸಾರವನ್ನೂ ಎರಡನೆಯದಕ್ಕೆ ಪಂಚತಂತ್ರ ಮತ್ತು ಹಿತೋಪದೇಶವನ್ನೂ ಮೂರನೆಯದಕ್ಕೆ ಭಟ್ಟವಿಕ್ರಮಾದಿತ್ಯನ ಕಥೆಗಳು ಅಥವಾ ಭೇತಾಳ ಪಂಚವಿಂಶತಿ ಕಥೆಗಳನ್ನೂ ಉದಾಹರಣೆಯಾಗಿ ಕೊಡಬಹುದು. ಆದರೆ ಈ ಎಲ್ಲಾ ಕಥೆಗಳೂ ಮಕ್ಕಳಿಗೆ ಹೇಳಲು ಯೋಗ್ಯವಾದುವುಗಳೆಂದು ಅಭಿಪ್ರಾಯವಲ್ಲ]. ಕಾಡಿನ ಪುಸ್ತಕದಲ್ಲಿರುವ ಕಥೆಗಳು ಈ ಮೂರನೇ ಮಾದರಿಗೆ ಉದಾಹರಣೆಯಾಗಿವೆ. ಈ ಕೊನೆಯ ಎರಡು ಮಾದರಿಯ ಕಥೆಗಳ ಉಪಯೋಗವು ಶಿಬಿರವನ್ನು ನಡೆಸುವಾಗ ಬಹುಮಟ್ಟಿಗೆ ಕಂಡುಬರುವುದು. ಸಾಧಾರಣವಾದ ಹಿಂಡಿನ ಕೂಟಗಳಲ್ಲಿಯೂ ಇವುಗಳ ಉಪಯೋಗವುಂಟು. ಅಕೇಲನಿಗೆ ಕಥೆಗಳನ್ನು ಹುಡುಕಿ ಆರಿಸಬೇಕಾದ ಕಷ್ಟವಿರುವುದಿಲ್ಲ. ಅನೇಕ ವಾರಗಳಿಗೆ ಆಗುವಷ್ಟು ಕಥೆಗಳು ತಾವಾಗಿಯೇ ಸಿದ್ಧವಾಗಿರುತ್ತವೆ. ಇಷ್ಟೇ ಅಲ್ಲದೆ ಅವುಗಳ ಉಪಯೋಗಗಳು ಇನ್ನೂ ಹೆಚ್ಚಾಗಿವೆ. ಕಥಾನಾಯಕನ ಗುಣ ದೋಷಗಳು ಮರಿಗಳ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸಲು ಸಹಾಯ ಮಾಡುತ್ತವೆ. ಪುನಃಪುನಃ ಹೇಳಲ್ಪಡುವುದರಿಂದ ಕಥೆಯಿಂದ ಕಲಿಯಬೇಕಾದ ನೀತಿಗಳು ಮತ್ತು ಧ್ಯೇಯಗಳು ಬಹಳ ಆಳವಾಗಿ ಬೇರೂರುತ್ತವೆ. ಕಳೆದುಹೋಗಿರುವ ನಿಮ್ಮ ಬಾಲ್ಯದ ಕಡೆಗೆ ನಿಮ್ಮ ದೃಷ್ಟಿಯನ್ನು ತಿರುಗಿಸಿದರೆ ನಾನಾ ರೀತಿಯ ಅದ್ಭುತ ಕಲ್ಪನೆಯಿಂದ ಕೂಡಿದ ಕಥೆಗಳ ಮೇಲೆ ನಿಮಗೆ ಸಂಪೂರ್ಣ ಅಭಿಲಾಷೆಯಿತ್ತೆಂಬುದನ್ನು ತಿಳಿಯಬಹುದು. ಪರೋಪಕಾರ ಮಾಡಲು ದೇಶಸಂಚಾರ ಮಾಡುವ ವೀರಪುರುಷ, ಕಾಡಿನಲ್ಲಿ ಮರದ ಹಿಂದೆ ಅವಿತುಕೊಂಡು ಕಾಣುವ ಕಾಡುಜನರು, ಅಥವಾ ಸಮುದ್ರದಮೇಲೆ ಹೋಗುವ ಕಳ್ಳರ ಹಡಗು ಇವೆಲ್ಲಾ ಒಂದಾನೊಂದು ಕಾಲದಲ್ಲಿ ನಿಮಗೆ ಆದರಣೀಯ. ಮರಿಗೂ ಹಾಗೆಯೇ.

ಈ ಕಥೆಗಳ ಅನುಬಂಧ ಅಥವಾ ತರಂಗಗಳು ಅನೇಕ ರೀತಿಯವಾಗಿದ್ದು ಮರಿಯ ನಾನಾ ಮುಖವಾದ ಅದ್ಭುತ ಕಲ್ಪನಾಶಕ್ತಿಯವನ್ನು ಪೋಷಿಸಲು ಸಹಕಾರಿಗಳಾಗುತ್ತವೆ. ಇದರಿಂದ ಹುಡುಗನ ದೃಷ್ಟಿಕೋನ ಮತ್ತು ರೀತಿ ನೀತಿಗಳ ಮೇಲೆ ಹೆಚ್ಚಿನ ಪರಿಣಾಮವುಂಟು.

ಕಥೆಗಳ ವಿಚಾರದಲ್ಲಿ ನಾವು ಗಮನಿಸಬೇಕಾದ ಎರಡನೆಯ ಅಂಶವು ಯಾವುದೆಂದರೆ ಅವುಗಳ ಸ್ವಭಾವ. ಕಥೆಯಿಂದ ಹುಟ್ಟತಕ್ಕ ಅಭಿಪ್ರಾಯವು ಯಾವುದೆಂಬುದು. ಕೆಲಸಕ್ಕೆ ಬಾರದ ಕಥೆಗಳನ್ನು ಹೇಳುವುದರಿಂದ ನಿಮ್ಮ ಮತ್ತುಮರಿಗಳ ಕಾಲವು ವ್ಯರ್ಥವಾಗುತ್ತದೆ. ಕಥೆಯನ್ನು ಹೇಳುವುದರಲ್ಲಿ ನೀವು ಒಂದು ಉದ್ದೇಶವನ್ನಿಟ್ಟುಕೊಳ್ಳಬೇಕು. ಸಾಧಾರಣವಾಗಿ ನಿಷ್ಠೆ, ಭಕ್ತಿ, ಪರೋಪಕಾರ ಬುದ್ಧಿ, ನಿಜವನ್ನೇ ನುಡಿಯುವುದು ಮುಂತಾದ ಯಾವುದಾದರೂ ಒಂದು ಒಳ್ಳೆಯ ಗುಣವು ಅವರ ಮನಸ್ಸಿನಲ್ಲಿ ನಾಟುವಂತೆ ಮಾಡುವುದೇ ನಿಮ್ಮ ಉದ್ದೇಶವಾಗಿರಬೇಕು. ಹೀಗೆ ಹೇಳಿದ ಮಾತ್ರಕ್ಕೇ ಇಂಥಾ ಗುಣಗಳ ಮೇಲೆ ವ್ಯಾಖ್ಯಾನಮಾಡಿ ಅದನ್ನು ಅವರಲ್ಲಿ ತುಂಬಬೇಕೆಂದಲ್ಲ. ಹಾಗೆ ಮಾಡಿದರೆ ಉದ್ದೇಶವೇ ಕೆಟ್ಟು ಹೋಗುತ್ತದೆ. ಮತ್ತುನಗುವನ್ನುಂಟುಮಾಡುವ ಹಾಸ್ಯರಸಯುಕ್ತವಾದ ಕಥೆಗಳನ್ನು ಹೇಳಲೇ ಬಾರದೆಂತಲೂ ಅರ್ಥವಲ್ಲ. ಮರಿಗಳು ಯಾವಾಗಲೂ ಹಸನ್ಮುಖಿಗಳಾಗಿಯೇ ಇರಬೇಕು. ಆದರೆ ಕೆಲವರಲ್ಲಿ ಹಾಸ್ಯರಸವನ್ನೇ ಪ್ರಧಾನಮಾಡಿ ಮರಿಗಳು ನಗುವಂತೆ ಮಾಡುವುದೇ ಒಂದು ದೊಡ್ಡ ಉದ್ದೇಶವಾಗಿ ಪರಿಣಮಿಸುತ್ತದೆ. ಇದು ಹಾಸ್ಯರಸವು ಸಹಜನ್ಯವಾಗಿರುವವರು ಮಾಡತಕ್ಕ ಒಂದು ತಪ್ಪು. ಇದನ್ನು ಅಪೂರ್ವವಾಗಿ ಮಾಡದೆ ಅದನ್ನೇ ಸಾಮಾನ್ಯವಾಗಿ ಬಳಕೆಗೆ ತರಲು ಯಾವಸಮಾಧಾನವೂ ಇರುವುದಿಲ್ಲ. ಇತರ ರೀತಿಯ ಕಥೆಗಳ ಜೊತೆಯಲ್ಲಿ ಎಲ್ಲಾದರೂ ಒಂದು ಇಂಥಾದ್ದನ್ನು ಸೇರಿಸಬಹುದು. ಇಂಥಾ ಕಥೆಯಲ್ಲಿಯೇ ಮರಿಗಳಿಗೆ ಅಭಿರುಚಿಯುಂಟಾದಲ್ಲಿ ಹೆಚ್ಚು ಗಂಭೀರವಾದ ಮತ್ತು ಗಹನವಾದ ಉದ್ದೇಶಗಳಿಂದ ಕೂಡಿದ ಕಥೆಗಳು ಆ ಮೇಲೆ ಅವರಿಗೆ ರುಚಿಸುವುದೂ ಇಲ್ಲ; ಅವುಗಳ ಕಡೆಗೆ ಅವರ ಗಮನವು ಹೋಗುವುದೂ ಇಲ್ಲ.

ತ್ರಾಸು ಎದುರು ಕಡೆಗೆ ಪೂರ್ತಿಯಾಗಿ ಬಾಗದಂತೆ ನೋಡಿಕೊಳ್ಳಿ. ನೀವು ಮರಿಗಳಿಗೆ ಬರೀ ನೀತಿ ವಾಕ್ಯಗಳ ಕಂತೆಗಳನ್ನೇ ಕೊಟ್ಟರೆ ಅವರಿಗೆ ಬಹಳ ಬೇಜಾರು ಹುಟ್ಟುತ್ತದೆ. ಅದು ಅವರಿಗೆ ರುಚಿಸುವುದಿಲ್ಲ.

ನಾವು ಮರಿಗಳ ಅಭಿರುಚಿಗಳನ್ನು ಮನಸ್ಸಿಗೆ ತಂದುಕೊಂಡು ಅವರು ಅಪೇಕ್ಷಿಸುವುದಕ್ಕೂ ನಾವು ಅವರಿಗೆ ಯಾವುದು ಒಳ್ಳೆಯದೆಂದು ಭಾವಿಸುತ್ತೇವೋ ಅದಕ್ಕೂ ಮಧ್ಯವರ್ತಿಯಾಗಿರುವಂತೆ ನಿಮ್ಮ ಕಥೆಗಳಿರುವಂತೆ ಮಾಡಿಕೊಳ್ಳಬೇಕು. ಅವರಿಗೆ ಬೇಕಿಲ್ಲದ, ಅವರ ಮನಸ್ಸಿಗೆ ಬೇಜಾರುಪಡಿಸುವ ಕಥೆಗಳನ್ನು ಹೇಳುವುದರಿಂದ ಯಾವ ಪುರುಷಾರ್ಥವೂ ಆಗುವುದಿಲ್ಲ. ನಿಮ್ಮ ಶ್ರಮವು ನಿರರ್ಥಕವಾಗುತ್ತದೆ. ಮರಿಯು ನೀವು ಹೇಳುವ ಕಥೆಯಲ್ಲಿ ಆಸಕ್ತಿಯನ್ನು ತೋರಿಸದೆ ಹೋಗುವ ಪಕ್ಷದಲ್ಲಿ ಕಥಾನಿರೂಪಣವು ನಡತೆಯನ್ನು ತಿದ್ದುವ ಸಾಧನವಾಗುವುದೇ ಇಲ್ಲ. ನಿಮ್ಮ ಕಥೆಯಲ್ಲಿ ಮರಿಗೆ ರುಚಿಯುಂಟಾಗಿ ಅದು ಅವನಿಗೆ ಅರಗಿ ಬುದ್ಧಿಗತವಾಗಬೇಕು. ಅವನು ತನಗೆ ಗೊತ್ತಿಲ್ಲದಂತೆ ನೀವು ಕೊಡುವ ಪೋಷಣಾ ದ್ರವ್ಯವನ್ನು ಸೇವಿಸುತ್ತಿರಬೇಕು.

ಈ ವಿಚಾರಗಳನ್ನೆಲ್ಲಾ ನಿರ್ಧಾರಮಾಡಿಕೊಂಡು ಕಥೆಯನ್ನು ಸರಿಯಾದ ರೀತಿಯಲ್ಲಿ

ಹೇಳಬೇಕಾದರೆ ನಮ್ಮಿಂದ ಮಾಡಲ್ಪಡಬೇಕಾದ ಪ್ರಯತ್ನದ ಕಡೆಗೆ ನೋಡೋಣ. ನಮ್ಮಲ್ಲಿ ಕೆಲವರಿಗೆ ಕಥೆಯನ್ನು ಹೇಳುವುದಕ್ಕಿಂತ ಅದನ್ನು ಹೇಳುವುದಕ್ಕಾಗಿ ಮಾಡುವ ಪ್ರಯತ್ನವು ಬಹಳ ಮುಖ್ಯವಾದುದು. ಕಥೆ ಹೇಳುವುದು ಫಲಕಾರಿಯಾಗಬೇಕಾದರೆ ನಮ್ಮಲ್ಲಿ ಪ್ರಯತ್ನವು ಬೇಕು. ನಿಮಗೆ ಅಭ್ಯಾಸವು ಹೆಚ್ಚಾದ ಹಾಗೆಲ್ಲಾ ಪ್ರಯತ್ನ ಮಾಡಬೇಕಾದ್ದು ಕಡಮೆಯಾಗುತ್ತಾ ಬರಬಹುದು. ನಿಜವಾದ ಮೇಧಾವಿಯು ಪ್ರಯತ್ನ ರಹಿತವಾಗಿಯೇ ಕಥೆಯನ್ನು ಸರಿಯಾದ ರೀತಿಯಲ್ಲಿಯೇ ಹೇಳುವುದು ಸಾಧ್ಯ. ಆದರೆ ಅಂಥವನು ಇನ್ನುಮುಂದೆ ಹುಟ್ಟಬೇಕು. ಈ ವಿಚಾರದಲ್ಲಿ ಬಹಳ ಯೋಗ್ಯತೆ ಮತ್ತು ಅನುಭವಗಳಿರುವವರು ಬಹಳ ಪ್ರಯತ್ನವಿಲ್ಲದೆಯೇ ಕಥೆಯನ್ನು ಸರಿಯಾಗಿ ಹೇಳಬಹುದು. ಮತ್ತು ಕಥೆಯನ್ನು ಹೇಳುವಾಗಲೇ ಕಲ್ಪನೆ ಮಾಡಿಕೊಳುತ್ತಾ ಹೋಗಬಹುದು. ನನಗೆ ಅಂಥಾ ಯೋಗ್ಯತೆಯಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ನಾನು ಅನೇಕಸಾರಿ ಐದು ನಿಮಿಷಗಳ ಕಾಲದಲ್ಲಿಯೇ ಕಥೆಗಳನ್ನು ಸಿದ್ಧಮಾಡಿಕೊಂಡು ಹೇಳಿದ್ದೇನೆ. ಆದರೂ ಆ ಐದು ನಿಮಿಷಗಳ ಕಾಲದಲ್ಲಿಯೇ ಕಥೆಯಲ್ಲಿ ಬರಬೇಕಾದ ಘಟನಾವಳಿಗಳನ್ನೂ ಮತ್ತು ಅವು ಯಾವ ಕ್ರಮದಲ್ಲಿ ಬರಬೇಕೆಂಬುದನ್ನೂಗುರುತುಮಾಡಿಕೊಂಡುಅನಂತರ ಕಥೆಗೆ ಆರಂಭ ಮಾಡಿದ್ದೇನೆ.

ಸಾಧಾರಣವಾದ ಸ್ಥಿತಿಯಲ್ಲಿ ಎಲ್ಲರಿಗೂಮತ್ತು ಕಥೆ ಹೇಳುವುದರಲ್ಲಿ ಅಭ್ಯಾಸವಿಲ್ಲದಿರುವ ಹೊಸಬರಿಗೂ ಕಥೆಗೆ ಪ್ರಾರಂಭಮಾಡುವುದಕ್ಕೆ ಮುಂದಾಗಿ ಬಹಳ ಮಟ್ಟಿಗೆ ಪ್ರಯತ್ನವುಬೇಕು. ನಾವು ಮೊದಲು ಕಥೆಯನ್ನು ಜಾಗ್ರತೆಯಾಗಿ ಒಂದು ಬಾರಿ ಓದಿಕೊಳ್ಳಬೇಕು. ಘಟನಾವಳಿಗಳೂ ಅವುಗಳ ಕ್ರಮವೂ ಮನಸ್ಸಿನಲ್ಲಿ ಚೆನ್ನಾಗಿ ನಾಟುವಂತೆ ಮೂರನೆಯ ಬಾರಿ ಇನ್ನೂ ನಿಧಾನವಾಗಿ ಓದಿಕೊಳ್ಳಬೇಕು. ಅವು ನಮ್ಮ ಮನಸ್ಸಿಗೆ ಚೆನ್ನಾಗಿ ನಾಟವೆಯೆಂಬುದನ್ನು ಸ್ಥಿರಪಡಿಸಿಕೊಳ್ಳಲು ಮುಖ್ಯ ಘಟನೆಗಳನ್ನು ಒಂದು ಕಡೆ ಗುರುತು ಹಾಕಬೇಕು. ಅದಕ್ಕಾಗಿ ಒಂದು ಚಿಕ್ಕ ಪುಸ್ತಕವನ್ನಿಟ್ಟು ಅದರಲ್ಲಿ ಗುರುತುಮಾಡುವುದು ಒಳ್ಳೆಯದೆಂದು ನಾನು ತಿಳಿಯುತ್ತೇನೆ. ಹೀಗೆ ಮಾಡುವುದರಿಂದ ಎರಡು ಮೂರು ವರ್ಷಗಳ ಕಾಲದಲ್ಲಿಯೆ ನಿಮ್ಮ ಕೈಗೆ ಆರಿಸಿ ತೆಗೆದ ಕಥೆಗಳ ಪುಸ್ತಕವೊಂದು ಸಿಕ್ಕಿದಂತಾಗುತ್ತದೆ. ಅಲ್ಲಿಂದ ಮುಂದೆ ನೀವು ಗುರುತು ಹಾಕಿರುವ ಅಂಶಗಳನ್ನು ಒಂದಾವರ್ತಿ ನೋಡುವುದಕ್ಕಿಂತಲೂ ಹೆಚ್ಚಿನ ಪ್ರಯತ್ನವು ಅವಶ್ಯಕವಾಗುವುದಿಲ್ಲ. ಈ ರೀತಿಮಾಡುವುದರಿಂದ ಕಥೆ ಹೇಳುವ ಕಾಲದಲ್ಲಿ ನಿಮಗೆ ಬೇಕಾದ ಅಂಶಗಳು ಸ್ಪಷ್ಟವಾಗಿಯೂ ಕ್ರಮವಾಗಿಯೂ ಇರುತ್ತವೆ. ಅಲ್ಲದೆ ಕಥೆ ಹೇಳುವಾಗ ಮುಖ್ಯವಾದ ಯಾವುದಾದರೂ ವಿಚಾರವನ್ನು ಅದರ ಉಚಿತ ಸ್ಥಾನದಲ್ಲಿ ಹೇಳದೆ ಕಥೆಯನ್ನು ಮುಂದುವರಿಸಿ ಆ ಮೇಲೆ ಜ್ಞಾಪಿಸಿಕೊಂಡು ಅದಕ್ಕಾಗಿ ಪುನಃ ಹಿಂದಕ್ಕೆ ಬರುವ ತಪ್ಪನ್ನು ನೀವು ಮಾಡುವುದಿಲ್ಲ.

ನೀವು ಹೇಳುವ ಕಥೆಯು ನಿಮ್ಮಕಣ್ಣುಮುಂದೆ ನಡೆದಂತೆ ನಿಮ್ಮಮನಸ್ಸಿನಲ್ಲಿ ಚಿತ್ರಿಸ್ಸಿಕೊಳ್ಳುವುದು ಮತ್ತೊಂದು ಮುಖ್ಯವಾದ ವಿಚಾರ. ಕಥೆಯನ್ನುಪುನಃ ಪುನಃ ಓದಿ. ಆ ಕಥೆಯ ನಾಯಕನೋ ಅಥವಾ ಕಥೆಗೆ ಸಂಬಂಧಿಸಿದ ಬೇರೆಯಾವುದಾದರೂ ಪಾತ್ರವೋ ನೀವು ಆಗಿದ್ದಂತೆಯೂ ಮತ್ತು ಕಥೆಯು ನಡೆದಾಗ ನೀವು ಎದುರಿಗಿದ್ದಂತೆಯೂ ನಿಮ್ಮ ಮನಸ್ಸಿನಲ್ಲಿ ಭಾವನೆಯುಂಟಾಗಬೇಕು. ಕಥೆಯ ಉದ್ದೇಶವೇನೆಂಬುದನ್ನು

ವುದಕ್ಕೆ ಮಾತ್ರ ಮಂಕಾಗಿ ಕಾಣುತ್ತಾನೆ. ಯಾವುದಾದರೂ ಕಷ್ಟವಾದ ಒಂದು ಗಂಟನ್ನು ಒಂದು ರೀತಿಯಲ್ಲಿ ಹಾಕುವುದನ್ನು ಹೇಳಿಕೊಟ್ಟರೆ ಅರ್ಧ ಗಂಟೆಯಲ್ಲಿ ಪುನಃ ಬರುತ್ತಾನೆ. "ಯಾಕಯ್ಯಾ ತಿಳಿಯಲಿಲ್ಲವೇ" ಎಂದರೆ "ಹೀಗೆ ಹಾಕಬಹುದೇ ಸಾರ್" ಎಂದು ಎರಡು ಮೂರು ಹೊಸ ರೀತಿಯಲ್ಲಿ ಹಾಕುತ್ತಾನೆ. ಇಷ್ಟು ಬುದ್ಧಿವಂತನಾದರೂ ಮುಂದೆ ನುಗ್ಗಿ ಮಾತನಾಡಲಾರ. ಸಾಲದುದಕ್ಕೆ ಇವನನ್ನ "ಮೋತೀಖಾನೆ ಹೆಗ್ಗಣ" ಎಂದು ಕರೆಯಬಹುದು. ಊಟ ತಿಂಡಿ ಮೇಲೆ ಆಸೆ. ಹುಡುಗರು ಹಾಗೇ ಇರಬೇಕು. ನಾವು ಮುದುಕರು ಏನುತಿಂದೇವು!

ಇವನ ಪುರಾಣ ಇಲ್ಲಿಗೆ ಸಾಕು. ನಮ್ಮ ಶಿಬಿರವಾಸದ ವಿಚಾರಕ್ಕೆ ಇನ್ನು ಹೋಗೋಣ. ರಾಮಲಕ್ಷ್ಮಣರು ಊರು ಬಿಟ್ಟು ಕಾಡಿಗೆ ಹೊರಟದ್ದ ಹಾಗೆ ಹೊರಟೆವು ಎಂದು ಹಿಂದೆಯೇ ಹೇಳಿದ್ದೆನಷ್ಟೆ.

ನಾವೇನೋ ಮನಸ್ಸು ಮಾಡಿ ಹೊರಟೇಬಿಟ್ಟೆವು. ಎಲ್ಲರಿಗೂ ಬೈಸಿಕಲ್ಲುಗಳಿದ್ದವು. ನಮ್ಮ ಹಾಸಿಗೆಗಳು ಮತ್ತು ಆಹಾರ ಪದಾರ್ಥಗಳನ್ನು ಮುಂದಾಗಿಯೇ ಒಂದು ಜಟಕಾದಲ್ಲಿ ಹಾಕಿ ಕಳುಹಿಸಿಬಿಟ್ಟೆವು. ಯಾಕೆಂದರೆ ಆಕಾಶದಲ್ಲಿ ಸುಮಾರಾಗಿ ಮೋಡವಿತ್ತು. ಬಿಸಿಲು ಚೆನ್ನಾಗಿ ಕಾಯುತ್ತಿತ್ತು. ಮಳೆ ಬರುವ ಚಿಹ್ನೆಗಳು ಕಂಡುಬರುತ್ತಿದ್ದುವು.

ನಮ್ಮ ಬೈಸಿಕಲ್‌ಗಳು ಮಂದಗಮನದಿಂದ ಮುಂದುವರಿಯಲು ಪ್ರಾರಂಭಿಸಿದವು. ನಿಧಾನವಾಗಿ ನಾನಾವಿಚಾರಗಳನ್ನು ಮಾತನಾಡಿಕೊಳ್ಳುತ್ತಾ ನಮ್ಮ ವಾಹನಗಳನ್ನು ತುಳಿಯುತ್ತಿದ್ದೆವು. ಬೆಟ್ಟದ ದಾರಿ. ತುಳಿಯುವುದೂ ಸ್ವಲ್ಪ ಕಷ್ಟವಾಗಿತ್ತೆಂದು ಹೇಳಿದರೆ ಅವಮಾನವೇನೂ ಇಲ್ಲ. ಹೀಗೆ ಸುಮಾರು ೪ ಮೈಲಿ ಹೋದೆವು. ಯಾವ ಕಡೆಗೆ ನೋಡಿದರೂ ಬೆಟ್ಟಗಳು. ದಾರಿಯೋ ಬಳಸಿಬಳಸಿ ಹೋಗುತ್ತಿತ್ತು. ಸಾಲದುದಕ್ಕೆ ರಸ್ತೆಯೆಲ್ಲಾ ಧೂಳಿನ ಮಯ. ಇದಕ್ಕಿದ್ದ ಹಾಗೇ ಬಿಸಿಲುಕಾಣದ ಹಾಗಾಯಿತು. ಮೋಡಗಳು ಏರುತ್ತಾ ಬಂದು ಜೋರಾಗಿ ಗಾಳಿ ಬೀಸಲು ಪ್ರಾರಂಭವಾಯಿತು. ಮಳೆ ಬರುವುದು ಖಂಡಿತವೆಂಬುದು ಚೆನ್ನಾಗಿ ತಿಳಿದ ಮೇಲೆ ಸ್ವಲ್ಪ ಉಸಿರು ಹಿಡಿದು ಬೈಸಿಕಲ್ ತುಳಿಯಲು ಪ್ರಾರಂಭವಾಯಿತು. ನಮ್ಮ ಉದ್ದೇಶವೇನೋ ಮಳೆ ಬರುವುದರೊಳಗಾಗಿ ಇನ್ನು ೨ ಮೈಲುಗಳ ದೂರದಲ್ಲಿದ್ದ ಒಂದು ಫಾರೆಸ್ಟ್ ಲಾಡ್ಜ್‌ಗಾದರೂ ಸೇರಬೇಕೆಂದಿತ್ತು. ಆದರೆ ಮಳೆಯು ಉದ್ದೇಶ ಅಷ್ಟರೊಳಗಾಗಿ ನಮ್ಮನ್ನು ನೆನೆಸಬೇಕೆಂದಿದ್ದ ಹಾಗೆ ತೋರುತ್ತದೆ. ಇದ್ದಕ್ಕಿದ್ದ ಹಾಗೆಯೇ ಮಳೆ ಪ್ರಾರಂಭವಾಯಿತು. ದಾರಿಯುದ್ದಕ್ಕೂ ನೋಡಿದೆವು. ಒಂದು ಸಣ್ಣ ಆಲದಮರ ಮಾತ್ರ ಸ್ವಲ್ಪ ದೂರದಲ್ಲಿ ರಸ್ತೆಯ ಪಕ್ಕದಲ್ಲಿತ್ತು. ಎಲ್ಲರೂ ಆತುರದಿಂದ ಅಲ್ಲಿಗೆ ಸೇರಿದೆವು. ನಮ್ಮ ವಾಹನಗಳನ್ನು ಹಿಡಿದುಕೊಂಡು ಒತ್ತಾಗಿ ನಿಲ್ಲುವುದಕ್ಕೆ ಮಾತ್ರ ಅಲ್ಲಿ ಸ್ಥಳವಿದ್ದಿತು. ಮರವೂ ಸ್ವಲ್ಪ ಹೊತ್ತು ನಮಗೆ ಆಸರೆ ಕೊಟ್ಟಿತು. ಆದರೆ ಮಳೆಯು ಹೊಡೆತವನ್ನು ಅದುತಾನೇ ಎಷ್ಟು ಹೊತ್ತು ತಡೆದೀತು. ತಾನೂ ಮಳೆಯು ಕಡೆ ಸೇರಿಕೊಂಡಿತು. ನಮಗೆ ಮಳೆಯ ಹನಿ ಮತ್ತು ಮರದ ಹನಿ ಎರಡರ ಕಾಟವೂ ಒಟ್ಟಿಗೆ ಬಂದಿತು. ಇಷ್ಟರಲ್ಲಿ ನಮ್ಮೆಲ್ಲರ ಮೈ ಮೇಲಿದ್ದ ಬಟ್ಟೆಗಳೂ ಸಂಪೂರ್ಣವಾಗಿ ನೆನೆದು ಹೋಗಿದ್ದವು.

ಇನ್ನು ಅಲ್ಲಿರುವುದರಿಂದ ಪ್ರಯೋಜನವಿಲ್ಲದಂತಾಯಿತು. "ನೆನೆಯುವುದಂತೂ ಖಂಡಿತ. ಪ್ರಯಾಣವನ್ನಾದರೂ ಮುಂದುವರಿಸೋಣ" ಎಂದೆ. ಎಲ್ಲರೂ ಅದಕ್ಕಾಗಿ ಕಾದಿದ್ದರೆಂದು ತೋರುತ್ತೆ. ಏನು ಸಂತೋಷವಾಯಿತೋ ಹುಡುಗರಿಗೆ. ಆ ಸಂತೋಷ ಬಯಲಿನಲ್ಲಿ ನಿಂತು ನೆನೆದವರಿಗೆ ಗೊತ್ತು. "ಬಲ್ಲವನೆ ಬಲ್ಲ ಬೆಲ್ಲದ ಸವಿಯ" ಎಂಬ ಹಾಗೆ. ಮಳೆ ಹೆಚ್ಚಾಯಿತು. ನಮಗೆ ರಸ್ತೆಯಾವುದು, ಚರಂಡಿಯಾವುದು, ನೆಲವಾವುದು, ನೀರುಯಾವುದು; ತಿಳಿಯುವುದು ಸ್ವಲ್ಪ ಕಷ್ಟವಾಯಿತು. ಬೀಳುತ್ತಿದ್ದ ಮಳೆಯ ನೀರು ಸಂಪೂರ್ಣವಾದ ಅಭಿಷೇಕ ಮಾಡಿ ನಾವು ಹಾಕಿಕೊಂಡಿದ್ದ ಪಾದರಕ್ಷೆಗಳಿಗಿಳಿದು ಅಲ್ಲಿ ಸ್ಥಳ ಸಂಕೋಚದಿಂದ ಹೊರಹೊಮ್ಮುತ್ತಿತ್ತು.

ಅಷ್ಟು ಹೊತ್ತಿಗೆ ಒಂದು ಇಳಿಜಾರು ಸಿಕ್ಕಿತು. ಅರ್ಧ ದೂರ ಅದರಲ್ಲಿ ಬಂದಿದ್ದೇವೆ. ನಮ್ಮ ಪೈಕಿ ಗೋವಿಂದಯ್ಯನಿಗೆ ಮುಂದೆ ಹೋಗಬೇಕೆಂಬುದು ಒಂದು ದೊಡ್ಡ ಆಸೆ. ಅವನ ವಿಚಾರ ಹಿಂದೆಯೇ ಹೇಳಿದ್ದೇನಷ್ಟೆ ಮಾತ್ತು ಜಾಸ್ತಿಯೆಂದು. ಮಳೆಯಲ್ಲಿಯೂ ಮಾತಾಡುತ್ತಲೇ ರಸ್ತೆಯಲ್ಲಿದ್ದ ಒಂದು ಗುಂಡಿಯೊಳಕ್ಕೆ ಬೈಸಿಕಲ್ ಬಿಟ್ಟೇಬಿಟ್ಟ. ಮುಂದಿನ ಚಕ್ರ ಗುಂಡಿಯೊಳಕ್ಕೆ ಬೀಳು

ತ್ತಲೇ ಕವಣೆಯಿಂದ ಹೊಡೆದ ಕಲ್ಲಿನ ಹಾಗೆ ಮೂರು ಮಾರು ಹಾರಿ ಹಾಗೆಯೇ ಒಂದು ಪಲ್ಟಿಯನ್ನು ಹೊಡೆದು ಬಿದ್ದ, ಕೆಸರಿನೊಳಕ್ಕೆ. ಕೆಸರು ಮತ್ತು ನೀರು ಜೊತೆಯಾಗಿ ಏಟು ಬೀಳುವುದನ್ನು ತಪ್ಪಿಸಿದವು. ನನಗೆ ಆಗ ಕೆಲವರು ಕುದುರೆಯಿಂದ ಬಿದ್ದರೆ "ಮೈ-ಘೋಡಾಸೆ ಜೂದಾ ಹೋಗಯ" (ನಾನು ಕುದುರೆಯಿಂದ ಬೇರೆಯಾದೆ) ಎಂದು ಮರ್ಯಾದೆಯಿಂದ ಹೇಳಿಕೊಳ್ಳುವುದು ಜ್ಞಾಪಕ ಬಂದು ಹುಚ್ಚು ನಗು ಬಂತು.

ಗೋವಿಂದಯ್ಯನ ಪೇಟಾ ೬ ಮಾರು ದೂರದಲ್ಲಿ ನೀರಿನಲ್ಲಿ ಈಜು ಕಲಿಯುತ್ತಿತ್ತು. ಅವನ ಬೈಸಿಕಲ್ಲು ಗುಂಡಿಯಲ್ಲಿ ಜಲಕ್ರೀಡೆಯಾಡುತ್ತಾ ಸ್ವಲ್ಪಸ್ವಲ್ಪ ಮೇಲಕ್ಕೆ ಕತ್ತೆತ್ತಿ ಇಣಿಕಿನೋಡುತ್ತಿತ್ತು. ಗೋವಿಂದಯ್ಯನು ಅಂಗಸಾಧನೆ ಮುಗಿಸಿ ಮೇಲಕ್ಕೇಳಬೇಕೆಂದು ಪ್ರಯತ್ನ ಮಾಡುತ್ತಿದ್ದ. ಮನುಷ್ಯನ ಸ್ವಭಾವ ಬಹಳ ಕೆಟ್ಟದ್ದು. ಯಾರಾದರೂ ಕಾಲುಜಾರಿ ಕೆಳಗೆ ಬಿದ್ದರೆ ಮೊದಲು ನಗು ಬರುತ್ತದೆಯೇ ಹೊರತು "ಅಯ್ಯೋ ಪಾಪ" ಎನ್ನಿಸುವುದಿಲ್ಲ. ನಗುವುದೆಲ್ಲಾ ಮುಗಿದ ಮೇಲೆಯೇ ಸಹಾಯ ಮಾಡಬೇಕೆಂಬ ಬುದ್ಧಿ ಬರುವುದು. ಇದಕ್ಕೆ ಏನು ಕಾರಣವೋ ಗೊತ್ತಿಲ್ಲ. ಬರ್ಗ್ಸನ್ ಎಂಬವರು "ನಗು" ಎಂಬ ಹೆಸರಿನಲ್ಲಿ ಬರೆದಿರುವ ಪುಸ್ತಕದಲ್ಲಿ ಈ ವಿಚಾರವೆಲ್ಲಾ ಇದೆಯೆಂತ ಹೇಳುತ್ತಾರೆ. ಬೇಕಾದವರೆಲ್ಲ ಓದಿಕೊಳ್ಳಲಿ. ನಮಗೇನೋ ನಗು ನಿಲ್ಲಿಸುವುದು ಕಷ್ಟವಾಯಿತು. ನಾವೆಲ್ಲಾ ಬೈಸಿಕಲ್ ಇಳಿದು ನೋಡುತ್ತಾ ನಗುತ್ತಾ ನಿಂತುಕೊಂಡೆವು. ಸಹಾಯ ಮಾಡಬಾರದೆಂದಲ್ಲ. ನಮಗೆ ಧರ್ಮಸಂಕಟ ಬಂದಿತ್ತು. ಮೇಲಕ್ಕೆಬ್ಬಿಸುವುದಕ್ಕೆ ಹೋದರೆ ಗೋವಿಂದಯ್ಯನಿಗೆ ಎಲ್ಲಿ ಸಿಟ್ಟು ಬರುತ್ತದೋ ಎಂಬ ಭಯ. ಒಂದನೇ ದರ್ಜೆ ಸ್ಕೌಟಾಗ ಬೇಕೆಂದಿದ್ದವನು ಕೆಸರಿನಲ್ಲಿ ಬಿದ್ದರೆ ಯಾರೇ ಆಗಲಿ ನಗುವುದನ್ನು ನಿಲ್ಲಿಸಿ ಎತ್ತುವುದಕ್ಕೆ ಹೋಗುವಷ್ಟು ದಡ್ಡರೇ! ನಾವಂತೂ ಅಲ್ಲ.

ಮೇಲೆ ಹುಯ್ಯುವ ಮಳೆ, ಕೆಳಗೆ ಹರಿಯುವ ನೀರು ಅದರಲ್ಲಿ ಗೋವಿಂದಯ್ಯ ಹೀಗೆ ಎಷ್ಟು ಹೊತ್ತು ಇರುವುದಕ್ಕಾದೀತು. ಕೊನೆಗೆ ನಾನು ನಗುವುದನ್ನು ನಿಲ್ಲಿಸಿ "ಗೋವಿಂದಯ್ಯ ಏನಾಯ್ತು" ಎಂದೆ. ಆವನು "ಏನೂ ಇಲ್ಲಾ ಸಾರ್, ಬೈಸಿಕಲ್ ಜಾರಿತು" ಎಂದು ಹಲ್ಲು ಕಿರಿದ. ನಾನು ನೋಡುತ್ತಿದ್ದ ಹಾಗೇ ಬೈಸಿಕಲ್ ಎತ್ತಿ ಮೇಲೆ ಕೂತು ಹೊರಟೇಬಿಟ್ಟ ಮುಂದೆ. ಮಳೆ ಇನ್ನೂ ಹೆಚ್ಚಾಯಿತು. ಇನ್ನು ಒಂದು ಮೈಲಿ ಹೋಗುವುದರೊಳಗಾಗಿ ಫಾರೆಸ್ಟ್ ಲಾಡ್ಜ್ ಸಿಕ್ಕಿತು. ಮಳೆಯಿಲ್ಲದಿದ್ದರೆ ಮುಂದೆ ಮೂರು ಮೈಲಿ ಹೋಗಿ ಬೆಟ್ಟದ ಮೇಲಕ್ಕೆ ಹೋಗಬೇಕೆಂತ ನಮ್ಮ ಸಂಕಲ್ಪ. ಆದರೆ ಸಂಕಲ್ಪ ಮಾಡೋ ಕಾಲವಲ್ಲ. ಮೈ ಕೈ ನಡುಗುತ್ತಾ ಹಲ್ಲುಗಳು ಒಂದಕ್ಕೊಂದು ತಾಟಾಡುತ್ತಿದ್ದವು.

ನಮ್ಮ ಗಾಡಿ ಮುಂದಾಗಿ ಹೋಗಿ ನಿಂತಿತ್ತು. ನಾವೂ ಲಾಡ್ಜಿಗೆ ಹೋಗಿ ಸಾಮಾನು ಇಳಿಸಿ ಬಟ್ಟೆಗಳನ್ನೆಲ್ಲಾ ಬದಲಾಯಿಸಿ, ಮೈಯನ್ನೆಲ್ಲಾ ಚೆನ್ನಾಗಿ ಉಜ್ಜಿಕೊಂಡು ಬಟ್ಟೆಗಳನ್ನೆಲ್ಲಾ ಹಿಂಡಿ ಆರುವುದಕ್ಕೆ ಹಾಕಿದೆವು. ಇಷ್ಟು ಹೊತ್ತಿಗೆ ಸಾಯಂಕಾಲ ಏಳು ಗಂಟೆಯಾಗಿತ್ತು. ಕಗ್ಗತ್ತಲೆ. ಹೊರಗೆ ಹೋಗಿ ಸ್ವಲ್ಪ ಸೌದೆ ನೋಡಿಕೊಂಡು ಬಂದು ಅಡಿಗೆ ಪ್ರಯತ್ನ ಮಾಡೋಣವೆಂದರೆ ದೂರ ಹೋಗಲು ಚಿರತೆಗಳ ಕಾಟ, ಹತ್ತಿರದಲ್ಲಿಯೇ ಇದ್ದ ಕಡ್ಡಿಗಳನ್ನೇ ಆರಿಸಿ ತಂದು ಹಾಗೂ ಹೀಗೂ ಬೆಂಕಿ ಹತ್ತಿಸಿದೆವು.

ಬೆಂಕಿ ಸುಖ ಅಂದರೆ ನಾವು ಆ ದಿನವೇ ಕಂಡದ್ದು. ಒಳ್ಳೇ ಬೇಸಿಗೆಯಲ್ಲಿ ಸಾಯಂಕಾಲದ ಹೊತ್ತು ಹತ್ತು ಜನ ನೋಡಲಿ ಎಂದು ಊರೊಳಗೆ ಬೆಂಕಿ ಹಾಕಿಕೊಂಡು ಶಿಬಿರ ಕ್ರೀಡೆ (Camp Fire) ಮಾಡುವಾಗ ಬೆಂಕಿಯ ಸುಖ ತಿಳಿಯುವುದಿಲ್ಲ. ಆ ದಿನ ಬೆಂಕಿಯ ಸುತ್ತ ಕುಳಿತುಕೊಂಡು ಗೋವಿಂದಯ್ಯ ಬಿದ್ದದ್ದನ್ನು ಜ್ಞಾಪಿಸಿಕೊಂಡು ನಗುತ್ತಾ ಕೈಕಾಲು ಕಾಯಿಸುತ್ತಾ ಕೂತಿದ್ದ ನಮ್ಮನ್ನು ನೋಡಿದ್ದರೆ "ದೇವತೆಗಳು" ಅಂತಾರಲ್ಲ ಅವರೂ ಕೂಡ "ಅಯ್ಯೋ ನಾವೂ ಮಳೆಯಲ್ಲಿ ನೆನೆಯಬಾರದಾಗಿತ್ತೇ" ಎಂದು ಕೊಂಡಿರಬೇಕು.

ಆ ದಿನ ನಮ್ಮ ಸಂಭ್ರಮವೇ ಸಂಭ್ರಮ. ಅಡಿಗೆಯಿಲ್ಲಾ ಊಟವಿಲ್ಲಾ. ಕಾಫಿಯನ್ನಾದರೂ ಮಾಡಿ ಕುಡಿಯೋಣವೆಂದರೆ ಹಾಲಿಲ್ಲಾ. ಒಂದು ಮಾತ್ರ ಇತ್ತು ನಮ್ಮಲ್ಲಿ ರೊಟ್ಟಿ (bread) "ಬರೀರೊಟ್ಟಿಯನ್ನಾದರೂ ತಿನ್ನೋಣಸಾರ್" ಎಂದರು ಹುಡುಗರು. ಯಾರಿಗೂ

ಗೊತ್ತಿಲ್ಲದ ಹಾಗೆ ನಾನು ಒಂದು ದೊಡ್ಡ ಸೀಸೆಯಲ್ಲಿ ನಿಂಬೆಕಾಯಿ ಉಪ್ಪಿನಕಾಯಿ ತಂದಿದ್ದೆ. ಸೀಸೆ ಬಾಯಿ ತೆಗೆದೆ. ವಾಸನೆ ಬಂದ ಕೂಡಲೆ ಹುಡುಗರೆಲ್ಲಾ ನೆಗೆಯು ವುದಕ್ಕೆ ಮೊದಲು ಮಾಡಿದರು. ಏನು ಸಂತೋಷವೋ! ರೊಟ್ಟಿ ಉಪ್ಪಿನಕಾಯಿ ಇದರ ಮುಂದೆ ಹಬ್ಬದ ಊಟ ಯಾಕೆ. ಆದಿನ ನೀವು ನಮ್ಮ ಜೊತೆಯಲ್ಲಿದ್ದರೆ ಗೊತ್ತಾ ಗುತ್ತಿತ್ತು ನಿಮಗೆ ಆ ರುಚಿ; ಆ ಸುಖ, ಆ ಸಂತೋಷ ಎಂಥಾದ್ದು ಎಂದು.

ಈ ವೃಷ್ಟಾನ್ನ ಭೋಜನ ಮುಗಿಸಿ ಹಾಸಿಗೆಗಳನ್ನ ಹಾಕಿ ಎಲ್ಲಾ ಮಲಗಿದೆವು. ಸುಮಾರು ಅರ್ಧಗಂಟೆ ಹೊತ್ತು ಸ್ವಲ್ಪ ಶಬ್ದವಿತ್ತು. ನನಗೇನೋ ನಿದ್ರೆ ಬಂದು ಬಿಟ್ಟಿತು. ಮಧ್ಯೆ ಎಚ್ಚರವಾಯಿತು. ಕೈ ದೀಪ (torch) ಹಾಕಿ ನೋಡಿದೆ. ರಾತ್ರಿ ೨ ಗಂಟೆಯಾಗಿತ್ತು. ನಾನು ಮಲಗಿದ್ದುದು ಕಿಟಕಿಯ ಬಳಿಯಲ್ಲಿ. ಆ ಕಿಟಕಿಯಿಂದ ನೋಡಿದರೆ ಸ್ವಲ್ಪದೂರದಲ್ಲಿ ಒಂದು ಕಡೆ ಕಲ್ಲಿನಲ್ಲಿ ನೀರು ಬರುವ ಒಂದು ಚಿಲುಮೆ. ಅದು ತುಂಬಿ ನೀರು ಹರಿದು ಹೋಗುತ್ತಿರುತ್ತೆ. ಸುತ್ತಮುತ್ತಲೂ ಇರುವ ಕಾಡು ಪ್ರಾಣಿಗಳು ಅಲ್ಲಿಯೇ ಬಂದು ನೀರು ಕುಡಿಯಬೇಕು. ಜನರ ಗಲಾಟೆಯಿದ್ದರೆ ಅವು ಸ್ವಲ್ಪ ಹಿಂಜರಿಯುತ್ತವೆ.

ನಾನು ಎದ್ದವನು ಕಿಟಿಕೆಯಿಂದ ನೋಡಿದೆ. ಬೆಳ ದಿಂಗಳು ಬಂದಿತ್ತು. ಚಿಲುಮೆಯ ಬಳಿ ಸಣ್ಣಗೆ ಎರಡು ದೀಪಗಳು ಕಂಡಹಾಗೆ ಕಾಣಿಸಿತು. ಕಣ್ಣುಜ್ಜಿಕೊಂಡು ನೋಡಿದೆ. ಚಿಲುಮೆಗೆ ಸ್ವಲ್ಪದೂರದಲ್ಲಿ ಒಂದು ಆಕಾರ ಕಾಣಿಸಿತು. ಚೆನ್ನಾಗಿ ದೃಷ್ಟಿಸಿ ನೋಡಿದೆ. ಮೇಲೆ ಚುಕ್ಕಿ ಗಳು ಕಾಣಿಸಿತು. ಆಗ ಗೊತ್ತಾಯಿತು ಚಿಲುಮೆಗೆ ಚಿರತೆ ಬಂದಿದೆ ಯೆಂತ.

ನಾನು ಎಷ್ಟೋ ದಿನ ಈ ಕಾಡಿನಲ್ಲಿ ಚಿರತೆ ನೋಡ ಬೇಕು ಎಂದು ರಾತ್ರಿಯೆಲ್ಲಾ ಕಾದಿದ್ದೆ. ಎಷ್ಟೋಜನ ಚಿರತೆ, ಹುಲಿ ಬಂದು ರಾತ್ರಿ ಹೊತ್ತು ಚಿಲುಮೆಯಲ್ಲಿ ನೀರು ಕುಡಿಯುತ್ತವೆಯೆಂದು ಹೇಳುತ್ತಿದ್ದರು. ಅದು ವರೆಗೆ ಕಾದರೂ ನೋಡುವುದಕ್ಕಾಗಿರಲಿಲ್ಲ. ಅಷ್ಟು ದಿವಸ ಗಳು ಕಾದದ್ದು ಆ ದಿನ ಸಾರ್ಥಕವಾಯಿತು. ಮಳೆಯಲ್ಲಿ ನೆನದದ್ದು ಮನಸ್ಸಿಗೆ ಹತ್ತಲಿಲ್ಲ. ಯಾಕೆಂದರೆ ಚಿರತೆ ನೀರು ಕುಡಿಯುವುದನ್ನು ನೋಡಬೇಕೆಂಬ ಹಂಬಲಿಕೆ ತೀರಿತು.

ಆದರೆ ಅದನ್ನು ನೋಡಬೇಕಾದದ್ದು. ರಾತ್ರಿ ಬೆಳ ದಿಂಗಳಿನಲ್ಲಿ, ಮಧ್ಯರಾತ್ರಿಯಲ್ಲಿ, ಕಾಡಿನ ಮಧ್ಯದಲ್ಲಿ ಲಾಡ್ಜಿನ ಒಳಗಡೆ ನಾವು, ಹೊರಗಡೆ ಚಿರತೆ ಆನಂದ ವಾಗಿ ನೀರು ಕುಡಿಯುತ್ತಾ ಇದೆ, ನಾನು ನೋಡಿ ಆನಂದ ಪಡುತ್ತಾ ಇದ್ದೇನೆ. ಈ ಆನಂದ ಬಾಕಿಯವರಿಗೂ ಇರಲಿ ಎಂತ ಎಬ್ಬಿಸಿದೆ. ಎಬ್ಬಿಸುವುದು ಕಷ್ಟವೇಆಯಿತು. ಪಾಪ ದಣಿದಿದ್ದ ಹುಡುಗರು ಬುಗುರಿಗಳ ಹಾಗೆ ನಿದ್ದೆಹೋ ಗುತ್ತಿದ್ದರು. ಗಲಾಟೆಯಾದರೆ ಚಿರತೆ ಓಡಿಹೋಗುತ್ತದೆ. ಹಾಗೂಹೀಗೂ ಆಗಿ, ಗೋವಿಂದಯ್ಯ, ಗುರುರಾಜು, ಬಸವರಾಜು, ವೀರಬಸವಯ್ಯಮಾತ್ರಎದ್ದರು. ಕಿಟಕಿಯ ಕಡೆ ತೋರಿಸಿದೆ. ಎಲ್ಲರೂ ನೋಡಿದರು. "ಸಾರ್ ಮಳೆಯಲ್ಲಿ ನೆಂದು ಉಪವಾಸ ಇದ್ದರೂ ಪರವಾಗಿಲ್ಲ ಸಾರ್. ಇದನ್ನ ನೋಡಿದ ಮೇಲೆ" ಎಂದರು. ಪರವಾ ಗಿಲ್ಲ ಹುಡುಗರು ಎಂದುಕೊಂಡು ಹಾಗೆ ಮಲಗಿಕೊಂಡೆ.

—ನಾನು

(ಮುಂದುವರಿಯುವುದು.)

ಕನ್ನಡ ಸಂಕೇತ ಕ್ರಮ

(ಮುಂದುವರಿದದ್ದು)

[ಕಳೆದ ಸಂಚಿಕೆಯಲ್ಲಿ ಕೆಲವು ಮುದ್ರಣ ದೋಷಗಳಿಂದ ಅರ್ಥ ವ್ಯತ್ಯಾಸವುಂಟಾಗಿದೆ. ಅವುಗಳನ್ನು ಇಲ್ಲಿ ಕೊಟ್ಟಿದೆ.

೧. ಪುಟ ೨೩, ಸಾಲು ೧, ಪಙ್ಕ್ತಿ ೨೪ "ಬಾಗಿಸು" ಎಂಬುದಕ್ಕೆ ಬದಲಾಗಿ "ಭಾಗಿಸು" ಎಂದು ತಿದ್ದಿಕೊಳ್ಳಬೇಕು.

೨. ಪುಟ ೨೩, ಸಾಲು ೧, ಪಙ್ಕ್ತಿ ೨೫ "ಭಾಗಿಸು" ಎಂಬುವಕ್ಕೆ ಬದಲಾಗಿ "ಬಾಗಿಸು" ಎಂದು ತಿದ್ದಿಕೊಳ್ಳಬೇಕು.

೩. ಪುಟ ೨೪, ಸಾಲು ೨, ಪಙ್ಕ್ತಿ ೩ "ಅಲು" ಎಂಬುದಕ್ಕೆ ಬದಲಾಗಿ "ಅಱು" ಎಂದು ಓದಿ ಕೊಳ್ಳಬೇಕು.

೪. ಪುಟ ೨೪, ಸಾಲು ೨, ಪಙ್ಕ್ತಿ ೧೦ "ಷ" ಎಂಬುದಕ್ಕೆ ಬದಲಾಗಿ "ಷ್" ಎಂದಿರಬೇಕು.

೫. ಪುಟ ೨೬, ಸಾಲು ೧, ಪಙ್ಕ್ತಿ ೧ ಇದು ೨ನೆಯ ಸಾಲಿನಲ್ಲಿ ಮೊದಲನೆಯ ಪಙ್ಕ್ತಿಗೂ ೨ನೆಯ ಪಙ್ಕ್ತಿಗೂ ಮಧ್ಯೆ ಬರಬೇಕು.

ಈ ದೋಷಗಳನ್ನು ವಾಚಕರು ಸರಿಪಡಿಸಿಕೊಳ್ಳಬೇಕಾಗಿ ವಿನಂತಿ.] —ಸಂಪಾದಕ

ಹಿಂದಿನ ಸಂಚಿಕೆಯಲ್ಲಿ ಸಂಕೇತ ಕ್ರಮವೆಂದರೇನು? ಇದರ ಅವಶ್ಯಕತೆಯೇನು? ಎಂಬ ವಿಚಾರಗಳನ್ನು ಪರಿಶೀಲಿಸಿ, ಕನ್ನಡ ಭಾಷೆಗೆ ಅನ್ವಯಿಸುವಂತೆ "ಸೆಮಾಫೋರ್" ಸಂಕೇತ ಕ್ರಮವು ಯಾವ ರೀತಿಯಲ್ಲಿರಬೇಕೆಂಬುದನ್ನೂ ಮತ್ತು ಉಚ್ಚಾರಣೆಗಳಿಗೆ ಸಂಕೇತಗಳನ್ನೂ ತಿಳಿದುದಾಯಿತು. ಈ ಸಂಚಿಕೆಯಲ್ಲಿ ಅದೇ ಉಚ್ಚಾರಣೆ (phonetics) ಗೆ ಸಂಬಂಧಿಸಿದಂತೆ "ಮೋರ್ಸ್" ಎಂಬ ಇನ್ನೊಂದು ಕ್ರಮವನ್ನು ಪರಿಶೀಲನೆ ಮಾಡೋಣ.

"ಸೆಮಾಫೋರ್" ಕ್ರಮವು ವರ್ತುಳಗಳ ಮೂಲಕ ಅಭ್ಯಾಸಮಾಡತಕ್ಕದ್ದಾದ್ದರಿಂದ ಕೆಲವರು ಇದನ್ನು ಕಲಿಯುವುದು ಸುಲಭವೆಂದು ಇದನ್ನೇ ಆಚರಣೆಗೆ ತಂದುಕೊಳ್ಳುತ್ತಾರೆ. ಕೆಲವರಿಗೆ ಈ ಕ್ರಮವು ಅಭ್ಯಾಸಕ್ಕೆ ಸುಲಭವಾಗಿ ಕಾಣಬಹುದು. ಆದ ಮಾತ್ರಕ್ಕೇ "ಮೋರ್ಸ್" ಕ್ರಮವು ಕಷ್ಟವಾದ್ದೆಂತ ಹೇಳಲಾಗುವುದಿಲ್ಲ. ನಾವೆಲ್ಲರೂ ಅಕ್ಷರಮಾಲೆಯನ್ನು ಕಲಿಯುವಾಗ ಅದು ನಮಗೆ ಸ್ವಲ್ಪ ಕಷ್ಟವಾಗಿಯೇ ಕಂಡಿರಬೇಕು. ಕಲಿತ ಮೇಲೆ ನಮಗೆ ಅದರ ಕಷ್ಟವು ಕಾಣುವುದಿಲ್ಲ.

ಪ್ರಯೋಜನದ ದೃಷ್ಟಿಯಿಂದ ನೋಡುವುದಾದರೆ "ಮೋರ್ಸ್" ಕ್ರಮವು "ಸೆಮಾಫೋರ್" ಕ್ರಮಕ್ಕಿಂತಲೂ ಹತ್ತುಪಾಲು ಮೇಲೆಂಬುದು ದೃಢಪಡುತ್ತದೆ. ಯಾಕೆಂದರೆ "ಸೆಮಾಫೋರ್" ಕ್ರಮವನ್ನು ನಿರ್ದಿಷ್ಟವಾದ ಬಾವುಟಗಳ ಚಲನೆಯಿಂದಲೇ ಉಪಯೋಗಿಸಬೇಕು. ಇದು ನೋಡುವುದಕ್ಕೆ ಆಡಂಬರವಾಗಿ ಕಾಣಬಹುದು. ಆದರೆ ಈ ಕ್ರಮವನ್ನು ಉಪಯೋಗಿಸುವಾಗ ವರ್ತಮಾನವನ್ನು ಕಳುಹಿಸುವವನೂ ಮತ್ತು ಓದಿಕೊಳ್ಳುವವನೂ ಪರಸ್ಪರ ಕಾಣುತ್ತಿರಬೇಕು. ಈ ಕಾರಣದಿಂದ ಇದು ಸಮೀಪದಲ್ಲಿ ಒಬ್ಬರಿಗೊಬ್ಬರು ಕಾಣುವಂತಿರುವಾಗ ಉಪಯೋಗಿಸಲ್ಪಡಬಹುದೇ ವಿನಹ, ಇತರ ಸಂದರ್ಭಗಳಲ್ಲಿ ಉಪಯೋಗಕ್ಕೆ ಬರುವುದಿಲ್ಲ.

"ಮೋರ್ಸ್" ಕ್ರಮದಲ್ಲಿಯೂ ವರ್ತಮಾನವನ್ನು ಕಳುಹಿಸಲು ವಿಧಾಯಕವಾದ ಬಾವುಟವಿದೆ. ಆದರೂ

ಇದನ್ನು ಬೆಳಕು, ಹೊಗೆ, ಶಿಳ್ಳೆ, ಪಂಜು ಇವುಗಳ ಸಂಬಂಧದಲ್ಲಿಯೂ ಉಪಯೋಗಿಸಬಹುದು. ಈಗ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ತಂತೀ ವರ್ತಮಾನವನ್ನು ಕಳುಹಿಸುವವರು ಈ ಕ್ರಮವನ್ನೇ ಉಪಯೋಗಿಸುತ್ತಾರೆ. ಈ ಕ್ರಮದಲ್ಲಿ ಒಂದು ಹ್ರಸ್ವ ಚಿಹ್ನೆ ● ಒಂದು ದೀರ್ಘ ಚಿಹ್ನೆ ▬ ಈ ಎರಡೇ ಇರತಕ್ಕವು. ಇವುಗಳನ್ನು ಬೇರೆ ಬೇರೆ ರೀತಿಯಿಂದ ಸಂಯೋಜನ ಮಾಡಿಕೊಳ್ಳುವುದರ ಮೂಲಕ ನಾವು ಉಚ್ಚಾರಣೆಗಳಿಗೆ ಸಂಕೇತಗಳನ್ನು ಏರ್ಪಡಿಸಿಕೊಳ್ಳಬಹುದು. ● ಈ ಹ್ರಸ್ವಚಿಹ್ನೆಗೆ "ಕಡ" ಎಂತಲೂ ▬ ಈ ದೀರ್ಘ ಚಿಹ್ನೆಗೆ "ಕಟ್ಟ" ಎಂತಲೂ ಕೆಲವರು ಹೇಳಿಕೊಂಡು ಅಭ್ಯಾಸಮಾಡುತ್ತಾರೆ.

ಈ ಕ್ರಮದಲ್ಲಿಯೂ ಉಚ್ಚಾರಣೆಗಳು ಹಿಂದೆ "ಸೆಮಾಫೋರ್" ಕ್ರಮದಲ್ಲಿ ಹೇಳಿರುವಂತೆಯೇ ಇವೆ. ಅದೇ ಆಧಾರದಮೇಲೆ "ಮೋರ್ಸ್" ಕ್ರಮದ ಸಂಕೇತವು ಈ ರೀತಿ ಇದೆ.

ಅ	●
ಇ	▬
ಉ	● ●
ಎ	▬ ▬
ಒ	● ▬
ಕ್	▬ ●
ಗ್	● ● ●
ಚ್	● ● ▬
ಜ್	● ▬ ▬
ಟ್	▬ ▬ ▬
ಡ್	▬ ● ●
ಣ್	▬ ▬
ತ್	▬ ● ▬
ದ್	● ▬ ●
ನ್	● ● ● ●
ಪ್	● ● ● ▬
ಬ್	● ● ▬ ▬
ಮ್	● ▬ ▬ ▬
ಯ್	▬ ▬ ▬ ▬
ರ್	▬ ● ● ●
ಲ್	▬ ▬ ● ●
ವ್	▬ ▬ ▬ ●
ಶ್	● ▬ ▬ ●
ಸ್	● ▬ ● ●
ಹ್	● ● ▬ ●
ಳ್	▬ ● ● ▬

ಅಂಕಿಗಳು.

೧	● ▬ ▬ ▬ ▬
೨	● ● ▬ ▬ ▬
೩	● ● ● ▬ ▬
೪	● ● ● ● ▬
೫	● ● ● ● ●
೬	▬ ● ● ● ●
೭	▬ ▬ ● ● ●
೮	▬ ▬ ▬ ● ●
೯	▬ ▬ ▬ ▬ ●
೦	▬ ▬ ▬ ▬ ▬
ಹೊಡಿ	● ● ● ● ● ●

ಈ ಕ್ರಮದಲ್ಲಿ ಸಂಖ್ಯೆಗಳಿಗೇ ಬೇರೆ ಸಂಕೇತಗಳಿರುವುದರಿಂದ "ಸೆಮಾಫೋರ್" ಕ್ರಮದಲ್ಲಿರುವಂತೆ ಅಕ್ಷರ ಚಿಹ್ನೆ ಮತ್ತು ಸಂಖ್ಯೆಯ ಚಿಹ್ನೆಗಳ ಅವಶ್ಯಕತೆಯಿಲ್ಲ. ಮತ್ತು ಅವುಗಳಿಂದಾಗುವ ತೊಡಕೂ ಇಲ್ಲ.

ಇಂಗ್ಲೀಷಿನಲ್ಲಿ "ಮೋರ್ಸ್" ಸಂಕೇತಗಳಿಗೂ ಮೇಲೆ ಹೇಳಿರುವ ಕನ್ನಡದ ಸಂಕೇತಗಳಿಗೂ ಸಂಬಂಧವೇ ಇಲ್ಲ. ಮೇಲೆ ಹೇಳಿರುವ ಸಂಕೇತಗಳನ್ನು ಕಲಿಯುವುದು

ಇಂಗ್ಲೀಷಿಗಿಂತಲೂ ಸುಲಭ. ಯಾಕೆಂದರೆ ಕನ್ನಡದ ಸಂಕೇತವು ಒಂದು ಕ್ರಮದಲ್ಲಿ ಬರುತ್ತದೆ.

ಈ ಮೋರ್ಸ್ ಸಂಕೇತವನ್ನು ಯಾವ ಸಂದರ್ಭದಲ್ಲಿ ಯಾದರೂ ಯಾವ ಕಾಲದಲ್ಲಾದರೂ ಕಳುಹಿಸಬಹುದು. ಇದರಲ್ಲಿ ವರ್ತಮಾನ ಕಳುಹಿಸುವವನೂ ಮತ್ತು ಓದಿಕೊಳ್ಳುವವನೂ ಪರಸ್ಪರ ಕಾಣುತ್ತಿರಬೇಕಾದ್ದಿಲ್ಲ. ಇದಕ್ಕೆ ಟಿಲಿಗ್ರಾಫ್ ಉದಾಹರಣೆಯಾಗಿದೆ. ಅನೇಕ ಮೈಲಿಗಳ ಅಂತರದಲ್ಲಿರುವವರು ಕೂಡ ಇದರಿಂದ ಪರಸ್ಪರ ಸಂಕೇತಗಳನ್ನು ಕಳುಹಿಸಬಹುದು.

ಹಾಗೆಯೇ ದೂರದಲ್ಲಿ ಒಂದು ಬೆಟ್ಟದ ಮೇಲಿರುವವರು ಕಸಕಡ್ಡಿಗಳನ್ನು ಶೇಖರಿಸಿ ಅದಕ್ಕೆ ಬೆಂಕಿಯಿಟ್ಟು ಹೊಗೆ ಬರುವಂತೆ ಮಾಡಿ ಅದರ ಮೇಲೆ ಒಂದು ದಪ್ಪನಾಗಿ ಅಗಲವಾಗಿರುವ ಹಚ್ಚಡವನ್ನು ಒದ್ದೆಮಾಡಿ ಹಿಡಿಯುವುದು, ತೆಗೆಯುವುದು ಮಾಡುವುದರ ಮೂಲಕ ಹೊಗೆಯು ಸ್ತಂಭಾಕಾರವಾಗಿ ಏಳುವಂತೆ ಮಾಡಿ ಅದರಿಂದ ಹ್ರಸ್ವ ಮತ್ತು ದೀರ್ಘ ಚಿಹ್ನೆಗಳು ಉಂಟಾಗುವ ಅವಕಾಶವನ್ನುಂಟುಮಾಡಿಕೊಂಡು ಆ ಮೂಲಕ ವರ್ತಮಾನವನ್ನು ಕಳುಹಿಸಬಹುದು.

ರಾತ್ರಿಯಹೊತ್ತು ಅದೇ ಬೆಂಕಿಯ ಮುಂಭಾಗದಲ್ಲಿ ಅದೇ ಹಚ್ಚಡವನ್ನು ಹಿಡಿದು ತೆಗೆದು ಮಾಡುವುದರ ಮೂಲಕ ಬೆಂಕಿಯು ಕಾಣಿಸುವ ಕಾಲದ ಅಂತರವನ್ನು ಹೆಚ್ಚುಕಡಮೆ ಮಾಡುವುದರ ಮೂಲಕ ವರ್ತಮಾನವನ್ನು ಕಳುಹಿಸಬಹುದು

ಹೀಗೆಯೇ ಯೋಚನೆಮಾಡುತ್ತಾ ಹೋದರೆ ಹತ್ತಾರು ರೀತಿಗಳು ತಾವಾಗಿಯೇ ಹೊಳೆಯುತ್ತವೆ. ಸಾಧನಗಳು ಬೇರೆ ಬೇರೆಯಾದರೂ ಸಂಕೇತವು ಮಾತ್ರ ಒಂದೇ ಆಗಿದೆ.

ಈ ಕ್ರಮದಲ್ಲಿಯೂ ದೀರ್ಘ ಸ್ವರಗಳು ಬೇಕಾದಾಗ ಹ್ರಸ್ವ ಸ್ವರಗಳನ್ನು ಎರಡು ಬಾರಿ ಉಪಯೋಗಿಸಬೇಕು. ಹಾಗೆಯೇ ಮಹಾ ಪ್ರಾಣಾಕ್ಷರಗಳು ಅವಶ್ಯಕವಾದಾಗ ಅಲ್ಪಪ್ರಾಣಾಕ್ಷರಕ್ಕೆ ಹ್ ಕಾರವನ್ನು ಸೇರಿಸಿ ಅನಂತರ ಬೇಕಾದ ಸ್ವರವನ್ನು ಸೇರಿಸಬೇಕು. "ಭ" ಎಂಬುದು ಭ್, ಹ್, ಅ ಎಂದಾಗುತ್ತದೆ.

"ಐ" ಎಂಬುದು "ಅಇ" ಎಂತಲೂ "ಔ" ಎಂಬುದು "ಅಉ" ಎಂತಲೂ "ಷ" ಎಂಬುದು "ಶ್‌ಹ್‌ಅ" ಎಂತಲೂ ಉಚ್ಚಾರಣೆಯಾಗುತ್ತದೆ. ಹೊಡಿ ಎಂಬುದಕ್ಕೆ ಬೇರೆ ಸಂಕೇತವೇ ಇದೆ. ಉಚ್ಚಾರಣೆಗಳನ್ನು ಸಂಕೇತ ಕ್ರಮದಲ್ಲಿ ಕಳುಹಿಸುವಾಗ ಒಂದು ಉಚ್ಚಾರಣೆಗೂ ಮತ್ತೊಂದಕ್ಕೂ ಮಧ್ಯೆ ಸ್ವಲ್ಪ ವಿರಾಮ ಕಂಡುಬರುವಂತೆ ಕಳುಹಿಸಬೇಕು. ಇಲ್ಲವಾದರೆ ತೊಂದರೆಗೆ ಕಾರಣವಾಗುತ್ತದೆ. ಹೇಗೆಂದರೆ—"ಐ" ಎಂಬುದನ್ನು ಸಂಕೇತದಲ್ಲಿ ಕಳುಹಿಸುವಾಗ "ಅಇ" ಎಂದು ಕಳುಹಿಸಬೇಕು. ● ಅ ಮತ್ತು ▬ ಇ ಎರಡೂ ಸೇರಿ ಐ ಎಂದಾಗುತ್ತದೆ. ಇವೆರಡನ್ನೂ ಕಳುಹಿಸುವಾಗ ಮಧ್ಯೆ ವಿರಾಮವಿಲ್ಲದಂತೆ ಕಳುಹಿಸಿದರೆ ಅದು ಬೇರೆ ಸಂಕೇತವಾಗಿ ಉಚ್ಚಾರಣೆಯೇ ಬೇರೆಯಾಗುತ್ತಿದೆ. ● ▬ ಇದು ಒ ಎಂಬುದಕ್ಕೆ ಸಂಕೇತ. ಐ ಎಂಬುದಕ್ಕೆ ಬದಲಾಗಿ ಒ ಎಂದಾಗುತ್ತದೆ. ಹಾಗೆಯೇ ಚ ಎಂಬುದಕ್ಕೆ ಚ್ ● ● ▬ ಅ ● ಎಂಬುದು ಸಂಕೇತ. ಮಧ್ಯೆ ವಿರಾಮವಿಲ್ಲದೆ ಕಳುಹಿಸಿದರೆ ಹ್ ● ● ▬ ● ಎಂದಾಗುತ್ತೆ. ಆದ್ದರಿಂದ ಸ್ವಲ್ಪಮಾತ್ರ ವಿರಾಮವಿರುವಂತೆ ಕಳುಹಿಸಬೇಕು ಹೆಚ್ಚು ವಿರಾಮವನ್ನೂ ಕೊಡಬಾರದು.

ಹಾಗೆಯೇ ಒಂದು ಉಚ್ಚಾರಣೆಯ ಸಂಕೇತವನ್ನು ಕಳುಹಿಸುವಾಗ ಮಧ್ಯೆ ವಿರಾಮವನ್ನು ಕೊಡಕೂಡದು. ಹಾಗೆ ಮಾಡಿದರೆ ಅದು ಬೇರೆ ಸಂಕೇತವಾಗುವುದು. "ವ್" ಎಂಬುದಕ್ಕೆ ▬ ▬ ▬ ● ಎಂಬುದು ಸಂಕೇತ ಇದನ್ನು ಕಳುಹಿಸುವಾಗ ▬ ▬ ಎಂಬುದನ್ನು ಕಳುಹಿಸಿ ವಿರಾಮ ಕೊಟ್ಟು ▬ ● ಎಂಬುದನ್ನು ಕಳುಹಿಸಿದರೆ ಓದಿಕೊಳ್ಳುವವನು ಎಕ್ ಎಂದು ಓದಿಕೊಳ್ಳುತ್ತಾನೆ.

ಈ ಕಾರಣಗಳಿಂದ ಕಾಲದ ಪ್ರಮಾಣವನ್ನು ಸರಿಯಾಗಿ ಅರಿತು ಅಭ್ಯಾಸಮಾಡಬೇಕು. ● ಈ ಚಿಹ್ನೆಗೆ ತೆಗೆದುಕೊಳ್ಳುವ ಕಾಲದ ಮೂರರಷ್ಟು ಕಾಲವನ್ನು ▬ ಈ ಚಿಹ್ನೆಗೆ ತೆಗೆದುಕೊಳ್ಳಬೇಕೆಂದು ವಿಧಿ.

ಇಷ್ಟು "ಮೋರ್ಸ್" ಸಂಕೇತ ಕ್ರಮದ ವಿಚಾರವಾಯಿತು. ಮುಂದಿನ ಸಂಚಿಕೆಯಲ್ಲಿ "ಮೋರ್ಸ್" ಮತ್ತು "ಸೆಮಾಫೋರ್" ಕ್ರಮಗಳಲ್ಲಿ ಬರುವ ಹೆಚ್ಚಿನ ಸಂಕೇತಗಳನ್ನು ಕುರಿತು ಬರೆಯುತ್ತೇನೆ.

—ಸಂಕೇತಗಾರ

ಹ ಳ್ಳಿ ಗ ಳು ಳಿ ಸೋ ।

ಹಳ್ಳಿಗಳುಳಿಸೋ ಮಾದೇವ।
ಹಳ್ಳಿಗಳುಳಿಸೋ ನೀದೇವ। ||ಪ||
ಪುರದೊಳು ಪ್ರಳಯವು ಆಗದು ದೇವಾ।
ಅರಿದ ಹಳ್ಳಿಗೆ ಬೀರೋ ಜೀವಾ|| ||ಅ||ಪ||

ನಕ್ಷತ್ರಗಳಂತೆಮ್ಮ ಹಳ್ಳಿಗಳೆಲ್ಲಾ।
ಅಕ್ಷಯದಿಂದಲೆ ಬೆಳಗಿದೂವಲ್ಲಾ||
ಸಾಕ್ಷಿಯು ಪಾಳಿನ ಮಾಳಗಳಿವೆಲ್ಲಾ।
ರಕ್ಷಿಸೊ ಪಾಲಾಕ್ಷ ರೈತರನೆಲ್ಲಾ|| ||೧||

ಸಾಲುಶತಮಾನ ಸಂದೀತಲ್ಲಾ।
ಮೇಲುಹೊಲವೆಲ್ಲ ಬೀಳಾಯಿತಲ್ಲಾ||
ಪಾಲ ಹಳ್ಳಿಗೆ ನೀರಿಲ್ಲದಾಯಿತಲ್ಲಾ।
ಪಾಲಿಸೊ ಪಾಲಾಕ್ಷ ರೈತರನೆಲ್ಲಾ|| ||೨||

ಪೆಟ್ಟಾಗಿ ಬೆಳೆಯುತ ಪೇಟೆಗೆ ಡೊಳ್ಳು।
ಸುಟ್ಟಿತೋ ಹಳ್ಳಿಯ ಹೊಟ್ಟೆಯಕಳ್ಳು||
ಕಟ್ಟುತ ಪೇಟೆಯು ರಂಗಿನ ಪಟ್ಟು।
ಕೊಟ್ಟಿತೊ ಹಳ್ಳಿಗೆ ಗೋಣಿಯ ತಟ್ಟು|| ||೩||

ಇಂದಿನ ಓಟಾಕೆ ಹಳ್ಳಿಯು ಸಿಕ್ಕಿ।
ಮುಂದನು ಕಾಣದೆ ಅಳುತಿದೆ ಬಿಕ್ಕಿ||
ನಿಂದಿದೆ ನೋಡದು ಮಣ್ಣನು ಮುಕ್ಕಿ।
ಬಂಧನ ಬಿಡಿಸುವೆ ಎಂದಿಗೊ ನುಗ್ಗಿ|| ||೪||

ಬಲ್ಲೋರು ಎಲ್ಲಾರು ಹಳ್ಳಿಯ ಬಿಟ್ಟೇ।
ಮೆಲ್ಲನೆ ಹಿಡಿಯಿತೊ ಹಳ್ಳಿಗೆ ಕುಟ್ಟೇ||
ಹಳ್ಳಿಯ ಹೆಸರದು ಡಿಳ್ಳಿಗೆ ಮುಟ್ಟೇ।
ನಿಲ್ಲಿಲೊ ಬಾಲಕ ಕಂಕಣ ತೊಟ್ಟೇ। ||೫||

—ನೀಲ.

ಬೃಂ ದಾ ವ ನ

ಕನ್ನಡನಾಡಿನ ಘನತೆಯನುರದಲಿ ಹೊತ್ತು,
ಕೃಷ್ಣನ ಸಾಗರವೆಸೆದಿತ್ತು!
ಚೆನ್ನಿಗೆ ಚಿನ್ನದಪಟ್ಟೆಯನಿಟ್ಟಂತೆ, ರನ್ನದ
ಕಟ್ಟೆಯು ಕತ್ತಲೊಳೆಸೆದಿತ್ತು!
ಭೂಮಿಗೆ ಬಂದಿಹ ತಾರೆಗಳಂದದೊಳೆತ್ತಲು
ಮಣಿಮಾಲೆಯ ತಾಮಿಣುಗಿತ್ತು!
ಬನದೇವಿಯೆ ಹಾಸಿದ ಸೆರಗಂದದಿ-ಹಸುರೆ
ಲ್ಲೆಲ್ಲಿಯು ಚಂದದಿ ಹರಡಿತ್ತು!
ಕಾವೇರಿಯ ಸಾವಿರ ಕುವರಿಯರೇಳುತ, ಬನ
ದೆಲ್ಲೆಡೆ ಕುಣಿ ಕುಣಿದಾಡಿದರು!
ನಾಡಿನ ಕೀರ್ತಿಪತಾಕೆಗಳೆಂಬಂ ತೆಲ್ಲಿಯು-
ಬಣ್ಣದ ಹನಿಗಳು ಹಾರಿದುವು!
ಚೆಲ್ಲುತ ಚೆಲುವನೆ-ಧರೆಯಿಂದೆದ್ದುವು-ನೋಡಲು
ರನ್ನದ ರಾಸಿಗಳವು ಕೆಲವು!
ಚಿನ್ನದ ನಾಡಿನ ಚೆನ್ನನ ನಡೆಯನು, ಕನ್ನಡ
ದಾಡಿದುವವು ಮೌನದಿ ಕೆಲವು!

ಎಮ್ಮೊಡೆಯನ ಬೆಳ್ಗೊಡೆಯಂದದೊಳೆದ್ದುವು,
ಬಗೆಬಗೆ ಬೆಳಕಿನ ಬುಗ್ಗೆಗಳು!
ಬಿಮ್ಮನೆ ಮಿಂಚಲಿ ಹನಿಗಳ ಬಿಗಿದಂ ತೊಲವಿಂ
ಬಿಗಿದಿಹ, ನಾಯಕ-ನಾಡಿದನು!
ಬಂಧಿಸೆ ಬಂಧವ-ಬಲವನು ಬಗೆಯುತ-ಕಾವೇ
ರಿಯು ನೋಡದೊ ಚಲಿಸಳು ಇಲ್ಲಿ!
ಬೃಂದೆಯ ವನದೊಳು ನಾಲುಮಡಿ ಕೃಷ್ಣಗೆ ಎತ್ತಿದ
ಮುತ್ತಿನ ಆರತಿ ನೋಡದೊ ಚೆಲ್ಲಿ!
ತನ್ನಯ ಬೆಳಕಲೆ ತಾ ಕುಣಿಯುತ ದೇವಿಯು, ಮಣಿ
ದಿಹಳೊಡೆಯಗೆ, ತಾನೊಲಿದಿಲ್ಲಿ!
ಹೆಮ್ಮೆಯ ನಾಡೋಳು-ಎಮ್ಮನು ನಿಲಿಸುತ-ಪೊರೆವಾ
ತನ, ನೆನೆಯನೆ ನಾಡಿಗನಿಲ್ಲಿ?

—ನೀಲ.

(ಸ್ಕೌಟ್‌ದಳದೊಂದಿಗೆ ಬೃಂದಾವನವನ್ನು ಸಂದರ್ಶಿಸಿದಾಗ)

PRICE LIST OF

Books, Badges and Photographs

Available at the Scout Headquarters,

Fort, Bangalore City.

	Each Rs.	A.	P.
Badges-Rovers—Rover Pin ...	0	6	0
Rover Badge ...	0	4	0
Scouts—Tenderfoot ...	0	2	0
P. L. ...	0	2	0
II Class ...	0	2	0
I Class ...	0	4	0
Scoutmaster's ...	0	4	0
A. S M's' ...	0	4	0
Maharaja's Badge ...	0	8	0
Commissioner's ...	0	8	0
Precisely at 7 p. m. the guest presided over the camp-fire which he declared open amidst cheers. For nearly 1½ hours the gathering consisting of many ladies and gentlemen of this place enjoyed the interesting items displayed by Cubs, Scouts and Rovers. Then the Chief Scout Commissioner delivering his invaluable speech stressed upon the value of Scouting, the various modes in which Scouts could be beneficial to villagers and their neighbours around. He also exhorted the young boys to attend "Yoga and Physical Culture classes," a demonstration of which was held during the programme.

In the end the District Scout Commissioner and the Headmaster, High School, Chitaldrug thanked the guests of the day and one and all that had assembled. The function terminated at 8-30 p. m. after singing the National Anthem.

* * * *

Hike to Jogimaradi Hills.

Lead by Mr. W. T. Hanumanta Rao, District Scout Commissioner, a party of a dozen Scouts, had a fine rambling round the hills of the famous Jogimaradi forest. All the Scouts had brought their own food from their houses in their back-packs, in the shape of bread, butter, chapatis and fruits. No special cooking arrangement was made. It was the primary idea of the party to test whether the Scouts could sustain themselves for a whole day on bread, butter, fruit and lemon squash.

The party started at 8 a.m., after taking their fill and reached Jogimatti, a Hill station at 10 a.m., covering a distance of 6 miles. After rest for half an hour and light lunch, they strolled in the forest for 2 hours and returned to the camp at 12-45 noon. Between 2 and 4 p.m. they had interesting Scout tests and chats. After having cool drinks they hiked back home through dense forests exploring their own way. In all

they covered nearly 20 miles without cooked food which amply proves the potent powers of young boys. During the stay the District Scout Commissioner and Scout Master K. Prahlada Rao inspected some camping grounds with a view to running a Training Camp.

The attempt was the first of its kind undertaken by the Scouts and it is highly creditworthy that it was successful. The party came to realise that much of the time which was being utilised in cooking food could very well be devoted to useful Scouting programmes.

FROM THE EDITORIAL LAIR

St. John Ambulance Association.

The members of the Ambulance Sub-committee of the above Association were "At Home" on the evening of the 19th March to Sir Mirza M. Ismail, K. C. I. E., O. B. E., Dewan of Mysore, to celebrate the happy event of his having been decorated as Commander (Associate) of the Venerable Order of the Hospital of St. John of Jerusalem. This pleasant function took place in the hall of the Bangalore Co-operative Bank, as the Association itself has no home of its own.

On arrival, Sir Mirza was received by the members of the Sub-committee and conducted to the Hall. It was a large gathering of Ambulance workers, and other distinguised people. The invitees were treated to refreshments, catered by Mr. B. T. Ramiah.

Captain Y. V. Iya, I.M.S., Secretary of the Association, welcomed the distinguished guest and expressed the joy of all the Ambulance workers for the special honour that was conferred on him.

After "Tea", Mr. P. K. Rajagopalan, Principal, Triumph Tutorial College, Madras, who was here on tour, at the request of Mr. S. G. Sastry, Assistant Commissioner of the Association, Mysore State (Ambulance District) made an interesting speech on his impressions of Mysore. He detailed the very efficient and excellent way in which everything was managed under the present administration. He characterised Sir Mirza as a "Human Being" as everything connected with his administration was looked at from a human point of view. He admired the very human way in which even the inmates of the Jail and the Mental Hospital were handled and felt sorry that he was not an inmate of either of them.

Sir Mirza replying thanked Mr. Rajagopalan for the kind words that he had said about him and his administration and said that for the past few months, he could not get even an hour for himself. He said that Ambulance work was of the utmost importance and that so far he could not devote much of his time to it. He assured every one that he would associate himself more closely with the work hereafter.

As an earnest of what he said, he immediately got into the company of young fellows who were all Ambulance-men and spent a pleasant quarter of an hour freely discussing with them and keeping the whole group merry with his witty remarks.

The Association is making an earnest attempt to have a building for its Headquarters.

Ambulance Camp.

The St. John Ambulance Brigade Overseas, Mysore State intends holding a Training Camp for members of the Brigade during the latter part of April 1938. Members of the Brigade who are willing to attend the camp may apply immediately to the Dist. Superintendent, St. Johns Ambulance Brigade Overseas, Scout Headquarters, Fort, Bangalore City.

The Second Round Table Conference.

The atmosphere of hopefulness that was brought into being after the session of the First Round Table Conference regarding the establishment of a National Association for the whole of India, has been surcharged with clouds of doubt and despair.

We have published elsewhere in this issue, a copy of the letter sent by the Chief Scout Commissioner for India to Pandit Hriday Nath Kunzru, Chief Commissioner of the Seva Samithi Boy Scouts Association, who is also one of the Secretaries appointed by the First Round Table Conference. The letter makes it clear that the General Headquarters are not in agreement with most of the important modifications proposed by the Conference, but that they are prepared to take into their fold other Associations like the Seva Samiti, if they subscribe to the views of the General Headquarters.

Mr. K. Sanjeeva Kamath, Provincial Secretary of the Madras Association has written in the South India Boy Scout (published elsewhere in this issue) meeting the points raised by the Chief Commissioner for India.

In the meantime, the Second Round Table Conference which should have met on the 17th and 18th of March 1938, has been postponed, although the meeting of the Working Committee was advertised to be held on the 15th and 16th of March, to draft the constitution.

The postponement of the Conference has no doubt given some more time for all those that are concerned to think over the matter so that some satisfactory arrangement may finally be arrived at, but for those who are anxious about unity, the suspense is very trying. A quick decision one way or the other is really necessary, for it has been impossible for many people to make any progress as in effect they have got to be marking time awaiting some useful result to transpire.

We hope that the 2nd Conference would meet in the immediate future and give Indian Scouting something tangible and something to be proud of.

Investitures.

Some of the reports that we have received disclose that Investitures are being conducted by persons who have not even taken the Scout Promise.

We wish to emphasise the fact that primarily, it it is at once the duty and previlege of the Scoutmaster himself to invest his Scouts and even if this duty is performed by some one else, it is most necessary that it should be performed by one who himself has taken the Promise and is a Scout Officer either warranted or non-warranted. For, it is very essential that one who performs the duty of investing, should know the significance of the ceremony and the correct form in which it is to be conducted. This habit of getting it done by any one who comes in handy cannot be too strongly deprecated.

We hope that those who may hereafter be requested to perform this function will be good enough to refuse to do so, unless they feel that they are qualified in every way to do so.

Summer Camps.

Now that Schools and Colleges have closed after strenuous work, it is but right that there should be healthy relaxation as a relief from work. So far as Scouts are concerned, we feel sure that they cannot do better than trying camping for a few days at least.

After the close of last summer, we learnt that there were very few camps during the recess. We then expressed a hope that our Scouts would give a better account of themselves during this summer.

We take this opportunity of reminding Scouts and Scouters that this is a unique opportunity for camping. Being summer, it does not require much in the way of personal equipment to go out camping. One finds that there are many places, very often in the immediate vicinity, which are good for summer-camping, although they may not be so abundant in other seasons. The time-honoured excuse of cost need not be pleaded. Where there is a will, there is sure to be a way. Let each boy carry provisions from his home, sufficient for four days at least, and cook his own food in camp. The distance to the camp can easily be negotiated on foot. May we venture to hope that our next issue will be flooded with reports of camping activities? We appeal to the Scouters in charge of units and the Commissioners in charge of Districts to become camping-minded.

Acknowledgments.

The Cairo British Boy Scout Association have kindly sent us a copy of "Scouting", their Official Journal. It is an interesting Magazine with plenty of useful information.

It also abounds in advertisements of a varied character. It is now in the 4th year of its existence and we wish it a long life.

The Boy Scouts Association, Jaipur State, have started "The Jaipur Scout", their Official Magazine just a few months back and they have kindly sent us a copy of their February issue. We take this opportunity of welcoming a useful organ in a sister State Association. In addition to the English section, it has a vernacular section as well and contains interesting matter. The get-up of the Magazine is very attractive.

As it is just making its debut, we wish it a long life of useful service.

The Prospect.

The month of April is expected to be a very busy one. Apart from Troop and Patrol camping, there is going to be a bumper crop of Training Camps. The Chitldroog District is contemplating an advance Course for Cub-masters. The K. G. F. District has planned a Camp for Patrol Leaders from about the 20th to 24th of April. Kolar is getting busy with two Preliminary Courses, one for Scout-masters and another for Cub Masters. Shimoga is contemplating Camps for Scout-masters and Cub Masters. Chickamagalur has before it, the holding of a Camp for village officers.

The New Year.

The Chandramana New Year commences on the date on which our present issue leaves. As most of our Scouts and Scouters observe this calendar, we wish them all a Happy New Year.

—Grey Brother.

Copy of Letter from the Nawab of Chhatari, Chief Scout Commissioner for India to Pandit Hriday Nath Kunzru, Chief Commissioner of the Seva Samiti Boy Scouts Association, conveying the views of the Council which met at Delhi on the 4th of February 1938.

My Dear Panditji,

I summoned a meeting of the Headquarters Council of the Boy Scouts Association in India on the 4th February. The recommendations of the Conference held at Allahabad on the 28th and 29th of November 1937, were considered.

The Council has already approved the idea of a United Boy Scouts Association in India at the previous meeting on the 17th November 1937, and welcomes your co-operation. While the Council is in general agreement with most of the recommendations of the Allahabad Conference, it feels strongly that the unity aimed at can be achieved only if the fundamental principles of Scouting are kept strictly in view and, in particular, if the Scout Promise is retained unchanged. The Council is unable to discover any justification for the omission of the phrase "King-Emperor" from the Promise and is therefore unable to approve of the recommendation to the contrary made at the Allahabad Conference. It ought not to be forgotten that, among others, the Ministers and other members of legislative bodies and high Servants of the Crown, take the oath of allegiance to His Majesty the King-Emperor. The Council, therefore, is unable to appreciate why there should be any objection if the boys of India, to whom the personal aspect of Kingship is more easily intelligible than a constitutional abstraction, promise to "do their duty" to His Majesty the King-Emperor.

The Council desires to make it clear that as the basis for future discussion the fundamental points ought to be kept in view:—

1. That any national association should be non-military, non-political, non-communal and non-sectarian.

2. The badge might be the present Scout Badge surrounded by the outline of the map of India. It is considered that this device will be more acceptable to the several communities supporting the Movement than that embodying the ten-petalled lotus.

3. That with regard to the Scout Promise, and the points noted above complete uniformity should be aimed at, and that no variation should be permitted within the Provinces.

The Council considers that the word "Boy" should preceed the words "Scout Association" in order to emphasize that the Association is for the benefit of boys. The phrase "Boy Scout" has undoubtedly acquired a world-wide significance and tradition.

I hope that the above suggestion will receive serious consideration. I will welcome your views at your convenience.

I propose to send a copy of this letter to the Press.

Yours cordially and fraternally,
(Sd). AHMED SAID.
Nawab of Chhatari.

No Saturday.

Scout:—Can we go out for hiking on Saturday the 28th of May of this year?

Patrol Leader:—What! Saturday the 28th of May? Does such a day exist? Look up the Calendar of The Bangalore Press. You should know that 28th of May does not exist this year.

HEADQUARTERS' NOTICES.

Scoutmasters Training Camp for Village Officers held at Hoskote from 5th to 13th February 1938 :—

Peacock Patrol

Brothers—

1 H C Basappa, Municipal Councillor, Hoskote
2 Syed Mohamod Sahib, Patel, Kadugodi P O
3 K Kalinga Rao, Shanbhogue, Ummalu, Narasapur P O
4 G Lagume Gowda, Patel, Ummalu, Narasapur P O
5 K Gopala Rao, Shanbhogue, Doddaralagere, Hoskote
6 Muniyappa, Patel, Gonakanahalli, Hoskote
7 D Venkatagiri Rao, Shanbhogue, Makanahalli, Devangundi
8 S A Rasool Khan, School Master, Hosahalli

Ram Patrol

1 H B Abdul Sattar, Municipal Councillor, Hoskote
2 Narayana Gowda, do
3 H V Kuppu Rao, do
4 H N Venkatasanjeeviah, Shanbhogue, Kannamangala
5 N Shamanna, Shanbhogue, Guttadahalli, Hoskote P O
6 B R Aswathanarayana Rao, Shanbhogue, Theniyur (Bendiganahalli)
7 Deve Gowda, Chairman, Village Panchayet, Devangundi
8 Venkatagiriappa, Agriculturist, Jadigenahalli

Bull Patrol

1 H Lal Singh, Municipal Councillor, Hoskote
2 G Abdul Sattar, do do
3 M Rudrappa, Patel, Bommenahalli, Hoskote
4 H Nagesha Rao, Shanbhogue, Mutsandra, Hoskote
5 K Rama Rao, Shanbhogue, Begur, Hoskote
6 J Venkatachaliah, Shanbhogue, Thammarasanahalli, Hoskote
7 Narayanaswamy, Shopkeeper, Jadigenahalli

Warrants issued and renewed during March 1938.

K. G. F. DISTRICT.

Renewed—

1 O V Rajagopal, Assistant District Scout Commissioner, K G F
2 Robert Jacob changed from Cubmasters to Scoutmaster.

Fresh Warranst—

1 C N Arunachalam, S M, 4th K G F
2 Miss F Francis, Assistant S M, 8th K G F
3 C T Morritt, S M, 8th K G F
4 Miss P White, A S M, 9th K G F
5 E A Mathews, S M, 9th K G F
6 Miss L O'Brien, C M, 8th and 9th K G F
7 Miss Francis, A S M, 8th K G F
8 ,, P White. ,, 9th K G F

KADUR DISTRICT.

1 K Ananthanarayana, C M, Ajjampur
2 A Siddoji Rao, ,, ,,
3 H Narasimiah, S M, ,,

SHIMOGA DISTRICT.

1 C Mallappa, C M, Bardwalli
2 K Krishnappa, C M, Humchadakatte
3 K Madhava Rao, C M, Shiralkoppa
4 N D Venkataramaiah, S M, Negaravalli
5 K Hutchachar, C M, Belagavi

FROM FAR AND NEAR.

The Province of Madras has gone a step further by adopting the policy enunciated at the 1st Round Table Conference. It will announce its decision to have one organisation in the Province before the end of March.

* * * *

Travancore has announced the holding of an All-India Scout Rally in the month of November next. A large number of Scouts from several Provinces and States is expected to participate in the "Big Event".

* * * *

The Australasian Jamboree will be held from 29th December 1938 to 9th January 1939, at Bradfield, about 9 miles from Sydney, Australia. Sub-committees are engaged in arranging the general programme, pageants, displays and other forms of entertainments, camp-fire programmes, medical arrangements and other details.

The Jamboree Camp will be a miniature city; there will be a shopping centre, with stores, photographic materials and "same-day" services, Post Offices and Banks.

The total charge for the Jamboree will be £ 2/- which sum will cover costs after arrival at the camp. It will include uncooked rations, water, fuel, light, washing places and medical and other services for the period of the Jamboree. Transport charges will be additional.

Lord Baden-Powell with Lady Baden-Powell will attend the Jamboree.

* * * *

Monsieur Chancerel has planned a rejuvination of dramatic art in France and has selected a dozen Rovers for his experiment. They have formed themselves into a company known as The Comedian Routier, a repertory company in which dramatic art forms their social service.

The favourite part of their job, in addition to other activities, is to go round touring the Provinces or the poorest slums of Paris, wherever their help is needed. The programme of the show is always adapted according to circumstances. They went out of France and quite recently carried out a successful tour in Belgium.

[A good example for our Rovers to follow.—EDITOR.]

* * * *

The Scouts of Broken Hill (W. Australia) went out from house to house, collected 1,200 empty medicine bottles and handed them to the local hospital as their Troop Good Turn.

[Local Scouts, please copy—EDITOR.]

---

6 S Shamachar, C M, Doorvasapuram
7 K Soma Sastry, S M, Honnali.

UNIVERSITY DISTRICT, BANGALORE.

1 M L Ramanna, A S M, University Scout Group, Bangalore
2 M V Venkatakrishniah, B A, Assistant Rover Scout Leader, Bangalore
3 T Tatachar, B Sc, (Hons), Assistant Rover Scout Leader, Bangalore
4 Dr P Krishna Rao, B Sc, D T M & H, R S L, Bangalore.

BANGALORE DISTRICT.

1 S L Sastri, C M, 44th Bangalore
2 T Venkatarangachar, S M, 44th Bangalore
3 T Subbramiah, C M, Gigani
4 K Narayana Rao, C M, Gudemaranahalli
5 A Syed Abdul Kareem, C M, Attibele.

MYSORE DISTRICT.

1 H K Narasimhachar, S M, Saragur.

BOYS' SECTION

ಹುಡಗರ ಪ್ರಕರಣ

ಪೆಟ್ರೋಲ್ ಲೀಡರಿಗೊಂದು ಕಾಗದ

(ರೋಲ್ಯಾಂಡ್ ಇ. ಫಿಲಿಪ್ಸ್‌ರವರ ಪುಸ್ತಕದ ಅನುವಾದ)

[ಮೂಲಗ್ರಂಥದಲ್ಲಿ ಈ ಕಾಗದವು ಬ್ರಿಟಿಷ್ ಚಕ್ರಾಧಿಪತ್ಯದ ಧ್ವಜವಾದ "ಯೂನಿಯನ್ ಜಾಕ್"ಗೆ ಸಂಬಂಧಪಟ್ಟದೆ. ನಮ್ಮ ದೇಶದ ಹುಡುಗರಿಗೆ ಮೈಸೂರು ಬಾವುಟದ ವಿಚಾರವು ಪರಿಚಯವಾಗಬೇಕಾಗಿರುವುದರಿಂದ ಬಾವುಟದ ವಿಚಾರದ ಸಾಮಾನ್ಯ ವಿಚಾರಗಳನ್ನು ಮೂಲಗ್ರಂಥದಿಂದ ತೆಗೆದುಕೊಂಡು ಅದಕ್ಕೆ ಮೈಸೂರು ಧ್ವಜದ ವಿಚಾರಗಳನ್ನು ಸೇರಿಸಿದ್ದೇನೆ.

—ಅನುವಾದಕ].

ನನ್ನ ಪ್ರಿಯ ಶ್ಯಾಮೂ,

ನೀನು ನಿನ್ನ ಪೆಟ್ರೋಲಿನವರಿಗೆ ಮೊದಲು ನಮ್ಮ ದೇಶಕ್ಕೆ ಒಂದು ಧ್ವಜವಿರಲು ಕಾರಣವೇನೆಂಬುದನ್ನೂ ಮತ್ತು ಅದರ ತತ್ವವೇನೆಂಬುದನ್ನೂ ತಿಳಿಸುತ್ತೀಯೆ.

ಆಧ್ವಜದಲ್ಲಿ ಕಂಡುಬರುವ ಚಿಹ್ನೆಗಳು, ಬಣ್ಣಗಳು ಮತ್ತು ಅವುಗಳಿಂದ ಹುಟ್ಟುವ ಅಭಿಪ್ರಾಯಗಳು ಇವೆಲ್ಲವನ್ನೂ ನೀನು ಅವರಿಗೆ ತಿಳಿಸಬೇಗಾಗುತ್ತದೆ.

ಸ್ಕೌಟ್ ಭ್ರಾತೃವರ್ಗವು ಪ್ರಾರಂಭವಾದಾಗ ನಮ್ಮೆಲ್ಲರನ್ನೂ ಪರಸ್ಪರ ಬಂಧಿಸಲು ಯಾವುದಾದರೂ ಒಂದು ಚಿಹ್ನೆಯು ಅವಶ್ಯಕವೆಂದು ತಿಳಿದು ನಮ್ಮ ಸ್ಕೌಟ್ ಭಾಷೆಯ ಚಿಹ್ನೆಯಾದ ಮೂರು ದಳದ ಗುರುತನ್ನು ಚೀಫ್ ಸ್ಕೌಟ್‌ರವರು ಆರಿಸಿಕೊಂಡರು.

ಈ ಚಿಹ್ನೆಯನ್ನು ಕಂಡಾಗಲೆಲ್ಲಾ ನಮ್ಮ ಉತ್ಸಾಹವು ಹಿಗ್ಗುವುದಲ್ಲದೆ ನಮ್ಮ ಕೆಲಸಗಳನ್ನು ಕೈಲಾದ ಮಟ್ಟಿಗೂ ಚೆನ್ನಾಗಿ ಮಾಡುವಂತೆ ನಮ್ಮ ಮನಸ್ಸನ್ನು ಈ ಚಿಹ್ನೆಯು ಹುರಿದುಂಬಿಸುತ್ತದೆ.

ಸ್ಕೌಟುಗಳಿಗೆ ಹೇಗೆ ಒಂದು ಚಿಹ್ನೆಯು ಅವಶ್ಯಕವಾಯಿತೋ ಹಾಗೆಯೇ ಜನಾಂಗಕ್ಕೂ ಸಹ ತಮ್ಮ ಭ್ರಾತೃವರ್ಗಕ್ಕೆ ಅನುಗುಣವಾದ ಲಾಂಛನದ ಅವಶ್ಯಕತೆಯುಂಟು. ಈ ಕಾರ್ಯಕ್ಕೆ ಧ್ವಜಕ್ಕಿಂತಲೂ ಉತ್ತಮವಾದ ಲಾಂಛನವು ಬೇರೊಂದಿಲ್ಲ. ಅದನ್ನು ಮಾಡುವುದು ಸುಲಭ. ತೆಗೆದುಕೊಂಡು ಹೋಗಲು ಸುಲಭ. ಅದನ್ನು ಏರಿಸಿದರೆ ಎಂಥಾ ಮಹಾ ಸೌಧದ ಮೇಲಾದರೂ ತಾನೇ ತಾನಾಗಿ ತಾಂಡವವಾಡುತ್ತದೆ. ಅದನ್ನು ಎಲ್ಲರೂ ನೋಡಿ ಜೈಕಾರಮಾಡಬಹುದು.

ಹಿಂದಿನ ಕಾಲದಲ್ಲಿ ಸೈನ್ಯಗಳು ಯುದ್ಧಕ್ಕೆ ಹೋಗುವಾಗ ತಮ್ಮ ತಮ್ಮ ಧ್ವಜಗಳನ್ನು ತಮ್ಮ ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಿದ್ದವು. ಧ್ವಜದ ವಿಚಾರದಲ್ಲಿ ಆದಷ್ಟು ಅಂಶಗಳನ್ನು ಪ್ರತಿಯೊಬ್ಬರೂ ಅಲ್ಲಲ್ಲಿ ತಿಳಿದು ಆ ರೀತಿ ಶೇಖರಿಸಿದ ವಿಚಾರಗಳನ್ನೆಲ್ಲಾ ನೀವು ಒಟ್ಟುಗೂಡಿಸಿಕೊಳ್ಳುವುದು ಒಳ್ಳೆಯದು.

ಧ್ವಜವನ್ನು ಹಾರಿಸುವಾಗ ಸ್ಕೌಟುಗಳು ಬಹಳ ಜಾಗರೂಕತೆಯಿಂದಿರಬೇಕು. ಯಾಕೆಂದರೆ ಅಚಾತುರ್ಯದಿಂದ ಅನೇಕ ವೇಳೆ ಅದು ತಲೆಕೆಳಗಾಗುವುದು. ಈ ರೀತಿ ಆದರೆ ನಾವು ಏನೋ ದೊಡ್ಡ ವಿಪತ್ತಿಗೆ ಸಿಕ್ಕಿದೇವೆಂದು ಅರ್ಥವಾಗುತ್ತದೆ.

ಹಾಗೆಯೇ ಧ್ವಜವನ್ನು ಸ್ತಂಭದ ತುದಿಯವರೆಗೂ ಎಳೆದು ಕಟ್ಟಬೇಕು. ಹಾಗೆ ಮಾಡದೆ ಹೋದರೆ ಸ್ತಂಭದಲ್ಲಿ ಸ್ವಲ್ಪ ಭಾಗವನ್ನು ಮೇಲೆ ಬಿಟ್ಟು ಧ್ವಜವು ಕೆಳಗೆ ನಿಲ್ಲುವುದು. ರಾಜಮನೆತನದಲ್ಲಿ ಯಾರಾದರೂ ಗತಿಸಿಹೋದಾಗ ವಿಷಾದವನ್ನು ಸೂಚಿಸಲು ಮಾತ್ರ ಈ ರೀತಿ ಹಾರಿಸಬೇಕು.

ಧ್ವಜವು ಬಹಳ ಪವಿತ್ರವಾದ ವಸ್ತು. ಅದು ನಮ್ಮ ದೇಶದಲ್ಲಿರುವ ಅತ್ಯುತ್ತಮವಾದ ವಸ್ತುವಿಗಿಂತಲೂ ಹೆಚ್ಚಿನದು. ಯಾಕೆಂದರೆ ಅದು ನಮ್ಮ ದೇಶದ ಗೌರವದ ಪರಮಾವಧಿಯ ಲಾಂಛನ. ರಾಜರುಗಳು ಒಬ್ಬರಾದಮೇಲೊಬ್ಬರು ಬರುತ್ತಾರೆ, ಧ್ವಜವು ಮಾತ್ರ ಸ್ಥಾಯಿಯಾಗಿರುತ್ತದೆ. ಈ ಕಾರಣದಿಂದ ಅದು ನೆಲಕ್ಕೆ ತಗಲದಂತೆ ನೋಡಿಕೊಳ್ಳಬೇಕು. ಯುದ್ಧದಲ್ಲಿ ಸೋತವರಿಗೆ ಅವಮಾನಮಾಡಲು ಅವರ ಧ್ವಜವನ್ನು

ನೆಲದ ಮೇಲೆ ಎಳೆದುಕೊಂಡು ಹೋಗುವುದು ಪದ್ಧತಿಯಾಗಿದೆ. ಆದ್ದರಿಂದ ನಾವು ನಮ್ಮ ಧ್ವಜವನ್ನು ನೆಲಕ್ಕೆ ತಗುಲಿಸಿದರೆ ಅದನ್ನು ಮಣ್ಣುಪಾಲುಮಾಡಿದಂತೆಯೂ ಮತ್ತು ನಮ್ಮ ದೇಶದ ಗೌರವವನ್ನು ಮಣ್ಣುಗೂಡಿಸಿದಂತೆಯೂ ಆಗುತ್ತದೆ. ಯಾವ ಸ್ಕೌಟೂ ಈ ತಪ್ಪಿತವನ್ನು ಮಾಡುವುದಿಲ್ಲವೆಂದು ನನಗೆ ನಂಬಿಕೆಯುಂಟು.

ಹಾಗೆಯೇ ಮಳೆ ಬರುವಾಗಲೂ ಮತ್ತು ಕತ್ತಲೆಯಾದ ಮೇಲೂ ನಾವು ಧ್ವಜವನ್ನು ಹಾರಿಸುವುದಿಲ್ಲ.

ಧ್ವಜದ ವಿಚಾರದಲ್ಲಿ ನಿಮ್ಮ ಹುಡುಗರಿಗೆ ಹೇಳುವಾಗ ನೀನು ಧ್ವಜವನ್ನು ಮೇಜಿನ ಮೇಲೋ ಅಥವಾ ಗೋಡೆಗೋ ಹಾಕಿ ಅದರಲ್ಲಿರುವ ಎಲ್ಲಾ ಚಿಹ್ನೆಗಳನ್ನೂ ಅವರಿಗೆ ತೋರಿಸಿ ಹೇಳಬೇಕು. ಒಬ್ಬ ಪೆಟ್ರೋಲ್ ಲೀಡರು ಎದುರಿಗೆ ಧ್ವಜವಿಲ್ಲದೆ ಈ ವಿಚಾರದಲ್ಲಿ ಒಂದು ಗಂಟೆಯ ಕಾಲ ಶ್ರಮಪಟ್ಟದ್ದನ್ನೂ ಮತ್ತು ಅವನ ಶ್ರಮವು ನಿರರ್ಥಕವಾದದ್ದನ್ನೂ ನಾನು ನೋಡಿದ್ದೇನೆ.

ಅಲ್ಲದೆ ನಿಮ್ಮ ಹುಡುಗರು ಧ್ವಜವನ್ನು ತಮ್ಮ ಪುಸ್ತಕಗಳಲ್ಲಿ ಬಣ್ಣದ ಸೀಸದ ಕಡ್ಡಿಗಳಿಂದ ಬರೆಯುವ ಅಭ್ಯಾಸಮಾಡಿಸುವುದರಿಂದ ಅವರಿಗೆ ಧ್ವಜದ ವಿಚಾರವು ಮನಸ್ಸಿಗೆ ಚೆನ್ನಾಗಿ ಹಿಡಿಯುತ್ತದೆ.

ಧ್ವಜದ ವಿಚಾರಗಳೆಲ್ಲಾ ಅವರಿಗೆ ಚೆನ್ನಾಗಿ ಮನವರಿಕೆಯಾದ ಮೇಲೆ ಒಂದೆರಡು ಬಾರಿ ಅವರಿಂದ ಧ್ವಜಾರೋಹಣವನ್ನು ಮಾಡಿಸುತ್ತೀಯೆ. ಹೀಗೆ ಮಾಡುವುದರಿಂದ ಅವರಿಗೆ ಧ್ವಜಕ್ಕೆ ಸಲ್ಲಿಸಬೇಕಾದ ಮರ್ಯಾದೆಯೂ ಸಹ ಅಭ್ಯಾಸವಾಗುತ್ತದೆ.

ಧ್ವಜಾರೋಹಣವೂ ಅವರೋಹಣವೂ ನಮಗೆ ಒಂದೊಂದು ಸಂಸ್ಕಾರವಾಗಿವೆ. ಈ ಎರಡು ಕಾಲಗಳಲ್ಲಿಯೂ ಟ್ರೂಪಾಗಲೀ, ಪೆಟ್ರೋಲಾಗಲಿ ಕುದುರೆಯ ಲಾಳದ ಆಕಾರದಲ್ಲಿ ಶಿಸ್ತಿನಿಂದ ನಿಂತು ವಂದನೆ ಮಾಡಬೇಕು. ಸಂದರ್ಭಾನುಸಾರ ರಾಷ್ಟ್ರಗೀತೆಯನ್ನು ಹಾಡಬೇಕು. ಶಿಬಿರದಲ್ಲಿ ವಾಸಮಾಡುವಾಗ ಸಾಯಂಕಾಲದ ವೇಳೆ ಧ್ವಜಾವರೋಹಣಕ್ಕೆ ಸ್ಕೌಟುಗಳೆಲ್ಲರೂ ಒಟ್ಟಿಗೆಸೇರುವುದು ಸಾಧ್ಯವಿಲ್ಲ. ಯಾಕೆಂದರೆ ಅವರು ಶಿಬಿರದ ಬೇರೆ ಬೇರೆ ಕಡೆಗಳಲ್ಲಿ ಕೆಲಸಮಾಡುತ್ತಿರುತ್ತಾರೆ. ಅವುಗಳನ್ನು ಅನೇಕ ಸಂದರ್ಭಗಳಲ್ಲಿ ಬಿಟ್ಟುಬರುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಧ್ವಜವನ್ನು ಇಳಿಸಲು ಯಾರಾದರೂ ಒಬ್ಬರು ಹೋಗಿ ದೀರ್ಘವಾಗಿ ಒಂದು ಶಿಳ್ಳೆ ಹೊಡೆದು ನಂತರ ಇಳಿಸುತ್ತಾರೆ. ಆಗ ಯಾರು ಯಾರು ಎಲ್ಲೆಲ್ಲಿದ್ದರೆ ಅಲ್ಲಲ್ಲೇ ಅರ್ಧ ನಿಮಿಷದ ಕಾಲ ಸನ್ನದ್ಧ ಸ್ಥಿತಿಯಲ್ಲಿ (alert position) ನಿಂತಿದ್ದು ಆ ಮೇಲೆ ತಮ್ಮ ಕೆಲಸಗಳಲ್ಲಿ ತೊಡಗುತ್ತಾರೆ.

ನೀನು ನಿನ್ನ ಪೆಟ್ರೋಲಿನವರಿಗೆ ಧ್ವಜದಲ್ಲಿ ಕಂಡುಬರುವ ಅಂಶಗಳನ್ನೂ ಬಣ್ಣಗಳನ್ನೂ ಅವುಗಳ ಅರ್ಥವನ್ನೂ ಸಂಬಂಧಪಟ್ಟ ಕಥೆಗಳನ್ನೂ ಹೇಳುತ್ತೀಯೆ. ಧ್ವಜದಲ್ಲಿ ಮುಖ್ಯವಾಗಿ ಬಿಳುಪು, ಹಳದಿ, ಕೆಂಪು, ಹಸುರು ಬಣ್ಣಗಳು ಕಾಣುತ್ತವೆ. ಇವುಗಳಲ್ಲಿ ಹಸುರು ಬಣ್ಣವು ಅಲಂಕಾರಕ್ಕಾಗಿ ಸೇರಿಸಲ್ಪಟ್ಟಿದೆ. ಬಿಳುಪು ಬಣ್ಣವು ಯಾವಾಗಲೂ ಶುದ್ಧತೆಯನ್ನೂ, ಹಳದಿಯು ಶುಭ ಮತ್ತು ಸೌಮಾಂಗಲ್ಯವನ್ನೂ ಸೂಚಿಸುತ್ತವೆ. ಮುತ್ತೈದೆಯರು ಅರಿಶಿನವನ್ನು ಹಚ್ಚಿಕೊಳ್ಳುವ ಪದ್ಧತಿಯನ್ನು ನೀನು ಕೇಳಿರಬಹುದು. ಕೆಂಪು ಬಣ್ಣದ ವಿಚಾರದಲ್ಲಿ ಒಂದು ಕಥೆಯುಂಟು.

ಪೂರ್ವಕಾಲದ ಮೈಸೂರರಸರಲ್ಲೊಬ್ಬರು ವಿಜಯಯಾತ್ರೆಗೆ ಹೊರಟಾಗ ಎದುರಿಗೆ ಒಬ್ಬ ಜಂಗಮರು ಬಂದಂತೆಯೂ, ಅವರು ತಮ್ಮ ಕಾವಿ ಬಟ್ಟೆಯಲ್ಲಿ ಒಂದು ಚೂರನ್ನು ಹರಿದುಕೊಟ್ಟು ಅದನ್ನು ಧ್ವಜಕ್ಕೆ ಸೇರಿಸಿಕೊಂಡು ಹೊರಟರೆ ಎಲ್ಲಾ ಕಡೆಯಲ್ಲಿಯೂ ವಿಜಯವಾಗುವುದೆಂದು ಹೇಳಿದಂತೆಯೂ, ರಾಜರು ಹಾಗೆಯೇ ಮಾಡಿದಂತೆಯೂ, ಅವರಿಗೆ ಎಲ್ಲೆಲ್ಲಿಯೂ ಜಯವಾದಂತೆಯೂ, ಆಗಿನಿಂದ ಆ ಕಾವಿಯ ಬಟ್ಟೆಯು ಮೈಸೂರು ಧ್ವಜದ ಒಂದು ಭಾಗವಾಗಿ ಪರಿಣಮಿಸಿತೆಂತಲೂ ಒಂದು ಪ್ರತೀತಿಯಿದೆ, ಆ ಬಟ್ಟೆಯು ಚೆನ್ನಾಗಿ ಹರಿದು ಹೋದ ಮೇಲೆ ಧ್ವಜದ ಹಿನ್ನೆಲೆ (back-ground) ಯು ಕಾವಿ ಬಣ್ಣದ್ದಾಗಿ ಕಾಲಕ್ರಮದಲ್ಲಿ ಕೆಂಪಾಯಿತು.

ನಮ್ಮ ಧ್ವಜವು ಹಳದಿ ಬಣ್ಣದ ಬಟ್ಟೆಯಿಂದ ಮಾಡಲ್ಪಟ್ಟಿದೆ. ಇದಕ್ಕೆ ಕೆಂಪು ಬಣ್ಣವು (ಇದು ಕಾವಿ

ಬಣ್ಣದ ರೂಪಾಂತರವೆಂದು ಆಗಲೇ ಹೇಳಿದ್ದೇನೆ) ಹಿನ್ನೆಲೆಯಾಗಿದೆ. ಧ್ವಜದ ಮೇಲ್ಭಾಗದಲ್ಲಿ ಒಂದು ಸಿಂಹದ ಆಕಾರವೂ ಅದರ ಬಾಯಿಯಲ್ಲಿ ಒಂದು ಕೋಣದ ತಲೆಯೂ ಇದೆ. ಇದರ ಕೆಳಭಾಗದಲ್ಲಿ ಒಂದು ಶಿರಸ್ತ್ರಾಣ (Helmet) ದ ಆಕಾರವಿದೆ. ಈ ಶಿರಸ್ತ್ರಾಣದ ಎರಡು ಪಕ್ಕಗಳಲ್ಲಿಯೂ ಅಲಂಕಾರಕ್ಕಾಗಿ ಬಳ್ಳಿಬಳ್ಳಿಯಾಗಿ ಚಿತ್ರವಿದೆ. ಅಲ್ಲಿಂದ ಕೆಳಭಾಗದಲ್ಲಿ ಒಂದು ಗುರಾಣಿಯೂ ಅದರ ಮಧ್ಯದಲ್ಲಿ ಬಿಳಿಯ ಗಂಡಭೇರುಂಡನೂ ಕಾಣಿಸುತ್ತವೆ. ಈ ಗುರಾಣಿಯ ಎರಡು ಪಕ್ಕಗಳಲ್ಲಿಯೂ ಎರಡು ವಿಜಾತೀಯವಾದ ಪ್ರಾಣಿಗಳಿವೆ. ಇವಕ್ಕೆ ಸಿಂಹದ ದೇಹವೂ ಆನೆಯ ತಲೆಯೂ ಇದೆ. ಇವುಗಳನ್ನು ಯಾಳಿಗಳೆಂದು ಕರೆಯುತ್ತಾರೆ. ಇವು ಮುಂದಿನ ಕಾಲುಗಳನ್ನು ಗುರಾಣಿಯ ಮೇಲೂರಿ ನಿಂತಿವೆ. ಗುರಾಣಿಯ ಕೆಳಭಾಗದಲ್ಲಿ ಸಂಸ್ಕೃತ ಲಿಪಿಯಲ್ಲಿ "ಸತ್ಯಮೇವೋದ್ಧರಾಮ್ಯಹಂ" ಎಂಬ ನಮ್ಮ ಮಹಾರಾಜರ ಧ್ಯೇಯವಾಕ್ಯ (motto) ವಿದೆ.

ಮೇಲ್ಭಾಗದಲ್ಲಿರುವ ಸಿಂಹವೂ ಅದರ ಬಾಯಲ್ಲಿರುವ ಕೋಣನ ತಲೆಯೂ ನಮ್ಮ ಮಹಾರಾಜರ ಮನೆ ದೇವತೆಯಾದ ಶ್ರೀ ಚಾಮುಂಡೇಶ್ವರಿಯನ್ನು ಸೂಚಿಸುತ್ತವೆ.

ಪೂರ್ವದಲ್ಲಿ ಮೈಸೂರಿಗೆ ಮಹಿಷಾಸುರಪುರವೆಂಬ ಹೆಸರಿತ್ತು. ಅಲ್ಲಿ ಮಹಿಷಾಸುರನೆಂಬ ಕೋಣನ ತಲೆಯ ರೂಪದ ತಲೆಯುಳ್ಳ ರಾಕ್ಷಸನೊಬ್ಬನು ಸೇರಿಕೊಂಡು ಜನರಿಗೆ ಹಿಂಸೆ ಕೊಡುತ್ತಿದ್ದನು. ಇದನ್ನು ತಡೆಯಲಾರದೆ ಜನರು ಚಾಮುಂಡೇಶ್ವರಿಗೆ ಮೊರೆಯಿಟ್ಟರು.

ಆಗ ಸಿಂಹವೇ ವಾಹನವಾಗುಳ್ಳ ಚಾಮುಂಡೇಶ್ವರಿಯು ಮಹಿಷಾಸುರನನ್ನು ಯುದ್ಧದಲ್ಲಿ ಸಂಹರಿಸಿದಳು. ನೆಲಕ್ಕೆ ಬಿದ್ದ ರಾಕ್ಷಸನ ತಲೆಯನ್ನು ಸಿಂಹವು ಬಾಯಲ್ಲಿ ಕಚ್ಚಿಕೊಂಡಂತೆ ಚಿತ್ರದಲ್ಲಿ ತೋರಿಸಿದೆ.

ಧ್ವಜದಲ್ಲಿ ಕಾಣುವ ಶಿರಸ್ತ್ರಾಣವೂ, ಗುರಾಣಿಯೂ ವೀರರು ತೊಡತಕ್ಕ ಯುದ್ಧ ಸಾಮುಗ್ರಿಗಳು. ನಮ್ಮ ದೇಶದ ಅರಸರು ಬಹಳ ಶೂರರೆಂಬುದನ್ನು ತೋರಿಸಲು ಇವು ಧ್ವಜದಲ್ಲಿ ಸೇರಿಸಲ್ಪಟ್ಟಿವೆ.

ಗಂಡಭೇರುಂಡವೂ ಒಂದು ಸೃಷ್ಟಿಯಲ್ಲಿ ಕಂಡು ಬರದ ಪುರಾಣಪ್ರಸಿದ್ಧವಾದ ಪ್ರಾಣಿ. ಪ್ರಹ್ಲಾದನೆಂಬ ಹೆಸರನ್ನು ನಿಮ್ಮ ಹುಡುಗರೆಲ್ಲರೂ ಕೇಳಿರಬಹುದು. ಅವನು ಹಿರಣ್ಯಕಶಿಪುವೆಂಬ ರಾಜನ ಮಗನು. ಬಹಳ ಒಳ್ಳೆಯವನು ಮತ್ತು ದೇವರಲ್ಲಿ ಬಹಳ ಭಕ್ತಿಯುಳ್ಳವನು. ಅವನ ತಂದೆಯಾದರೋ ಕ್ರೂರಿಯಾಗಿ ಜನರಿಗೆ ಕಿರುಕಳವನ್ನು ಕೊಡುತ್ತಾ ಲೋಕಕಂಟಕನಾದನು.

ಒಂದು ದಿನ ದೇವರನ್ನು ಕಂಭದಲ್ಲಿ ತೋರಿಸಬೇಕೆಂತಲೂ, ಇಲ್ಲವಾದರೆ ಅಲ್ಲಿಯೇ ಕೊಂದುಹಾಕುವುದಾಗಿಯೂ ತನ್ನ ಮಗನಿಗೆ ಹೇಳಿ ಕತ್ತಿಯನ್ನು ಹಿರಿದು ಝಳಪಿಸುತ್ತಾ ನಿಲ್ಲಲು ದೈವಭಕ್ತನಾದ ಪ್ರಹ್ಲಾದನು ದೈನ್ಯದಿಂದ ಮೊರೆಯಿಡಲಾಗಿ ಮಹಾವಿಷ್ಣುವು ಅದೇ ಕಂಭದಲ್ಲಿ ಮನುಷ್ಯನ ದೇಹವೂ ಸಿಂಹದ ತಲೆಯೂ ಉಳ್ಳ ಆಕಾರದಲ್ಲಿ ಪ್ರತ್ಯಕ್ಷವಾಗಿ ಹಿರಣ್ಯಕಶಿಪುವನ್ನು ಸಂಹರಿಸಿ ಪ್ರಹ್ಲಾದನನ್ನು ರಕ್ಷಿಸಿದನು.

ಆ ಉಗ್ರಮೂರ್ತಿಯಾದ ನರಸಿಂಹನ ಕೋಪವನ್ನು ಶಮನಮಾಡಲು ಯಾರಿಂದಲೂ ಸಾಧ್ಯವಾಗದೆ ಹೋದ್ದರಿಂದ ಅವನನ್ನು ದಮನಮಾಡಲು ಶಿವನು ಶರಭಾವತಾರಮಾಡಿದನು. ವಿಷ್ಣುವು ಶರಭನನ್ನು ಗೆಲ್ಲಲು ಗಂಡಭೇರುಂಡನಾದನು.

ಕಥೆಯು ಯಾವ ರೀತಿಯಲ್ಲಾದರೂ ಇರಲಿ. ಆನೆಯು ಬಲಿಷ್ಠವಾದ ಪ್ರಾಣಿಯೆಂಬುದು ನಮಗೆಲ್ಲಾ ಗೊತ್ತು. ಆನೆಯನ್ನು ಸಂಹಾರಮಾಡುವ ಸಿಂಹವು ಅದಕ್ಕಿಂತಲೂ ಬಲಶಾಲಿಯಾಗಿರಬೇಕು. ಅಂಥಾ ಸಿಂಹವನ್ನು ಕೊಲ್ಲುವ ಶರಭವು ಇನ್ನೂ ಹೆಚ್ಚು ಬಲವುಳ್ಳದ್ದೆಂದು ಹೇಳಬೇಕಾದ್ದಿಲ್ಲ. ಇಂಥಾ ಮಹಾ ಶರಭವನ್ನು ತನ್ನ ಕೊಕ್ಕಿನಲ್ಲಿ ಕಚ್ಚಿಕೊಂಡು ಹಾರಿಹೋಗುವಂಥಾ ಗಂಡಭೇರುಂಡವು ಇನ್ನೆಷ್ಟು ಬಲಶಾಲಿಯಾಗಿರಬೇಕು ?

ನಮ್ಮ ಧ್ವಜದಲ್ಲಿ ಗಂಡಭೇರುಂಡವಿರುವುದು ಬಲವನ್ನೂ ಪರಾಕ್ರಮವನ್ನೂ ತೋರಿಸುತ್ತದೆ.

ಈ ಗಂಡಭೇರುಂಡವು ಬಹಳ ಕಾಲದಿಂದಲೂ ಪ್ರಸಿದ್ಧಿಗೆ ಬಂದಿದೆ. ಕ್ರಿಸ್ತಪೂರ್ವದಲ್ಲಿಯೇ ಇದು ಪಶ್ಚಿಮ

ಏಷ್ಯಾದಲ್ಲಿ ರಾಜಚಿಹ್ನೆಯಾಗಿ ಉಪಯೋಗಿಸಲ್ಪಡುತ್ತಿದ್ದಂತೆ ತಿಳಿಯಬರುತ್ತದೆ. ಗ್ರೀಸ್ ದೇಶದಲ್ಲಿರುವ ಸ್ಪಾರ್ಟಾ ಎಂಬ ಸ್ಥಳದಲ್ಲಿ ದಂತದಲ್ಲಿ ಕೊರೆದ ಒಂದು ಗಂಡಭೇರುಂಡವು ಸಿಕ್ಕಿದಂತೆ ಕಂಡುಬರುತ್ತದೆ. ನಮ್ಮ ಹಿಂದೂಸ್ಥಾನದಲ್ಲಿ ಬಹಳ ಪ್ರಸಿದ್ಧವಾಗಿದ್ದ ವಿಜಯನಗರದ ಅರಸರುಗಳ ಬಿರುದಾವಳಿಗಳಲ್ಲಿ ಇದೂ ಒಂದಾಗಿತ್ತು ಮತ್ತು ವಿಜಯನಗರದ ಪ್ರಸಿದ್ಧ ರಾಜನಾದ ಅಚ್ಯುತರಾಯನು ಇದರ ಪ್ರತಿಮೆಯನ್ನು ತನ್ನ ನಾಣ್ಯಗಳ ಮೇಲೆ ಹಾಕಿಸಿದ್ದನು. ವಿಜಯನಗರದ ರಾಜರಲ್ಲದೆ ಚಾಲುಕ್ಯ ಮತ್ತು ಹೊಯ್ಸಳರಲ್ಲಿ ಇದು ಪ್ರಸಿದ್ಧಿ ಪಡೆದಿದ್ದಂತೆ ಲೇಖನಗಳಿಂದ ತಿಳಿಯಬರುತ್ತದೆ.

ಈ ಗಂಡಭೇರುಂಡವು ನಮ್ಮ ಅರಸರಿಗೆ ವಿಜಯನಗರವು ಹಾಳಾದನಂತರ ಬಂದಂತೆ ಬಲವಾದ ವದಂತಿಯಿದೆ.

ಸಿಂಹದ ಮೈಯೂ, ಆನೆಯ ಮುಖವೂ ಉಳ್ಳ ವಿಜಾತೀಯವಾದ ಪ್ರಾಣಿಗಳನ್ನು ಯಾಳಿಗಳೆಂದು ಕರೆಯುತ್ತಾರೆಂದು ಹಿಂದೆಯೇ ಹೇಳಿದೆನಷ್ಟೆ. ಇವು ನಮ್ಮ ಗಂಡಭೇರುಂಡ ಧ್ವಜವನ್ನು ರಕ್ಷಣೆ ಮಾಡುವಂತೆ ಇವೆ. ಗುರಾಣಿಯ ಆಕಾರವೇ ಮೈಸೂರು ದೇಶವೆಂತಲೂ ಈ ಯಾಳಿಗಳು ಅದನ್ನು ರಕ್ಷಿಸುವ ಅಭಿಮಾನ ದೇವತೆಗಳೆಂತಲೂ ಹೇಳಬಹುದು. ನಮ್ಮ ಮಹಾರಾಜರು ಈಗಲೂ ನವರಾತ್ರಿಯ ಕಾಲದಲ್ಲಿ ಯಾಳಿಗಳ ಪೂಜೆಯನ್ನು ಮಾಡುತ್ತಾರೆ.

"ಸತ್ಯಮೇವೋದ್ಧರಾಮ್ಯಹಂ" ಎಂಬುದು ನಮ್ಮನ್ನಾಳುವ ಮಹಾರಾಜರ ಧ್ಯೇಯವಾಕ್ಯ. ಅವರು ಯಾವಾಗಲೂ ಸತ್ಯಸಂಕಲ್ಪರೆಂದೂ, ಸತ್ಯಕ್ಕೆ ಎಂದೂ ಮೀರಿ ನಡೆಯುವುದಿಲ್ಲವೆಂತಲೂ ಅದರ ಅರ್ಥ.

ಇಂಥಾ ಪುರಾತನವಾದದ್ದೂ ಮತ್ತು ಪವಿತ್ರವಾದ ತತ್ವಾರ್ಥಗಳನ್ನುಳ್ಳದ್ದೂ ನಮ್ಮ ಧ್ವಜವಾಗಿರುತ್ತೆ. ಇಂಥಾ ಧ್ವಜವನ್ನು ಹೊಂದಿರುವುದೇ ನಮಗೊಂದು ಹೆಮ್ಮೆ. ನಮ್ಮ ಧ್ವಜದ ಗೌರವವನ್ನು ಕಾಪಾಡಲು ನಾವು ಯಾವಾಗಲೂ ಸಿದ್ಧರಾಗಿರಬೇಕು ಮತ್ತು ನಮ್ಮ ದೇಹದಲ್ಲಿ ಉಸಿರಿರುವವರೆಗೂ ಅದಕ್ಕಾಗಿ ಹೊಡೆದಾಡಬೇಕಾದ್ದು ನಮ್ಮ ಕರ್ತವ್ಯ.

ಈ ಧ್ವಜವು ನಮ್ಮ ಮಹಾರಾಜರ ಪ್ರತಿನಿಧಿಯಾದ್ದರಿಂದಲೂ ಮತ್ತು ದೇಶದ ಗೌರವದ ನೆಲೆಯಾದ್ದರಿಂದಲೂ ಅದರ ವಿಚಾರದಲ್ಲಿ ನಮಗೆ ಬಹಳ ಪೂಜ್ಯವಾದ ಭಾವನೆಯಿರಬೇಕು. ಅದಕ್ಕೆ ರಾಜಮರ್ಯಾದೆಯು ಸಲ್ಲತಕ್ಕದ್ದು. ಆ ಧ್ವಜವು ಎಲ್ಲಿ ಕಂಡರೂ ನಾವು ಅದಕ್ಕೆ ವಂದನೆ ಮಾಡಬೇಕು.

ನಿನ್ನ ಪ್ರಿಯ ಭ್ರಾತೃ,
ಎಸ್. ಬಿ.

ಮರಿಗಳು.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೧೨ನೆಯ ಅಧ್ಯಾಯ.
ಮತ (Religion)

ಮೂರನೆಯ ಸಾಧನವು ಪ್ರಕೃತಿ ವಿಮರ್ಶೆ. ಈ ವಿಚಾರಕ್ಕಾಗಿ ಮುಂದೆ ಒಂದು ಅಧ್ಯಾಯವೇ ಉಪಯೋಗಿಸಲ್ಪಡುವುದರಿಂದ ಅದರ ವಿಚಾರವನ್ನು ಇಲ್ಲಿ ಹೆಚ್ಚಾಗಿ ಹೇಳುವುದಿಲ್ಲ. ಇದು ಬಹಳ ಬಲಿಷ್ಠವಾದ ಆಯುಧ. ಆದರೆ ಇದನ್ನು ಉಪಯೋಗಿಸುವಾಗ ಮರಿಗಳು ಯಾವುದೋ ಒಂದು ಅವ್ಯಕ್ತವಾದ, ಅತೃಪ್ತಿಯಿಂದ ಕೂಡಿದ ಭೂತದ ಆರಾಧನೆಗೆ ತೊಡಗುವಂತೆ ಕೆಡಕುಂಟಾಗುವುದು. ನಮ್ಮ ಪ್ರಯತ್ನದ ಫಲವು ಈ ರೀತಿ ಪರಿಣಮಿಸದಂತೆ ನೋಡಿಕೊಳ್ಳಬೇಕು. ಇದರಿಂದ ಭಗವಂತನ ಸಂಬಂಧವಾದ ಗಹನವಾದ ಅಭಿ

ಪ್ರಾಯಗಳು ಮರೆಯಾಗಿ ಕ್ಷುದ್ರಭಾವಗಳು ಮುಂದೆ ಬರಬಹುದಾದ ತೊಂದರೆಯಿರುವುದರಿಂದ ನಾವು ಬಹಳ ಎಚ್ಚರಿಕೆಯಿಂದಿರಬೇಕು.

ನಾಲ್ಕನೆಯದು ಕಥಾ ನಿರೂಪಣ. ಇದು ಮತೀಯ ಶಿಕ್ಷಣಕ್ಕೆ ಒಳ್ಳೆಯ ಸಾಧನ. ಈ ವಿಚಾರದಲ್ಲಿ ಕಥಾ ನಿರೂಪಣದಿಂದಾಗುವ ಸಹಾಯವನ್ನು ಉತ್ಪ್ರೇಕ್ಷೆಮಾಡುವುದಸಾಧ್ಯ. ಆದರೂ ಅನೇಕ ಆಕೇಲರು ಈ ಕೆಲಸಕ್ಕೆ ಕೈ ಹಾಕುವುದೇ ಇಲ್ಲ. ಬಹುಶಃ ಮತಸಂಬಂಧವಾದ ಕಥೆಗಳು ಮರಿಗಳ ಮನಸ್ಸಿಗೆ ಹಿಡಿಯುವುದಿಲ್ಲವೆಂಬ ಭಯವು ಅವರಿಗಿರಬಹುದು. ಕಥೆ ಹೇಳುವುದರ ಪ್ರಯೋಜನವನ್ನು ತಿಳಿದಿರುವವರು ಈ ಭಯವು ನಿರಾಧಾರವಾದದ್ದೆಂತ ಹೇಳಿಬಿಡುವರು. ಸರಿಯಾದ ರೀತಿಯಲ್ಲಿ ಹೇಳುವುದಾದರೆ ಈ ವಿಚಾರದಲ್ಲಿ ಬಹಳ ಉಪಯೋಗಕರವಾದ ಸಾಮುಗ್ರಿಗಳು ನಮಗೆ ದೊರೆಯುತ್ತವೆ. ರೋಮಾಂಚ, ಆವೇಶ ಮತ್ತು ಮಾನವ ಜೀವನದಲ್ಲಿ ಆಸಕ್ತಿ ಇವುಗಳನ್ನು ಹುಟ್ಟಿಸುವ ಕಥೆಗಳು ಹೇರಳವಾಗಿವೆ. ನಾನು ಸಾಧು ಸುಂದರಸಿಂಗ್ ಎಂಬುವನ ಕಥೆಗಳನ್ನು ಹೇಳಿ ಬಹಳ ಪ್ರಯೋಜನ ಹೊಂದಿದ್ದೇನೆ. ಇಂಥಾ ಕಥೆಗಳನ್ನು ಮರಿಯ ಮನೋವಿಸ್ತಾರವನ್ನು ನೋಡಿಕೊಂಡು ಜಾಗರೂಕತೆಯಿಂದ ಹೇಳಬೇಕು. ಇಲ್ಲವಾದರೆ ಅವು "ಒಣಬೋಧನೆ" ಯಾಗಿ ಪರಿಣಮಿಸುತ್ತವೆಯಲ್ಲದೆ ನಾವು ಮಾಡಿದ ಉದ್ದೇಶಕ್ಕೆ ವಿರೋಧವಾದ ಪರಿಣಾಮವುಂಟಾಗಿ ಮರಿಗಳಿಗೆ ಇಂಥಾ ಕಥೆಗಳಲ್ಲಿ ಆಸಕ್ತಿಯೇ ಹೋಗಬಹುದು.

ನಮ್ಮ ಪುರಾಣಾದಿ ಗ್ರಂಥಗಳಲ್ಲಿ ಇಂಥಾ ಕಥೆಗಳು ರಾಶಿರಾಶಿಯಾಗಿವೆ. ಆದರೆ ಇವುಗಳನ್ನು ಬಹಳ ಜೋಪಾನವಾಗಿ ಆರಿಸಿಕೊಳ್ಳಬೇಕು. ನಮ್ಮ ಹಿಂಡಿನಲ್ಲಿರುವ ಪಂಗಡಗಳನ್ನು ನೋಡಿಕೊಂಡು ಅವಕ್ಕೆ ತಕ್ಕ ಕಥೆಗಳನ್ನು ಆರಿಸಿಕೊಳ್ಳಬೇಕು. ಕಥೆಯಿಂದ ಒಂದು ಸದುದ್ದೇಶವು ಹುಟ್ಟಿ ಒಳ್ಳೆಯ ಗುಣವು ಬೆಳಗಬೇಕಲ್ಲದೆ ಯಾವ ಪಂಗಡದವರಿಗೂ ನೋವಾಗಬಾರದು. ಸಾಧಾರಣವಾಗಿ ಮರಿಗಳಿಗೆ ಇದು ತಮ್ಮ ಪಂಗಡದವರ ನಂಬಿಕೆಗೆ ವಿರೋಧವಾದ ಕಥೆಯೆಂಬುದು ಗೊತ್ತಾಗದಿದ್ದರೂ ತಮ್ಮ ಪಂಗಡದವರಿಗೆ ಸಂಬಂಧಪಟ್ಟದ್ದಲ್ಲವೆಂತ ತಿಳಿದರೆ ಅವರಿಗೆ ಆಸಕ್ತಿ ಕಡಮೆಯಾಗುವುದರಿಂದ ಎಲ್ಲರಲ್ಲಿಯೂ ಆಸಕ್ತಿಯನ್ನು ಹುಟ್ಟಿಸುವಂಥಾ ಕಥೆಗಳನ್ನೇ ಆರಿಸಿಕೊಳ್ಳಬೇಕು.

ನಾನು ಕೊಟ್ಟಿರುವ ಸೂಚನೆಗಳು ಬಹಳ ಸ್ವಲ್ಪವಾಗಿವೆ. ಅವುಗಳನ್ನು ಮಾದರಿ ತೋರಿಸುವುದಕ್ಕಾಗಿ ಮಾತ್ರ ಕೊಟ್ಟಿದ್ದೇನೆ. ಪ್ರತಿಯೊಬ್ಬ ಆಕೇಲನೂ ಮತವು ಹಿಂಡಿಗೆ ಜೀವಸಮಾನವೆಂಬುದನ್ನು ತಿಳಿದುಕೊಳ್ಳಬೇಕಾದ್ದು ಮುಖ್ಯವಾದ ವಿಚಾರ. ಅದನ್ನು ತಿಳಿದುಕೊಂಡರೆ ಆ ಭಾವನೆಯನ್ನು ಆಚರಣೆಯಲ್ಲಿ ತರುವ ವಿಧಾನವನ್ನು ಪ್ರತಿಯೊಬ್ಬ ಆಕೇಲನೂ ಸುಲಭವಾಗಿ ಹುಡುಕಿಕೊಳ್ಳುತ್ತಾನೆ. ಪ್ರಾರಂಭದಲ್ಲಿ ವೇಗವು ಹೆಚ್ಚಾಗಿರಬಾರದು. ನಿಮ್ಮ ಉದ್ದೇಶವು ಆತುರದಿಂದ ನೆರವೇರುವುದಿಲ್ಲ. ಕಟ್ಟಡವು ಜೋಪಾನವಾಗಿಯೂ ನಿಧಾನವಾಗಿಯೂ ಕಟ್ಟಲ್ಪಡಬೇಕು. ಇಲ್ಲವಾದರೆ ಅದು ನಮಗೆ ದುಃಖವನ್ನುಂಟುಮಾಡುವಂತೆ ಬಿದ್ದು ಹೋಗುವುದು. ನಾನು ಪ್ರಾರ್ಥನೆಗಳ ವಿಚಾರದಲ್ಲಿ ಹೇಳಿರುವ ಸೂಚನೆಗಳೆಲ್ಲವನ್ನೂ ಒಟ್ಟಿಗೆ ಆಚರಣೆಗೆ ಒಂದೇ ಸಾರಿ ತರುವುದು ಸರಿಯಲ್ಲ.

ಪ್ರಾರಂಭದಲ್ಲಿ ನಿಮಗೆ ಬಹಳ ಸಂಕೋಚವುಂಟಾಗಬಹುದು. ಇದು ಸ್ವಾಭಾವಿಕವಾದದ್ದು ಮತ್ತು ಅಗತ್ಯವಾದದ್ದು. ಮತವೆಂಬುದನ್ನು ನೀವು ಹೆಚ್ಚು ಆಡಂಬರವಿಲ್ಲದೆ ಸ್ವಭಾವವಾದದ್ದೆಂತ ಭಾವಿಸಿ ನಡೆದರೆ ಮರಿಗಳೂ ಅದೇ ರೀತಿಮಾಡಲು ಸಿದ್ಧರಾಗಿರುತ್ತಾರೆ. ನೀವು ಆ ರೀತಿ ನಡೆಯಲು ಸರಿಯಾದ ಮಾರ್ಗದಲ್ಲಿ ಹೊರಟರೆ ಅದಕ್ಕೆ ಮರಿಗಳು ವಿರೋಧಭಾವವನ್ನು ತೋರಿಸುತ್ತಾರೆಂದಾಗಲಿ ಅಥವಾ ಬೇಸರಪಡುತ್ತಾರೆಂದಾಗಲಿ ಭಯಪಡಬೇಕಾದ್ದಿಲ್ಲ. ಇದಕ್ಕೆ ಬದಲಾಗಿ ಮರಿಗಳಲ್ಲಿರುವ ಅಗಾಧವಾದ ದೈವಭಕ್ತಿಯನ್ನು ನೋಡಿ ನಿಮಗೆ ನಾಚಿಕೆಯಾಗುವುದು. ಈ ವಿಚಾರದಲ್ಲಿ ಶಿಬಿರವಾಸವು ಬಹಳ ದೊಡ್ಡ ಅವಕಾಶ. ನಾನು ನನ್ನ ಹಿಂಡಿನ ಮೂರನೆಯ ಶಿಬಿರವನ್ನು ನಡೆಸುತ್ತಿದ್ದಾಗ ನನ್ನ ಹಿಂಡಿನ ಷಟ್ಕದ ಮುಖಂಡರು ಮತ್ತು ಶಿಕ್ಷಕರು (ಇವರು ಹಿಂದೆ ಹಿಂಡಿನಲ್ಲಿದ್ದ ಮರಿಗಳು) ಒಂದು ದಿನ ನನ್ನಲ್ಲಿಗೆ ಬಂದು, ಪ್ರತಿರಾತ್ರಿಯೂ ಮಲಗುವುದಕ್ಕೆ ಸ್ವಲ್ಪ ಮುಂಚೆ ಪ್ರತಿಯೊಬ್ಬರೂ ಪ್ರಾರ್ಥನೆಮಾಡಲು ಅವಕಾಶವುಂಟಾಗುವಂತೆ ಐದು ನಿಮಿಷಗಳ ಕಾಲ

ಎಲ್ಲರೂ ನಿಶ್ಶಬ್ದವಾಗಿರಲು ಆಜ್ಞೆಮಾಡಬೇಕೆಂತ ಕೇಳಿಕೊಂಡರು. ಅಲ್ಲಿಂದೀಚೆಗೆ ನಮ್ಮ ಶಿಬಿರಗಳಲ್ಲಿ ಐದು ನಿಮಿಷಗಳ ನಿಶ್ಶಬ್ದತೆಯು ಆಚರಣೆಗೆ ಬಂದಿತು. ಅದಕ್ಕಾಗಿ ನಾವು ಪ್ರಯತ್ನಮಾಡಬೇಕಾಗುತ್ತಿರಲಿಲ್ಲ.

ಈ ವಿಚಾರದಲ್ಲಿ ನಾನು ಕೆಲವು ಸ್ಥಳಗಳಲ್ಲಿ ಮಾತನಾಡಿದಾಗ ಆಸಕ್ತಿಯಿಂದ ಕೂಡಿದ ಆಕೇಲರನೇಕರು ಈ ಮಾರ್ಗದಲ್ಲಿ ನಮ್ಮ ಪ್ರಯತ್ನವು ಸಾರ್ಥಕವಾಗುತ್ತಿದೆಯೆಂಬುದನ್ನು ಕಂಡುಹಿಡಿಯುವುದು ಹೇಗೆ ಎಂದು ನನ್ನನ್ನು ಕೇಳಿದ್ದಾರೆ. ಸಾಧಾರಣ ಸ್ಥಿತಿಯಲ್ಲಿ ಹಿಂಡಿನಲ್ಲಿರುವ ಯಾರಿಗೂ ಇದನ್ನು ಕಂಡುಹಿಡಿಯುವುದು ನಿಜವಾಗಿಯೂ ಸುಲಭವಲ್ಲ. ಹೊರಗಿನವರು ಇದನ್ನು ಸುಲಭವಾಗಿ ಕಂಡುಹಿಡಿಯಬಲ್ಲರು. ಪ್ರತಿಯೊಬ್ಬ ಹುಡುಗನ ಮೇಲೂ ನಿಮ್ಮ ದೃಷ್ಟಿಯಿದ್ದರೆ ನಿಮಗೆ ಬರುತ್ತಿರುವ ಫಲದ ದರ್ಶನವು ನಿಮಗೆ ಆಗಾಗ ಆಗುತ್ತದೆ. ಈ ವಿಚಾರದಲ್ಲಿ ಯಾವಾಗಲೂ ನಿರರ್ಥಕವಾಗದ ಒಂದು ಪರೀಕ್ಷೆಯುಂಟು. ಹಿಂಡಿನ ಕ್ರಮದಿಂದ ನಿಮ್ಮ ಧಾರ್ಮಿಕ ಜೀವನವು ಅಭಿವೃದ್ಧಿಹೊಂದುತ್ತಿದೆಯೇ ಎಂಬುದನ್ನು ನೋಡಿಕೊಳ್ಳಿ. ನಿಮ್ಮ ವಿಚಾರದಲ್ಲಿ ಅದು ನಿಜವಾಗಿದ್ದಲ್ಲಿ ಮರಿಗಳ ವಿಚಾರದಲ್ಲಿಯೂ ಹಾಗೆಯೇ ಎಂದು ನೀವು ಧಾರಾಳವಾಗಿ ತಿಳಿಯಬಹುದು. ಇಲ್ಲವಾದ ಪಕ್ಷದಲ್ಲಿ ನೀವು ಮಾಡುವ ಕೆಲಸದಲ್ಲಿ ಏನೋ ದೋಷವಿದೆಯೆಂದು ತಿಳಿದು ಅದನ್ನು ಸರಿಪಡಿಸುವ ಉದ್ದೇಶದಿಂದ ಆ ದೋಷವು ಯಾವುದೆಂಬುದನ್ನು ಆಲೋಚನೆಯಿಂದಲೂ ದೇವರ ಪ್ರಾರ್ಥನೆಯಿಂದಲೂ ಕಂಡುಹಿಡಿದುಕೊಳ್ಳಿ.

ನಮ್ಮ ದೇಶದ ಹಿಂಡುಗಳ ದೃಷ್ಟಿಯಿಂದಲೂ ಮೇಲೆ ಹೇಳಿರುವ ವಿಚಾರಗಳೆಲ್ಲವೂ ಒಪ್ಪತಕ್ಕವೂ ಆಚರಣೆಗೆ ತರತಕ್ಕವೂ ಆಗಿವೆ. ಆದರೆ ಈ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾದ ಅವಶ್ಯಕತೆಯುಂಟು.

ನಮ್ಮ ಹಿಂಡುಗಳಲ್ಲಿ ಕೆಲವರು ಲಿಂಗಾಯಿತರು, ಕೆಲವರು ಮಹಮ್ಮದೀಯರು, ಕೆಲವರು ಕ್ರೈಸ್ತರು, ಕೆಲವರು ಬ್ರಾಹ್ಮಣರು ಹೀಗೆ ನಾನಾ ಪಂಗಡದವರಿರುತ್ತಾರೆ. ಸಾಮಾನ್ಯವಾದ ಹಿಂಡಿನ ಕೂಟವನ್ನೇನೋ ಪ್ರಾರ್ಥನೆಯಿಂದ ಪ್ರಾರಂಭಿಸಿ ಮುಗಿಸಬಹುದು. ಆದರೆ ಶಿಬಿರವಾಸಕ್ಕೆ ಹೋದಾಗ ಮಾತ್ರ ತೊಂದರೆಯುಂಟು. ಯಾಕೆಂದರೆ ಮರಿಗಳು ಸದಾ ಕಾಲದಲ್ಲಿಯೂ ನಮ್ಮ ಜೊತೆಯಲ್ಲಿಯೇ ಇರುತ್ತಾರೆ. ಇದಲ್ಲದೆ ಊಟ ಉಪಚಾರಗಳ ವಿಚಾರದಲ್ಲೂ ಅನೇಕ ಸಮಸ್ಯೆಗಳು ಬರುತ್ತವೆ. ಇವುಗಳನ್ನು ೧೮ನೆಯ ಅಧ್ಯಾಯದಲ್ಲಿ ವಿಚಾರಮಾಡಲಾಗುತ್ತದೆ. ಆದುದರಿಂದ ದಿನಚರಿಯಲ್ಲಿ ಅವರವರ ಮತಾಚರಣೆಗೆ ಸರಿಯಾದ ಅವಕಾಶವಿರಬೇಕು.

ಯಾರು ನಮಗೆ ಎಷ್ಟು ಸಣ್ಣ ಉಪಕಾರಮಾಡಿದರೂ ಕೂಡಲೆ ಅವರನ್ನು ವಂದಿಸುತ್ತೇವೆ. ಹೀಗಿರುವಾಗ ನಮಗೆ ಜನ್ಮವನ್ನಿತ್ತು ಅದರ ಜೊತೆಗೆ ಎಲ್ಲಾ ಸಾಧನಗಳನ್ನೂ ಕೊಟ್ಟು ಸದಾ ನಮ್ಮ ಕ್ಷೇಮಲಾಭಗಳನ್ನು ನೋಡಿಕೊಳ್ಳುತ್ತಿರುವ ಭಗವಂತನಿಗೆ ನಿತ್ಯವೂ ವಂದನೆಗಳನ್ನು ಸಮರ್ಪಣೆಮಾಡುವುದು ಅವಶ್ಯಕವಾದ ಕೆಲಸವೆಂತ ನಾವು ಭಾವಿಸಬೇಕು. ಇದಕ್ಕಾಗಿ ಬೆಳಗ್ಗೆ ಎದ್ದು ಶುಚಿರ್ಭೂತರಾಗಿ ಕೂಡಲೆ ಎಲ್ಲರೂ ಸೇರಿ ದೇವರ ಪ್ರಾರ್ಥನೆಯನ್ನು ಮಾಡಬೇಕು. ಹಾಗೆಯೇ ಮಲಗುವುದಕ್ಕೆ ಸ್ವಲ್ಪ ಮುಂಚೆ ಎಲ್ಲರೂ ಸೇರಿ ನಮ್ಮ ಜೀವಮಾನದ ಒಂದು ದಿವಸವನ್ನು ಸುಗಮವಾಗಿ ಮಾಡಿ ನಮ್ಮನ್ನು ಕಾಪಾಡಿದುದಕ್ಕಾಗಿ ಇನ್ನೊಂದು ಬಾರಿ ಭಗವಂತನಿಗೆ ನಮ್ಮ ಧನ್ಯವಾದಗಳನ್ನು ಅರ್ಪಿಸುವುದೂ ಅವಶ್ಯಕ. ಈ ಪ್ರಾರ್ಥನೆಗಳನ್ನು ಎಲ್ಲಾ ಪಂಗಡಗಳವರೂ ಸೇರಿ ಮಾಡಬಹುದು. ಭಗವಂತನನ್ನು ಸ್ತುತಿಸದ ಮತವು ಯಾವುದೂ ಇಲ್ಲ. ನಾಸ್ತಿಕರಿಗಾದರೋ ಈ ಭ್ರಾತೃವರ್ಗದಲ್ಲಿ ಸ್ಥಾನವೇ ಇಲ್ಲ. ಹೀಗಿರುವಾಗ ಎಲ್ಲಾ ಪಂಗಡದವರಿಗೂ ಅನ್ವಯಿಸುವಂಥ ಪ್ರಾರ್ಥನೆಗಳಲ್ಲಿ ಸೇರಲು ಯಾವ ಅಡ್ಡಿಯೂ ಇರುವುದಿಲ್ಲ. ಇಂಥಾ ಪ್ರಾರ್ಥನೆಗಳು ಯಾವ ಭಾಷೆಯಲ್ಲಿ ಬೇಕಾದರೂ ಸಿಕ್ಕುತ್ತವೆ ಮತ್ತು ಎಷ್ಟು ಬೇಕಾದರೂ ಸಿಕ್ಕುತ್ತವೆ. ಇಂಥವುಗಳನ್ನೆಲ್ಲಾ ಆರಿಸಿ ಆಕೇಲನು ಒಂದು ಪ್ರಾರ್ಥನೆಯ ಪುಸ್ತಕವನ್ನು ಮಾಡಿಟ್ಟುಕೊಳ್ಳುವುದು ಉತ್ತಮ.

ಇಷ್ಟು ಪ್ರಾರ್ಥನೆಯ ವಿಚಾರವಾಯಿತು. ಇದಲ್ಲದೆ ಇತರ ಕರ್ಮಗಳೂ ಇವೆ. ಇವುಗಳನ್ನು ಮರಿಗಳು ಮಾಡಿಯೇ ತೀರಬೇಕೆಂದು ಬಲಾತ್ಕಾರಮಾಡಿ ನಿರ್ಬಂಧದಿಂದ ಮಾಡಿಸುವುದು ಉಚಿತವಾಗಿ ತೋರು

ವುದಿಲ್ಲ. ಯಾರಿಗೆ ಕರ್ಮ ಶ್ರದ್ಧೆಯಿರುತ್ತದೋ ಅವರು ಪ್ರೇರೇಪಣೆಯಿಲ್ಲದೆ ಅವುಗಳನ್ನು ಮಾಡುತ್ತಾರಾದರೂ ಎಲ್ಲರೆದುರಿನಲ್ಲಿಯೂ ಮಾಡುವುದಕ್ಕೆ (ಉಳಿದವರು ಮಾಡದಿರುವಾಗ) ಸ್ವಲ್ಪ ಸಂಕೋಚಪಡುತ್ತಾರೆ. ಆದ್ದರಿಂದ ಆಕೇಲನು ಪ್ರತಿಯೊಬ್ಬ ಮರಿಗೂ ಅನುಕೂಲವಾಗುವಂತೆ ಕಾಲವನ್ನೂ ಸ್ಥಳಗಳನ್ನೂ ಗೊತ್ತುಮಾಡಿ ಪ್ರತಿಯೊಬ್ಬನೂ ತನ್ನ ಮತಾನುಸಾರ ನಿತ್ಯ ಕರ್ಮಗಳನ್ನು (ಬಾಹ್ಯಾಚರಣೆಗಳನ್ನು) ಮಾಡಲು ಅವಕಾಶವನ್ನು ಮಾಡಿಕೊಡಬೇಕು. ಅಲ್ಲದೆ ಆ ವಿಚಾರದಲ್ಲಿ ಕೈಲಾದಮಟ್ಟಿಗೆ ಉತ್ತೇಜನವನ್ನೂ ಕೊಡಬೇಕು. ಹೀಗೆ ಮಾಡುವುದರಿಂದ ಮಾಡುವವರನ್ನು ನೋಡಿ ಮಾಡದಿರುವವರೂ ಪ್ರಾರಂಭಿಸುವ ಯೋಚನೆ ಮಾಡುವ ಸಂಭವವುಂಟು. ಆದರೆ ಈ ರೀತಿ ನಿತ್ಯ ಕರ್ಮಾಚರಣೆಮಾಡುವವರನ್ನು ನೋಡಿ ಆ ರೀತಿ ಮಾಡದವರು ಅವರನ್ನು ಹೀಯಾಳಿಸುವ ಅಭ್ಯಾಸವಿರುವುದು ಅನೇಕ ಕಡೆ ಅನುಭವಕ್ಕೆ ಬಂದಿವೆ. ಆಕೇಲನು ಈ ವಿಚಾರದಲ್ಲಿ ಬಹಳ ನಿಷ್ಠುರನಾಗಿರಬೇಕು. ಇಂಥಾ ಪ್ರಯತ್ನಗಳಿಗೆ ಖಂಡಿತ ಅವಕಾಶಕೊಡಬಾರದು. ಇವುಗಳನ್ನು ಆಕೇಲರು ನನ್ನ ಸೂಚನೆಗಳು ಮಾತ್ರವೆಂದು ತಿಳಿಯಬೇಕು. ಅಲ್ಲದೆ ಇವುಗಳನ್ನು ಸಂದರ್ಭಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬಹುದು. ಈ ಸೂಚನೆಗಳನ್ನು ಆಚರಣೆಗೆ ತರುವಾಗ ಬಹಳ ಜಾಗರೂಕತೆಯಿಂದಲೂ ಸ್ವಲ್ಪ ಸ್ವಲ್ಪವಾಗಿಯೂ ತರಬೇಕು. ಇಲ್ಲವಾದರೆ ಮರಿಗಳಿಗೆ ಅದು ಕಿರುಕುಳವಾಗಿ ಕಂಡು ಅವರು ಹಿಂಡನ್ನೇ ಬಿಟ್ಟುಹೋಗುವ ಯೋಚನೆಮಾಡಬಹುದು. ನಿಜವಾಗಿಯೂ ನೋಡಿದಲ್ಲಿ ನಮ್ಮ ದೇಶದ ಹಿಂಡುಗಳಲ್ಲಿ ಈ ವಿಚಾರದಲ್ಲಿ ಪ್ರಯತ್ನವು ಬಹಳ ಮಟ್ಟಿಗೆ ನಡೆದಿರುವುದಾಗಿ ಕಂಡು ಬರುವುದಿಲ್ಲ. ಕೆಲವು ಹಿಂಡುಗಳಲ್ಲಿ ಅದರ ಗಂಧವೇ ಇಲ್ಲ. "ಸ್ಕೌಟಿಗೆ ಸೇರಿದರೆ ಜಾತಿ ಹೋಗುತ್ತೆ" ಎಂದು ಅನೇಕರು ತಮ್ಮ ಮಕ್ಕಳನ್ನು ಕಳುಹಿಸದೆ ನಿಲ್ಲಿಸಿಕೊಂಡಿರುವುದನ್ನು ನಾನು ನೋಡಿದ್ದೇನೆ. ಆದ್ದರಿಂದ ಹಿಂಡುಗಳ ಅಭ್ಯುದಯದಲ್ಲಿ ಆಸಕ್ತಿಯಿನ್ನುಳ್ಳ ಆಕೇಲರು ಈ ವಿಚಾರಕ್ಕೆ ಮುಖ್ಯವಾಗಿ ತಮ್ಮ ಗಮನವನ್ನು ಕೊಡಬೇಕಾಗಿದೆ.

ಬೇಟೆಗೆ ಹಿಂಡಿನ ಪ್ರಯಾಣ.

೧೩ನೆಯ ಅಧ್ಯಾಯ

ಕಾರ್ಯಕ್ರಮದ ನಕ್ಷೆ

ಪಾಠಕ್ರಮದ ಪಟ್ಟಿಯನ್ನು ಬರೆಯದೆ ಮನಸ್ಸಿಗೆ ಬಂದಹಾಗೆ ಯಾವುದೋ ಕಾಲದಲ್ಲಿ ಏನೋ ಪಾಠವನ್ನು ಮಾಡಿಕೊಂಡು ಪಾಠದಿಂದ ಪಾಠಕ್ಕೆ ಸುತ್ತಾಡುವ ಉಪಾಧ್ಯಾಯನ ವಿಚಾರದಲ್ಲಿ ನಾವು ಏನು ಹೇಳುತ್ತೇವೋ ತಿಳಿಯದು. ಹಿಂಡುಗಳಲ್ಲಿಯೂ ಕೂಡ ಈ ರೀತಿ ಕ್ರಮವಿಲ್ಲದೆ ಕೆಲಸಮಾಡುವ ತಪ್ಪಿಗೆ ಗುರಿಯಾಗುವ ನಾಯಕರು ನನಗೆ ತಿಳಿದಿರುವುದಕ್ಕಿಂತಲೂ ಹೆಚ್ಚುಮಂದಿಯಿದ್ದಾರೆ. ಜಾಗರೂಕತೆಯಿಂದ ಕಾರ್ಯಕ್ರಮವನ್ನು ನಕ್ಷೆಮಾಡಿಕೊಳ್ಳುವುದು ಕೈ ಪಿಡಿಯಲ್ಲಿ ಹೇಳಿರುವ ಒಂದು ಮುಖ್ಯವಾದ ವಿಚಾರ. ಇದನ್ನು ಎಲ್ಲಾ ಶಿಕ್ಷಣ ಶಿಬಿರಗಳಲ್ಲಿಯೂ ಮಾಡಿಯೇ ತೀರಬೇಕು. ಮತ್ತು ಇದನ್ನು ಅನುಸರಿಸಲೇಬೇಕೆಂತ ಒತ್ತಿ ಹೇಳುತ್ತಾರೆ. ಇದರ ಅವಶ್ಯಕತೆಯುಂಟೆಂಬ ತತ್ವವನ್ನು ನಾವೆಲ್ಲರೂ ಒಪ್ಪುತ್ತೇವೆ. ಆದರೆ ಈ ನಿರ್ಧಾರಕ್ಕೆ ಸರಿಯಾಗಿ ನಡೆಯದೆ ಅನೇಕರು ತಪ್ಪುತ್ತಾರೆ. ಹಿಂಡಿನ ಆಡಳಿತವು ಸರಿಯಾಗಿರುವುದು ಅಥವಾ ಹೇಗೋ ಒಂದು ರೀತಿಯಲ್ಲಿರುವುದು ಈ ವ್ಯತ್ಯಾಸವು ಇದರಿಂದಲೇ ಉಂಟಾಗುತ್ತದೆ. ಇತರ ವಿಚಾರಗಳಲ್ಲಿ ದಕ್ಷರಾದ ನಾಯಕರನೇಕರು ತಮ್ಮ ಕೆಲಸವನ್ನು ಈ ಒಂದು ಕೆಟ್ಟ ಸೋಮಾರಿತನದಿಂದ ಹಾಳುಮಾಡಿದ್ದಾರೆ. ಇಂಥವರು ಸ್ವಾಭಾವಿಕವಾಗಿ ಮರಿಗಳನ್ನು ಶಾಶನಮಾಡುವುದರಲ್ಲಿಯೂ ಮತ್ತು ಅವರಲ್ಲಿ ಆಸಕ್ತಿಯನ್ನುಂಟುಮಾಡುವುದರಲ್ಲಿಯೂ ಶಕ್ತಿಯುಳ್ಳವರಾಗಿರುವುದರಿಂದ ತಮ್ಮ ಹಿಂಡನ್ನು ಸರಾಸರಿ ಅಂತಸ್ಥಿಗೆ (average level) ತರುತ್ತಾರೆ. ಅಥವಾ ಸ್ವಲ್ಪ ಮೇಲೆಹೋದರೂ ಹೋಗಬಹುದು. ಅಲ್ಲಿಗೆ ತಮ್ಮ ಕೈಲಿದ್ದ ಹುಟ್ಟು (ದೋಣಿಯನ್ನು ನಡೆಸಲು ಉಪಯೋಗಿಸುವ ಸಾಧನ) ಗಳನ್ನು ಬಿಸಾಟು ಕುಳಿತುಕೊಳ್ಳುತ್ತಾರೆ. ಅವರು ಹೀಗೆ ಮಾಡುವುದಕ್ಕೆ ಬದ

ಲಾಗಿ ಒಂದು ಕ್ರಮದಿಂದ ಕೆಲಸಮಾಡಿದರೆ ಅವರ ಕೆಲಸವು ಮತ್ತಷ್ಟು ಚೆನ್ನಾಗಿ ಆಗುವುದು.

ಕೂಟದ ದಿನ ನಾಳೆ ಬರುತ್ತದೆನ್ನುವಾಗ ಅದರ ಯೋಚನೆ ಮಾಡುವುದರಿಂದ ಪ್ರಯೋಜನವಿಲ್ಲ. ನಮ್ಮ ನಕ್ಷೆಯು ಬಹಳ ಮುಂದುವರಿದು ಹೋಗಬೇಕು. ಸೂಕ್ಷ್ಮವಾಗಲ್ಲದಿದ್ದರೆ ಸ್ಥೂಲವಾಗಿಯಾದರೂ ಇರಲೇಬೇಕು. ಇದರಿಂದ ಕೆಲವು ವಿಚಾರಗಳನ್ನು ಗಮನಕ್ಕೇ ತಂದುಕೊಳ್ಳದೆ ಇನ್ನು ಕೆಲವು ವಿಚಾರಗಳಿಗೆ ಹೆಚ್ಚು ಗಮನಕೊಡುವ ದೋಷವು ನಿವಾರಣೆಯಾಗುವುದು. ಅಲ್ಲದೆ ಹೀಗೆ ಮಾಡುವುದರಿಂದ ವಿಚಾರಗಳಲ್ಲಿ ಕ್ರಮ ಮತ್ತು ಪರಸ್ಪರ ತಾರತಮ್ಯವಿರುತ್ತದೆ. ನಮ್ಮ ಹಿಂಡುಗಳಲ್ಲಿ ನಡೆಯುವ ಶಿಕ್ಷಣದಲ್ಲಿ ಬಹಳ ಭಾಗವು ಹೇಗೋ ಒಂದು ರೀತಿಯಲ್ಲಿ ನಡೆದುಬಿಡುತ್ತದೆ. ಅವೆಲ್ಲವೂ ಒಟ್ಟಿಗೆ ಸೇರಿ ಒಂದು ಸಂಪೂರ್ಣ ರೂಪವನ್ನು ಹೊಂದುವುದಿಲ್ಲ. ಏಕಮುಖತ್ವ ಮತ್ತು ಪರಸ್ಪರ ಸಂಬಂಧವಿಲ್ಲದಿರುವಿಕೆ, ಈ ಎರಡು ದೋಷಗಳೂ ಸ್ವಲ್ಪ ಶ್ರಮದಿಂದಲೇ ನಿವಾರಿಸಲ್ಪಡುತ್ತವೆ. ಮೊದಲು ನಾವು ಕಳೆದುಹೋದ ತಿಂಗಳುಗಳಲ್ಲಿ ಏನು ಕೆಲಸಮಾಡಿದ್ದೇವೆಂದು ಸಿಂಹಾವಲೋಕನ ಕ್ರಮದಿಂದ ನೋಡಬೇಕು. ಆ ಮೇಲೆ ಮುಂದೆ ಬರುವ ತಿಂಗಳುಗಳಲ್ಲಿ ಏನೇನು ಕೆಲಸಗಳನ್ನು ಮಾಡಬೇಕೆಂಬುದನ್ನು ನಿರ್ಧರಿಸಿಕೊಳ್ಳಬೇಕು. ಮೊದಲನೆಯದು ಎರಡನೆಯ ವಿಚಾರದಲ್ಲಿ ಸಹಾಯಮಾಡುತ್ತದೆ. ಈ ಸಂದರ್ಭದಲ್ಲಿ ನಮ್ಮ ನೋಟ್ ಪುಸ್ತಕದಲ್ಲಿ ಮುಂದೆ ಮಾಡಬೇಕಾಗುವ ಕೆಲಸಗಳಿಗೆ ಸಂಬಂಧಪಟ್ಟ ಸೂಚನೆಗಳನ್ನು ಬರೆದುಕೊಳ್ಳುವುದಕ್ಕಾಗಿ ಕೆಲವು ಪುಟಗಳನ್ನು ಬಿಟ್ಟುಕೊಂಡಿರುವುದು ಅನುಕೂಲವೆಂದು ನನಗೆ ಕಂಡು ಬಂದಿದೆ. "ಕೆಲವು ಕಾಲದಿಂದ ಹಿಂಡು ಪರೋಪಕಾರಕ್ಕಾಗಿ ಹೋಗಿಲ್ಲ; ನಾವು "ಸಾಮು" ಎಂಬ ಭಾಗಕ್ಕೆ ಸೇರಿದ ಪ್ರವೀಣತೆಯ ಪದಕಗಳನ್ನು ಬಹಳವಾಗಿ ಪಡೆಯುತ್ತಿದೇವೆ, ಇತರ ಭಾಗಗಳ ಕಡೆಗೆ ಗಮನಕೊಡುತ್ತಿಲ್ಲ; ಯಾರೋ ಒಬ್ಬರು ಹೇಳಿಕೊಡುವುದಕ್ಕೆ ಒಪ್ಪಿಕೊಂಡಿರುವುದರಿಂದ ಕೆತ್ತನೆಯ ಕೆಲಸ ಪ್ರಾರಂಭಿಸುವುದು ಒಳ್ಳೆಯದು; ಪ್ರಕೃತಿ ವಿಮರ್ಶೆಯ ಕೆಲಸವನ್ನು ಇನ್ನೂ ಹೆಚ್ಚಾಗಿ ಮಾಡಬೇಕು; ನಮ್ಮ ಹಕ್ಕೆ (lair)ಯನ್ನು ಪುನಃ ಅಲಂಕಾರಮಾಡಬೇಕು." ಇವೇ ಮುಂತಾದ ವಿಷಯಗಳನ್ನು ಆ ಪುಟಗಳಲ್ಲಿ ಅನೇಕ ವೇಳೆ ಗುರುತು ಮಾಡಿದ್ದೇನೆ.

ಆಟ ಮತ್ತು ಕೆಲಸ ಇವುಗಳಲ್ಲಿ ಸರಿಯಾದ ತಾರತಮ್ಯವನ್ನು ತಂದುಕೊಳ್ಳುವುದು, ಕಾರ್ಯಕ್ರಮದ ನಕ್ಷೆಯನ್ನು ತಯಾರ್ಮಾಡುವುದರಲ್ಲಿ ಮಾಡಬೇಕಾದ ಮೊದಲನೆಯ ಕೆಲಸ. ಇದು ಬಂದ ಮೇಲೆ, ಅದರ ಮೇಲೆ ಸರಿಯಾದ ಲಕ್ಷ್ಯವಿಟ್ಟಿರಬೇಕು. ಯಾಕೆಂದರೆ ನಾವು ಇವೆರಡರಲ್ಲಿ ಯಾವುದಾದರೂ ಒಂದು ಕಡೆಗೆ ಜಾರಿಹೋಗುವ ಸಂಭವವುಂಟು. ಹಿಂದಿನ ಕ್ರಮದಲ್ಲಿ ಹುಡುಗನು ಆಟಗಳೇ ತನ್ನ ಜೀವಮಾನದ ಮುಖ್ಯ ಕರ್ತವ್ಯವೆಂದು ಭಾವಿಸುವನೆಂದು ಹೇಳುವುದರ ಅನುಭವವು ನಮ್ಮೆಲ್ಲರಿಗೂ ಉಂಟಾಗಿದೆ. ಈ ಸಂದರ್ಭದಲ್ಲಿ ಆಟಗಳಿಗೆ ಶಿಕ್ಷಣವಿಚಾರದಲ್ಲಿರುವ ಬೆಲೆಯನ್ನು ವಿವರಿಸಿ ಹೇಳಬೇಕಾದ ಅವಶ್ಯಕತೆಯಿಲ್ಲ. ಶಿಸ್ತು, ಸಾಂಘಿಕ ಪ್ರಯತ್ನ, ಗಮನವನ್ನು ಸರಿಯಾಗಿಡುವುದು, ದೃಷ್ಟಿಪಾಟವ, ಆರೋಗ್ಯ, ಶಮೆ, ಅಸ್ವಾರ್ಥತೆ, ನಿಷ್ಠೆ (loyalty) ಈ ಗುಣಗಳೆಲ್ಲಾ ಆಟಗಳಿಂದುಂಟಾಗುತ್ತವೆ. ಹುಡುಗನಿಗೆ ಶಿಕ್ಷಣವನ್ನು ಕೊಡುವುದರಲ್ಲಿ ಆಟಗಳು ಬಹಳ ಸಹಕಾರಿಗಳಾಗಿರಬೇಕೆಂಬುದೇ ನಮ್ಮ ಬಯಕೆ. ಆದರೆ ನಾವು ಚಿತ್ರದ ಆ ಕಡೆಯನ್ನು ಮರೆಯಬಾರದು. ನಡತೆಯ ಶಿಕ್ಷಣದಲ್ಲಿ ಆಟಕ್ಕಿರುವಷ್ಟು ಬೆಲೆಯು ಕೆಲಸಕ್ಕೂ ಇದೆ. ಸಹನೆ, ಪುನಃ ಪ್ರಯತ್ನ, ಒಂದೇ ವಿಚಾರದಲ್ಲಿ ಗಮನ, ಮತ್ತು ಆತ್ಮಶಾಸನ; ಇವು ಕೆಲಸದಿಂದ ಬರುವಂತೆ ಬೇರೆ ಯಾವುದರಿಂದಲೂ ಬರುವುದಿಲ್ಲ. ಹುಡುಗನಿಗೆ ರೈಲಾಟವಾಡುವುದು, ಕಾಡುಜನರಂತೆ ಕುಣಿಯುವುದು ಇವುಗಳನ್ನು ಬಿಟ್ಟರೆ ಇನ್ನು ಯಾವುದರಲ್ಲಿಯೂ ಆಸಕ್ತಿಯಿರುವುದಿಲ್ಲವೆಂದು ತಿಳಿಯುವುದು ತಪ್ಪು. ಅವನಿಗೆ ಆಟದಲ್ಲಿ ಸಂಪೂರ್ಣವಾದ ಆಸಕ್ತಿಯಿರುವುದರಿಂದ ಅವನು ಅದನ್ನು ಬಹಳ ಹೆಚ್ಚಿನದೆಂದು ತಿಳಿಯುತ್ತಾನೆ. ಅವನ ಆಸಕ್ತಿಯನ್ನು ನಮ್ಮ ವಶಮಾಡಿಕೊಂಡರೆ ಅವನು ಆಟದಿಂದ ಕೆಲಸಕ್ಕೆ ಬದಲಾಯಿಸಲು ಸಿದ್ಧನಾಗಿರುತ್ತಾನೆ. ಪಾಠಶಾಲೆಯಲ್ಲಿ ಉಪಾಧ್ಯಾಯರೆದುರಿಗೆ ಗಣಿತದಲ್ಲಿ ಯಾವುದೋ ಒಂದು ಲೆಖ್ಖವನ್ನು ಮಾಡಲು ಹೆಜ್ಜೆಹೆಜ್ಜೆಗೂ

ಮುಗ್ಗರಿಸುತ್ತಿರುತ್ತಾನೆ. ಒಂದು ಗಂಟೆ ಕಳೆದ ಮೇಲೆ ಅಷ್ಟೇ ಕಷ್ಟವಾದ ವಿಚಾರವನ್ನು ಹಿಂಡಿನ ಶಿಕ್ಷಣದಲ್ಲಿ ತಾನಾಗಿಯೇ ಬಹಳ ಸುಲಭವಾಗಿ ದಾಟಿಹೋಗುತ್ತಾನೆ. ಹಿಂಡಿನ ಕೂಟದಲ್ಲಿ ಕೆಲಸವಿಲ್ಲದೇ ಹೋದರೆ ಅದರ ಅಭಾವವು ಅವನಿಗೆ ಗೊತ್ತಾಗುತ್ತದೆ ಮತ್ತು ಅದಿಲ್ಲದಿರುವುದಕ್ಕಾಗಿ ತನ್ನ ಅಸಮಾಧಾನವನ್ನು ಕೂಡ ತೋರ್ಪಡಿಸಬಹುದು.

ನಮ್ಮ ಕಾರ್ಯಕ್ರಮದಲ್ಲಿ ಆಟ ಮತ್ತು ಕೆಲಸ ಎರಡಕ್ಕೂ ಸ್ಥಾನವಿರಬೇಕು. ಇವು ಯಾವ ಪ್ರಮಾಣದಲ್ಲಿರಬೇಕೆಂಬುದನ್ನು ಆಲೋಚನೆಯಿಂದಲೂ ಅನುಭವದಿಂದಲೂ ಕಂಡುಹಿಡಿದುಕೊಳ್ಳಬೇಕು. ಈ ಸಮಸ್ಯೆಯನ್ನು ಯಾವ ಆಕೇಲನೂ ಉಪೇಕ್ಷಿಸುವ ಹಾಗಿಲ್ಲ. ಕೆಲಸವನ್ನು ಬಹಳ ಮಟ್ಟಿಗೆ ಹೆಚ್ಚುಮಾಡಿ ಆಟಗಳನ್ನು ಉಪೇಕ್ಷೆಮಾಡಿರುವ ಊಹಾಶಕ್ತಿಯು ಕಡಮೆಯಾಗಿರುವ ನಾಯಕರನೇಕರನ್ನು ನಾನು ನೋಡಿದ್ದೇನೆ ಮತ್ತು ಊಹಾಶಕ್ತಿಯು ಬಹಳ ಹೆಚ್ಚಾಗಿ ಬರೀ ಆಟಗಳನ್ನಾಡಿಸಿ ಯಾವ ಕೆಲಸಗಳನ್ನೂ ಮಾಡಿಸದಿರುವವರನ್ನೂ ನೋಡಿದ್ದೇನೆ. ಈ ಎರಡು ವಿಚಾರಗಳಲ್ಲಿಯೂ ಹೆಚ್ಚು ತಪ್ಪುಮಾಡುವವರು ಹಳೆಗೈಗಳು. ಅವರು ತಮಗೆ ಎಲ್ಲವೂ ತಿಳಿದಿದೆಯೆಂತಲೂ ಅದಕ್ಕಾಗಿ ಏನೂ ಶ್ರಮಪಡಬೇಕಾದ್ದಿಲ್ಲವೆಂತಲೂ ತಿಳಿದುಕೊಂಡಿರುತ್ತಾರೆ.

ಕಥೆಗಳ ವಿಚಾರದಲ್ಲಿಯೂ ನಾವು ಹೀಗೆಯೇ ನಡೆದುಕೊಳ್ಳಬೇಕು. ನಮ್ಮಲ್ಲಿ ಯಾವ ಕಥೆಗಳು ಇವೆಯೆಂಬುದನ್ನೂ ನಾವು ಹೇಳುವ ಕಥೆಗಳು ನಿಜವಾಗಿಯೂ ಉಪಯೋಗಕ್ಕೆ ಬರತಕ್ಕವುಗಳೇ ಎಂಬುದನ್ನೂ ಆಗಾಗ ನೋಡಿಕೊಳ್ಳುತ್ತಿರಬೇಕು. ಕಥೆಗಳ ತರಂಗಗಳನ್ನೂ ಮತ್ತು ಅನುಬಂಧಗಳನ್ನೂ ನಾವು ಮುಂದಾಗಿಯೇ ಶೇಖರಿಸಿ ಸಿದ್ಧಪಡಿಸಿಕೊಂಡಿರಬೇಕು.

ನಾಡಕುಣಿತಗಳು (Folk-dancing), ಪ್ರಕೃತಿ ಪರ್ಯಟನ (Nature-rambles), ಕೈ ಕೆಲಸಗಳು, ಪ್ರದರ್ಶನಗಳು (Displays), ಶಿಬಿರಗಳು, ಫುಟ್ ಬಾಲ್ ಆಟದ ಗುಂಪು, ಪುಸ್ತಕ ಭಂಡಾರ ಮುಂತಾದ ವಿಚಾರಗಳಿಗೂ ಮೇಲೆ ಹೇಳಿರುವಂತೆಯೇ ಗಮನವನ್ನು ಕೊಡಬೇಕು. ಮುಂದಾಗಿ ಆಲೋಚಿಸದೆ ಹೋದರೆ, ಈ ವಿಚಾರಗಳನ್ನು ಯಾವ ರೀತಿಯಲ್ಲಿ ನಡೆಸಬೇಕೋ ಆ ರೀತಿಯಲ್ಲಿ ನಡೆಸಲಾಗುವುದಿಲ್ಲ.

ಪ್ರತಿಯೊಂದು ಕೂಟದಲ್ಲಿಯೂ ನಡೆಸಬೇಕಾದ ಅಂಶಗಳನ್ನು ಪರಿಷ್ಕಾರವಾಗಿ ಮುಂದಾಗಿಯೇ ಬರೆದಿಟ್ಟುಕೊಳ್ಳಬೇಕು. ಇದರಿಂದ ನಿಮ್ಮ ಕಾಲದ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳುವುದಕ್ಕೂ, ಹುಡುಗರಲ್ಲಿ ಆಸಕ್ತಿಯನ್ನು ಸರಿಯಾದ ರೀತಿಯಲ್ಲಿಡುವುದಕ್ಕೂ, ಮುಂದೇನುಮಾಡಬೇಕೆಂದು ಆತಂಕದಿಂದ ಯೋಚಿಸುತ್ತಾ ಹಿಂದಿನ ಉತ್ಸುಕತೆಯನ್ನೂ ಶಿಸ್ತನ್ನೂ ಹಾಳುಮಾಡದಿರುವುದಕ್ಕೂ ಬಹಳಮಟ್ಟಿಗೆ ಸಹಾಯವಾಗುತ್ತದೆ. ಕಾರ್ಯಕ್ರಮವನ್ನು ಸ್ವಲ್ಪ ಮುಂದಾಗಿ ಮನಸ್ಸಿನಲ್ಲಿ ಯೋಚನೆಮಾಡಿ ಅಲ್ಲಿಗೆ ಬಿಟ್ಟುಬಿಡುವ ಒಂದು ದುರಭ್ಯಾಸವು ಬರುವುದು ಸಾಮಾನ್ಯವಾಗಿರುತ್ತದೆ. ಕಾರ್ಯತಃ ಇದು ಕೊನೆಯ ನಿಮಿಷದವರೆಗೂ ಕಾಲ ತಳ್ಳುವುದು ಇಲ್ಲವೇ ಆಲೋಚನೆಯನ್ನೇ ಮಾಡದಿರುವುದು ಇವುಗಳಲ್ಲಿ ಕೊನೆಗಾಣುತ್ತದೆ. ಮುಂದಾಗಿ ಯೋಚನೆಮಾಡಿ ಬರೆದಿಡುವುದರ ಮಟ್ಟಿಗೆ ಇದು ಸರಿತೂಗುವುದಿಲ್ಲವೆಂತ ಅನುಭವದಲ್ಲಿ ಕಂಡುಬಂದಿದೆ.

ಇಲ್ಲಿ ಒಂದೂವರೆ ಗಂಟೆಯ ಕೂಟಕ್ಕೆ ಅನುಗುಣವಾದ ಒಂದು ಮಾದರಿಯ ಕಾರ್ಯ ಕ್ರಮವನ್ನು ಕೊಟ್ಟಿದೆ.

10 ನಿಮಿಷಗಳು :—ಆರಂಭ-ಘನಗರ್ಜನೆ-ಧ್ವಜಾರೋಹಣ-ಪ್ರಾರ್ಥನೆ-(ಸರಿ ಕಂಡು ಬಂದರೆ) ಪರೀಕ್ಷೆ-ಚಂದಾ ವಸೂಲುಮಾಡುವುದು.

5 ನಿಮಿಷಗಳು :—ಆಟ-ಶರೀರಕ್ಕೆ ವ್ಯಾಯಾಮವನ್ನುಂಟುಮಾಡಿ ಕೂಗಾಟಕ್ಕೆ ಅವಕಾಶಕೊಡತಕ್ಕದ್ದು.

10 ನಿಮಿಷಗಳು :—ಕೆಲಸ-ಮುಖಂಡರು ಮತ್ತು ಶಿಕ್ಷಕರ ಮೂಲಕ.

10 ನಿಮಿಷಗಳು :—ಸ್ಪರ್ಧೆಗಳು-ಆಗತಾನೇ ಮುಗಿಸಿದ ಕೆಲಸಕ್ಕೆ ಸಾಧ್ಯವಾದರೆ ಸಂಬಂಧಿಸಿರಬೇಕು.

10 ನಿಮಿಷಗಳು :—ಆಕೇಲ ಅಥವಾ ಬಘೀರರಿಂದ ಪಾಠ ಅಥವಾ ಕೆಲಸ.

10 ನಿಮಿಷಗಳು :—ಕಾಡಿನ ಕುಣಿತ ಅಥವಾ ಕಥಾಭಿನಯ.

10 ನಿಮಿಷಗಳು :—ಆಟಗಳು-ಕೊನೆಯ ಆಟ-ಹೆಚ್ಚು ಗದ್ದಲದಿಂದ ಕೂಡಿರಬಾರದು.

20 ನಿಮಿಷಗಳು :—ಬುದ್ಧಿ ಮಾತುಗಳು (yarn) ಮತ್ತು ಸಂಸ್ಕಾರಗಳು (ಯಾವುದಾದರೂ ಇದ್ದರೆ.)

5 ನಿಮಿಷಗಳು :—ಉಪಸಂಹಾರ—ಪ್ರಕಟಣೆಗಳು—ಪ್ರಾರ್ಥನೆ-ಘನಗರ್ಜನೆ-ಧ್ವಜಾವರೋಹಣ.

—ಛೀಲ್.

(ಮುಂದುವರಿಯುವುದು)

ರೋವರ್ ಸ್ಕೌಟುಗಳೂ ಗ್ರಾಮಪುನರುಜ್ಜೀವನವೂ

ಗ್ರಾಮಪುನರುಜ್ಜೀವನವೆಂದರೇನು ?

ಗ್ರಾಮ ಪುನರುಜ್ಜೀವನವೆಂಬುದು ಈಗ ಕೆಲವು ವರ್ಷಗಳಿಂದ ಹುಟ್ಟಿದ ಮಾತಾಗಿದೆ. ಜನರಲ್ಲಿ ನಾಗರೀಕತೆಯು ಹೆಚ್ಚುತ್ತ ಬಂದಹಾಗೆ ಪದ್ಧತಿ ಆಚರಣೆಗಳನ್ನು ಮರೆಯುತ್ತ ಬಂದರು. ಮೈಸೂರು ದೇಶವು ಪ್ರಕೃತಿ ಸೌಂದರ್ಯದ ಬೀಡು. ಹಿಂದೂದೇಶದಲ್ಲಿ ಇದು ಮಾದರೀ ಸಂಸ್ಥಾನವೆಂದು ಹೆಸರುಗೊಂಡಿದೆ. ಘನ ಸರಕಾರದವರಿಂದ ಪ್ರಜೆಗಳಿಗೆ ಆಗಾಗ್ಗೆ ಸಲ್ಲುತ್ತಿರುವ ಹಿತೋಪದೇಶದಿಂದ ವ್ಯವಸಾಯ, ಪಶುಪಾಲನೆ, ಕೈಗಾರಿಕೆ ಇವುಗಳಲ್ಲಿ ಆಸಕ್ತಿಯನ್ನು ಕಲ್ಪಿಸಿಕೊಂಡು ಪ್ರಜೆಗಳು ಸಲ್ಲಿಸುತ್ತಿರುವ ಆದರಾತಿಶಯಗಳೇ ಇದಕ್ಕೆ ಕಾರಣ.

ಹಿಂದೂದೇಶದ ಯಾ ಮೈಸೂರು ದೇಶದ ವಾತಾವರಣವನ್ನು ಪಾಶ್ಚಿಮಾತ್ಯದೇಶಗಳಿಗೆ ಸರಿಹೋಲಿಸಲಾಗುವುದಿಲ್ಲ. ಅಲ್ಲಿಯ ರೀತಿ ನಿಯಮಗಳನ್ನು ಇಲ್ಲಿಯೂ ಪಡೆಯಬೇಕೆಂದರೆ ಉದಾಹರಣೆಯು ದೊರೆಯಲಾರದು. ಬಡತನವು ಎಲ್ಲಾ ದೇಶಗಳಲ್ಲಿಯೂ ಇದ್ದೇಇದೆ. ಈ ದೇಶದಲ್ಲಿಮಾತ್ರ ಬಡತನವು ಜನರನ್ನು ಕಾಡುತ್ತಿದೆ; ಬೇರೆ ದೇಶಗಳಲ್ಲಿಲ್ಲವೆಂದಲ್ಲ. ಪಾಶ್ಚಿಮಾತ್ಯರು ಸರಳಜೀವನದಿಂದ ಪ್ರಕೃತಿ ಸೌಂದರ್ಯವನ್ನು ತಾವಾಗಿಯೇ ಕಲ್ಪಿಸಿಕೊಳ್ಳುವ ಸಾಮರ್ಥ್ಯದಿಂದ ಕೂಡಿದವರಾಗಿ ಜೀವನವು ಒಂದು ಬೆಟ್ಟವೆಂಬುದಾಗಿ ತೋರ್ಪಡಿಸಿಕೊಳ್ಳದೆ ಸರಳ ಸ್ವಭಾವದಿಂದ ಕೂಡಿದವರಾಗಿದ್ದಾರೆ.

ದೇಶವು ನೆಮ್ಮದಿಯಿಂದ ಮುಂದುವರಿಯಬೇಕಾದರೆ ಪ್ರಜೆಗಳು ಕಷ್ಟದೇಹಿಗಳಾಗಿರಬೇಕು. ಒಂದು ಸಂಸಾರದಲ್ಲಿ ಬಾಲ್ಯದೇಹಿಗಳು ಹತ್ತು ಜನರಿದ್ದು ಒಬ್ಬನು ಯಾ ಇಬ್ಬರು ಮಾತ್ರಹೊಲ, ತೋಟ, ಗದ್ದೆಗಳಲ್ಲಿ ಅಭಿರುಚಿಯಿಂದ ಕೆಲಸ ಮಾಡುತ್ತ, ಮಿಕ್ಕವರು ಸ್ವಾರ್ಥತೆಯಿಂದ ಪಟ್ಟಣಗಳನ್ನು ತಿರುಗುತ್ತ ಅದರ ಅಲಂಕಾರಕ್ಕೆ ಮರುಳಾಗಿ ಹಾಲು, ಅನ್ನವನ್ನು ಕೊಡುವ ಹಳ್ಳಿಯನ್ನು ಮರೆತಲ್ಲಿ, ದೇಶವು ಹೇಗೆತಾನೇ ಮುಂದುವರಿಯ

ಬೇಕು? “ಕೈ ಕೆಸರಾದರೆ ಬಾಯಿ ಮೊಸರು” ಎಂಬ ಗಾದೆಯಂತೆ ಪ್ರತಿಯೊಬ್ಬರೂ ಕಷ್ಟಾವಲಂಬಿಗಳಾಗಬೇಕು. ಪ್ರತಿಯೊಬ್ಬರೂ ಸರಕಾರದವರಿಂದ ಪದೇ ಪದೇ ಕೊಡಲ್ಪಡುತ್ತಿರುವ ಹಿತೋಪದೇಶಕ್ಕೆ ಕಿವಿಗೊಟ್ಟು ಲಾಲಿಸಿ ಆದರಂತೆ ನಡೆದುಕೊಂಡು ಹೊತ್ತಿನಬೆಲೆಯನ್ನರಿತು, ಕೆಲಸದಲ್ಲಿ ಕೀಳು ಮೇಲೆಂಬ ತುಚ್ಛಭಾವನೆಯನ್ನು ಕಲ್ಪಿಸಿಕೊಳ್ಳದೆ, ವಿದ್ಯಾವಂತರೆಲ್ಲರೂ ಹಳ್ಳಿಗಳನ್ನು ಅಲಕ್ಷಿಸದೆ, ವಿದ್ಯಾಗರ್ವದಿಂದ ಮೆರೆಯದೆ, ಪಟ್ಟಣದ ಕೃತ್ರಿಮ ಆಹಾರಗಳಿಗೆ ಮನಸೋತು ಕೆಲಸಕಾರ್ಯಗಳಿಲ್ಲದೆ ಪಟ್ಟಣಗಳಲ್ಲಿ ಅಲೆದಾಡುತ್ತ ಆಹಾರಗಳನ್ನು ಬದಲಾಯಿಸುತ್ತ, ಸಂಪಾದನೆಗೆ ರಹವಿಲ್ಲದಿದ್ದರೂ ಸಿನಿಮಾ, ನಾಟಕ ಮಂದಿರಗಳ ಗುಲಾಮರಾಗಿ ಅಲೆಯುತ್ತಿರುವುದು, ಕುಟುಂಬದ ಸೌಲಭ್ಯವನ್ನಾಗಲಿ, ದೇಶದ ಸೌಲಭ್ಯವನ್ನಾಗಲಿ ಎಂದೂ ಹೆಚ್ಚಿಸಲಾರವು.

ಅಂದಚಂದದಿಂದ ಶೋಭಿಸುವ ಪಟ್ಟಣವು ಹಳ್ಳಿಗನ ವಾಸಸ್ಥಾನಕ್ಕೆ ಎಂದೂ ಯೋಗ್ಯವಾದುದಲ್ಲ. ಕೆನೆ ಹಾಲನ್ನು ಗಟ್ಟಿ ಮೊಸರನ್ನೂ ಕುಟ್ಟಿ ಪಾಕುಮಾಡಿದ ಅಕ್ಕಿಯ ಅನ್ನವನ್ನೂ ಶಕ್ತಿವರ್ಧಕ ದವಸ ಧಾನ್ಯಗಳಲ್ಲಿ ಮೇಲೆನಿಸಿರುವ ರಾಗಿಯ ರೊಟ್ಟಿಹಿಟ್ಟನ್ನೂ ತಿಂದು ಬೆವರು ಸುರಿಯುವಂತೆ ಕೆಲಸಮಾಡಿ ಜೀರ್ಣಿಸಿಕೊಳ್ಳುವ ರೈತನು, ನಾಗರಿಕತೆಯ ಬಿಕ್ಕಟ್ಟಿಗೂ, ಪಟ್ಟಣಗಳ ಅಂದಚಂದಕ್ಕೂ ಮರುಳಾಗಿ, ಹಳ್ಳಿಯ ವಾಸವನ್ನು ದಿನೇ ದಿನೇ ದೂರೀಕರಿಸುತ್ತ, ಪ್ರತಿನಿತ್ಯವೂ ಮೋಟಾರುಬಸ್ಸು ಮತ್ತು ಇತರ ವಾಹನಗಳಲ್ಲೇ ಸಂಚರಿಸತೊಡಗಿ, ಪಟ್ಟಣಗಳಲ್ಲೇ ಹಲವು ವೇಳೆ ಕಾಲ ಕಳೆಯುತ್ತಾ, ಹಿರಿಯರು ಕೂಡಿಟ್ಟ ದುಡ್ಡಿಗೆ ಮೃತ್ಯುವಾಗಿ, ಹಣದ ಪೆಟ್ಟಿಗೆಗಳು ಬರಿದಾಗಿ, ತಲೆಗೆ ವಸ್ತ್ರವಿಲ್ಲದೆ, ಹಿರಿಯ:ರ ಬಾಳನ್ನು ನೆನೆದುಕೊಂಡು, “ತುರುಬನನ್ನು ನೆನೆದುಕೊಂಡು ಅಳುವ ವಿಧವೆಯಂತೆ” ಪಶ್ಚಾತ್ತಾಪಪಡುವ ಅನೇಕರನ್ನು ನಾವು ಇಂದು ನೋಡಬಹುದಾಗಿದೆ.

ಹಳ್ಳಿಗಳಿಂದಲೇ ದೇಶಕ್ಕೆ ಕೀರ್ತಿ. ಹಳ್ಳಿಗಳು ಮುಂದುವರಿದಲ್ಲಿ ದೇಶವೇ ಮುಂದುವರಿದ ಹಾಗೆ.

ಹಳ್ಳಿಗಳ ಮುಂದುವರಿಕೆಗೆ ಅನೇಕ ಎಡರು ತೊಡರುಗಳಿವೆ. ತೊಡರುಗಳು ಅತಿ ಪ್ರಬಲವಾದುವುಗಳಲ್ಲ. ತೊಡರುಗಳನ್ನು ಸರಿಪಡಿಸಿ ಮೇಲ್ಮೆಯನ್ನು ತರುವ ಶಕ್ತಿಯು ವಾಸವಿರುವ ರೈತನಲ್ಲಿದೆ. ರೈತನು ಹಳ್ಳಿಯಲ್ಲಿರುವ ಕುಂದುಕೊರತೆಗಳನ್ನರಿತು, ಸರಕಾರದವರಿಂದ ಕೊಡಲ್ಪಡುವ ಹಿತೋಪದೇಶಗಳಿಗೆ ಕಿವಿಗೊಟ್ಟು ಲಾಲಿಸಿ ಪಾಲಿಸಿದ ಹೊರತು ಹಳ್ಳಿಯು ಎಂದೂ ಮುಂದುವರಿಯಲಾರದು. ದ್ರವ್ಯವಂತನು ತಾನು ಹಣಗಾರನು, ಆದಕಾರಣ ವಾಸವಿರುವ ತನ್ನ ಹಳ್ಳಿಗೆ ತಾನೇ ಸರ್ವಾಧಿಕಾರಿಯೆಂದೂ, ಬಲಶಾಲಿಯು ತಾನೇ ಸರ್ವಾಧಿಕಾರಿಯೆಂದೂ ಮೆರೆಯಲು ಪ್ರಯತ್ನಪಟ್ಟಲ್ಲಿ ಒಪ್ಪೊತ್ತಿಗೆ ರಹವಿಲ್ಲದ ಬಡವನ ಪಾಡೇನು? ಅವನು ಮೇಲೆ ಕಾಣಿಸಿದವರ ಮುಂದಿನ ಗೊಂಬೆಯಂತಿರುತ್ತಾನೆ. ಗ್ರಾಮಾಭಿವೃದ್ಧಿಕಾರ್ಯಗಳು ಇಂಥಾ ಸ್ವಕಾರ್ಯ ದುರಂಧರರಿಂದ ಎಂದೂ ನಡೆಯಲಾರವು.

ತಾನು ಹುಟ್ಟಿದ ಊರು ತನ್ನದೆಂದೂ ಅದರ ಸಕಲ ಸಂಪತ್ತೂ ತನ್ನದೆಂದೂ, ಒದಗುವ ಆಪತ್ತು ತನಗೆ ಕೂಡಿದ್ದೆಂದೂ ಯಾವನು ಗ್ರಹಿಸಿ ತಾನು ಹುಟ್ಟಿದ ಊರಿನ ಶ್ರೇಯೋಭಿವೃದ್ಧಿಗಾಗಿ ಹಗಲೂ ಇರುಳೂ ದುಡಿಯುತ್ತಾನೋ, ಅವನೇ ಸದ್ಗೃಹಸ್ಥನು; ಆತನೇ ಧಾರ್ಮಿಕನು; ಆತನೇ ದೇಶದ ಕಲ್ಯಾಣಕ್ಕೂ ಭಾಗಿ ಎಂದು ಹೇಳಬೇಕಾಗಿದೆ.

ಹಳ್ಳಿಯ ವಾಸವೆಂದರೆ ನರಕವಾಸವೆಂದು
ಅನೇಕರು ತಿಳಿದಿದ್ದಾರೆ. ಈ ಅಪವಾದಕ್ಕೆ
ಹಳ್ಳಿಯಲ್ಲಿವಾಸವಾಗಿರುವವರೇ ಕಾರಣಭೂತರು.
ಹಳ್ಳಿಯು ನರಕವಾಸವೇ? ಹೌದು, ಎಂದಿನವರೆ
ಗೆ ತಮ್ಮ ತಮ್ಮ ಮಕ್ಕಳನ್ನು ಪ್ರತಿನಿತ್ಯವೂ ಶಾಲೆಗೆ
ಕಳುಹಿಸಿ, ವಿದ್ಯೆಯನ್ನು ಕಲಿಯಗೊಡಿಸುವುದಿ
ಲ್ಲವೋ, ಎಂದಿನವರೆಗೆ ಗ್ರಾಮದಲ್ಲಿ ತಿಪ್ಪೆಗಳನ್ನು
ಹಾಕುವರೋ, ಎಂದಿನವರೆಗೆ ಗ್ರಾಮಠಾಣವು
ಪಾಯಿಖಾನೆಗುಂಡಿ ಎಂದು ಭಾವಿಸಿ, ಮಲವಿಸ
ರ್ಜನೆಗೆ ಊರಿನಿಂದ ಹೊರಗಡೆ ಸ್ಥಳವನ್ನು ಏರ್ಪ
ಡಿಸಿಕೊಳ್ಳವೆ ಇರುವರೋ, ಗ್ರಾಮಠಾಣಗಳಲ್ಲಿ
ಮನೆಗಳ ಪಕ್ಕಗಳಲ್ಲಿ ಲಂಟಾಣ, ಪಾಪಾ
ಸುಕಳ್ಳಿ, ಮುಂತಾದ ಕಾಡು ಗಿಡಗಳುಬೆಳೆದು
ಗ್ರಾಮದ ಅಂದವನ್ನು ಕೆಡಿಸುವವೋ, ಚಾವಣಿ
ಇಲ್ಲದ ಹಾವು ಇಲಿಗಳ ಬಿಲಗಳಿಂದ ಕೂಡಿ
ಇಂದೋ ನಾಳೆಯೋ ದಾರಿಹೋಕರ ತಲೆಯ
ಮೇಲೆಯೋ ಜಾನುವಾರಗಳ ಮೈಮೇಲೆಯೋ
ಮುರಿದು ಬೀಳಲು ನಿಂತಿರುವ ಮುರುಕು ಗೋಡೆ
ಗಳು ಕಂಗೊಳಿಸುವವೋ, ಗ್ರಾಮಗಳಲ್ಲಿ ಅಲ್ಲಲ್ಲಿ
ಗುಂಡಿಹೊಡೆದು ನೀರು ನಿಂತು, ಕೊಳೆತು ದುರ್ವಾ
ಸನೆಯಿಂದ ಕೂಡಿ ಮಲೇರಿಯಾ, ವಿಷಮಶೀತ
ಜ್ವರಗಳಿಗೆ ಕಾರಣವಾಗಿರುವುದೋ, ಗ್ರಾಮದಲ್ಲಿ
ಐಕಮತ್ಯವಿಲ್ಲದೆ ಕಲಹಮಾಡುತ್ತಾ ಕೋರ್ಟು,
ಕಚೇರಿಗಳಿಗೆ ತಿರುಗುತ್ತ, ಲಾಯರುಗಳ ಭಂಟ
ರಾಗಿರುವರೋ, ಅಂದಿನವರೆಗೂ ಹಳ್ಳಿಯವಾಸವು
ನರಕವಾಸವೆಂದೇ ಹೇಳಬೇಕಾಗಿದೆ.

ಹಳ್ಳಿಗಳನ್ನುಉದ್ಧಾರಮಾಡಬೇಕೆಂಬುದೇ ಘನ
ಸರಕಾರದವರ ಸತತ ಪ್ರಯತ್ನವಾಗಿದೆ. ಆದ
ಕಾರಣದಿಂದಲೇ ಪ್ರತಿಗ್ರಾಮದಲ್ಲೂ ಗ್ರಾಮ
ಪಂಚಾಯಿತಿ ಎಂಬ ಸಭೆಯೊಂದನ್ನು ಏರ್ಪಡಿಸಿ
ಗ್ರಾಮದ ಕುಂದು ಕೊರತೆಗಳನ್ನು ತಾವೇ ವಿಚಾ
ರಿಸಿಕೊಂಡು ತೊಂದರೆಗೆ ತಕ್ಕ ನಿವಾರಣೋಪಾ
ಯಗಳನ್ನು ತಾವೇ ಕಲ್ಪಿಸಿಕೊಳ್ಳಲು ಏರ್ಪಾಡು
ಮಾಡಿದ್ದಾಗಿರುತ್ತದೆ. ಪಂಚಾಯಿತಿಯ ಕೆಲಸ
ಕಾರ್ಯಗಳು ಸಮರ್ಪಕವಾಗಿ ನಡೆಯಲು, ಪಂಚಾ
ಯಿತಿಯ ಸದಸ್ಯರಲ್ಲೊಬ್ಬರನ್ನು ಛೇರ್‌ಮ್ಯಾನ
ರಾಗಿ ನಿಯಮಿಸಲಾಗಿರುತ್ತದೆ. ಇವರಿಗೆ
ಗ್ರಾಮಾಭಿವೃದ್ಧಿ ಕಾರ್ಯಗಳನ್ನು ನಡೆಯಿಸಲು
ಹೆಚ್ಚಾದ ಅಧಿಕಾರವನ್ನು ಕೊಡಲಾಗಿರುತ್ತದೆ.
ಕಡ್ಡಾಯವಾಗಿ ತಿಂಗಳಿಗೊಂದು ಸಲವಾದರೂ
ಗ್ರಾಮದ ಕುಂದುಕೊರತೆಗಳನ್ನು ವಿಚಾರಿಸಿ ಸದ
ಸ್ಯರನ್ನೊಳಗೊಂಡು ಮೀಟಿಂಗ್‌ನಡೆಯಿಸಿ ಸಾಧಕ
ಬಾಧಕಗಳನ್ನು ವಿಚಾರಿಸಲೇ ಬೇಕೆಂಬ ನಿಯ
ಮವಿದೆ. ಅನೇಕ ಕಡೆಗಳಲ್ಲಿ ಇದು ಸಮರ್ಪಕ
ವಾಗಿ ನಡೆಯದೆ, ಛೇರ್‌ಮ್ಯಾನರು ತಮ್ಮ ತಮ್ಮ
ಕಾರ್ಯಗಳಲ್ಲಿಯೇ ಮಗ್ನರಾಗಿ ಮೇಲಧಿಕಾರಿಗ
ಳಾದ ಅಮಲ್ದಾರರು ಯಾ ಇನ್ನಿತರ ಮೇಲಾಫೀ
ಸರು ಬರುತ್ತಾರೆಂಬ ವಿಷಯ ತಿಳಿದಕೂಡ್ಲೆ
ಸಾಕಾದಷ್ಟು ಸದಸ್ಯರನ್ನು ಸೇರಿಸಿಕೊಂಡು
ಮೀಟಿಂಗನ್ನು ನಡೆಯಿಸಿ, ಮೇಲಾಫೀಸರು ಬಂದು
ತನಿಖೆ ಕ್ರಮ ನಡೆಯಿಸಿದಲ್ಲಿ ಒದಗಬಹುದಾದ
ಆಕ್ಷೇಪಣೆಗಳಿಗೆ ಅವಕಾಶವಿಲ್ಲದಂತೆ ಮಾಡಿ
ಕೊಳ್ಳುತ್ತಾರೆ. ಇದು ಸಮರ್ಪಕವಾದುದಲ್ಲ.

ತಾನು ಗ್ರಾಮದಲ್ಲೇ ಹುಟ್ಟಿ, ಗ್ರಾಮದಲ್ಲೇ
ಬೆಳೆದು ಗ್ರಾಮದ ಕುಂದುಕೊರತೆಗಳನ್ನುನೀಗಲು
ಒಬ್ಬ ಅಧಿಕಾರಿಯು ನಿಯಾಮಕವಾಗಿರಲು,
ಅವರು ತಮ್ಮ ಜವಾಬ್ದಾರಿಯನ್ನು ಅರಿತು
ಕೊಂಡು ತಾವು ವಾಸವಿರುವ ಗ್ರಾಮದ ಕುಂದು
ಕೊರತೆಗಳನ್ನು ನೀಗಿ ಒಳ್ಳೆಯ ರಸ್ತೆಗಳಿಂದಲೂ,
ಚರಂಡಿಗಳಿಂದಲೂ, ಊರಿನೊಳಗಿರುವ ಹಳ್ಳ
ಕೊಳ್ಳಗಳನ್ನು ಆದಷ್ಟು ತೀವ್ರವಾಗಿ ಮುಚ್ಚಿಸುತ್ತ
ಇದರಿಂದ ಒದಗಬಹುದಾದ ಆಪತ್ತಿನಿಂದ ಗ್ರಾ

ಮದವರನ್ನು ದೂರವಾಗಿರಿಸುತ್ತ, ತಿಪ್ಪೆ ಹಳ್ಳಗಳನ್ನು ಗ್ರಾಮಠಾಣಗಳಲ್ಲಿ ಹಾಕದಂತೆ, ಕಡ್ಡಾಯವಾಗಿ ನಿಲ್ಲಿಸಿ, ಊರಹೊರಗಡೆ ಪ್ರತ್ಯೇಕ ಸ್ಥಳಗಳಲ್ಲಿ ತಮ್ಮ ತಮ್ಮ ಜಮೀನುಗಳ ಹತ್ತಿರ ಹಾಕುವಂತೆ ಏರ್ಪಡಿಸಬೇಕು. ಊರ ಒಳಗಡೆ ಬೆಳೆಯುವ ಪಾಪಾಸು ಕಳ್ಳಿ, ಲಂಟಾಣ ಇವುಗಳು ಗ್ರಾಮದ ಅಂದವನ್ನು ಕೆಡಿಸುವವಲ್ಲದೆ ಇಲಿ, ಹಾವುಗಳಿಗೆ ವಾಸಸ್ಥಾನಗಳಾಗುವುವು. ಗ್ರಾಮಗಳಲ್ಲಿ ಕಕ್ಕಸುಗಳ ಏರ್ಪಾಡು ಇಲ್ಲದ ಕಾರಣ ಗ್ರಾಮದ ಹೆಂಗಸರು ಮಕ್ಕಳು ಸರ್ವರೂ ಇಂಥಾ ಪೊದರುಗಳ ಮರೆಗಳಲ್ಲಿ ಮಲವಿಸರ್ಜನೆ ಮಾಡಿ ಅದರಿಂದ ಹೊರಡುವ ವಿಷಜನಕವಾದ ಗಾಳಿಯು ಊರಲ್ಲೆಲ್ಲಾ ವ್ಯಾಪಿಸಿ ಮನಸ್ಸಿನ ಉಲ್ಲಾಸವನ್ನು ತಪ್ಪಿಸಿ ಜುಗುಪ್ಸೆಯನ್ನುಂಟು ಮಾಡುತ್ತದೆ. ಅಲ್ಲದೆಇದರಿಂದ ಆಮಶಂಕೆ,ಕ್ಷಯ, ನಿಮೋನಿಯ, ಕೊಕ್ಕೆಹುಳದ ರೋಗ (Hook-worm diseases) ಮೊದಲಾದ ಖಾಯಿಲೆಗಳು ಅತಿ ಜಾಗ್ರತೆ ಒದಗುವುವು.

There are two statements in the writing which do not fit in with each other. In one place he says, "In these days when the youth of the country is being unsettled by the sologans of every political party that comes into being (obviously referring to the congress praty—Ed.), there is one organisation whose members are not prepared to sell their birth-right and stand by their principles even if it means going out into the wilderness for a time..." and in another he says "and as our fundamental principle is to own allegiance to Government properly constituted by law in ruling and guiding the affairs of this great country, we own our allegiance as members of the Boy Scouts' Association in India to the Congress Governments in the Provinces ruled by them just as willingly as we give our allegience to the other Governments which are at present functioning in different parts of India."

We wish that Mr. Hogg had made clear what he means by "birth right" and "principles" and clearly explained what these are without leaving them to be interpreted by individual readers as they like. The first sentence seems to postulate the rule that when a political party comes into being and begins to meddle with Scouting, our duty is to stand firm against it, while the next one implies that as soon as it takes charge of the reins of Government, we should immediately change our attitude to one of loyalty and obedience.

On the other hand, there are the independant Associations of Seva Samithi, Madras and Bombay and the Indian National Scout Association, whose influence and number is by no means negligible. The fact that there are seven big Provinces in which there are Congress Ministries and that the Congress Ministers discussed the question of Scouting at their last meeting and resolved to nationalise the movement clearly indicates on what lines Scouting will be moulded in those Provinces.

If they unanimously agree to delete the words "King Emperor" from the Promise then according to the postulate laid down by Mr. Hogg, the General Headquarters have nothing to say except to adopt the Promise so far as those Provinces are concerned. It would lead the General Headquarters to a dilemma.

We feel strongly that the prophecy of Mr. Wilson may come true in its entirety.

In this connection it is meet to remember another important portion of Mr. Wilson's report wherein he says,

> "As I have said more than once during the course of my tour, Lord Baden Powell cannot Nationalise Indian Scouting, although he has done more than any one else to indicate the way in which it can be done; I cannot Nationalise Indian Scouting. Scouting can only be Nationalised by Indian Scouters and Indian Scouts."

Those who are on the other side feel that they achieve this by the changes proposed.

At this stage we only wish to say that wiser counsels could have prevailed to bring about unity.

It is the law of nature "that old order changeth yielding place to new" and before a new order comes into being, there is to be disruption, and demolition paving the way to construction. We wonder whether the prophecy of Mr, Wilson is to be fulfilled in a most round-about way!

GREY BROTHER.

BOYS' SECTION
ಹುಡುಗರ ಪ್ರಕರಣ

ಪ್ರಾರ್ಥನೆಗಳು.

[ಶಿಕ್ಷಣ ಶಿಬಿರಗಳಲ್ಲಿಯೂ ಮತ್ತು ಇತರ ಶಿಬಿರಗಳಲ್ಲಿಯೂ ದಿನಚರಿಯ ಕಾರ್ಯಕ್ರಮದ ಕೊನೆಯಲ್ಲಿ ಆ ದಿನವನ್ನು ಸುಗಮುವನ್ನಾಗಿ ಮಾಡಿದುದಕ್ಕೂ ನಮಗೆ ಆಹಾರ, ಆರೋಗ್ಯ, ಆನಂದ ಮತ್ತು ಜ್ಞಾನ ಇವುಗಳನ್ನು ಕರುಣಿಸಿ ನಮ್ಮನ್ನು ಸುರಕ್ಷಿತವಾಗಿ ಕಾಪಾಡಿದುದಕ್ಕೂ ನಾವು ಲೋಕ ರಕ್ಷಕನಾದ ದೇವರ ಕಡೆಗೆ ನಮ್ಮ ಮನಸ್ಸು ಹರಿಯುವಂತೆ ಮಾಡುವುದರಿಂದ ದೇವರ ವಿಚಾರದಲ್ಲಿ ನಮ್ಮ ಕರ್ತವ್ಯವನ್ನು ಸ್ವಲ್ಪ ಮಟ್ಟಿಗಾದರೂ ಮಾಡಿದಂತಾಗುವುದೆಂದೂ ಮತ್ತು ಸ್ಕೌಟ್ ಕ್ರಮವನ್ನು ಕೇವಲ ವಸ್ತುಮಯ ಮತ್ತು ಅಭ್ಯಾಸಮಯ ಪ್ರಪಂಚದಿಂದ ಮೇಲಕ್ಕೆತ್ತಿ ಅದಕ್ಕೆ ಒಂದು ಅಧ್ಯಾತ್ಮಿಕ ದೃಷ್ಟಿಯನ್ನು ಕೊಡುವುದಕ್ಕೂ ಮತ್ತು ಆತ್ಮ ಶುದ್ಧತೆಯನ್ನು ಪಡೆಯುವುದಕ್ಕೂ ಸಹಾಯವಾಗುವುದೆಂದೂ ನನಗೆ ಸಂಪೂರ್ಣವಾದ ನಂಬುಗೆ. ಈ ವಿಚಾರದಲ್ಲಿ ಮನಃಪೂರ್ವಕವಾದ, ಹೃದಯದ ಅಂತರಾಳದಿಂದ ಹೊರಹೊಮ್ಮುವ, ದಿನಚರಿಗೆ ಅನ್ವಯಿಸುವ, ಪ್ರಾರ್ಥನೆಗಳು ಬಹಳ ಅವಶ್ಯಕವೆಂದು ನಾನು ನಂಬಿ, ಶಿಬಿರಗಳಲ್ಲಿ ದಿನಚರಿಯ ಅಂತ್ಯದಲ್ಲಿ ಶಿಬಿರಾಗ್ನಿಯು ಸಮಾಪ್ತಿಯಾಗುವುದಕ್ಕೆ ಮುಂಚೆ ಒಂದು ಪ್ರಾರ್ಥನೆಯನ್ನು ಬರೆದು ಓದುವುದು ನನ್ನ ಸಂಪ್ರದಾಯ. ಈಚೆಗೆ ಕೆಲವು ಶಿಬಿರವಾಸಿಗಳು ಈ ಪ್ರಾರ್ಥನೆಗಳಿಂದ ತಮ್ಮ ಮನಸ್ಸಿನಮೇಲೆ ಬಹಳ ಮಟ್ಟಿಗೆ ಸತ್ಪರಿಣಾಮವಾಗಿದೆಯೆಂದೂ ಮತ್ತು ತಮ್ಮ ದಿನಚರಿಯ ಅನುಷ್ಠಾನಕ್ಕೆ ಇವು ದೊರೆಯುವಂತೆ ಮಾಡಬೇಕೆಂದೂ ಅನೇಕರು ನನ್ನನ್ನು ಒತ್ತಾಯಪಡಿಸಿದುದರಿಂದ ಕಳೆದುಳಿದ ಕೆಲವನ್ನು ಈ ಸಂಚಿಕೆಯಲ್ಲಿ ಪ್ರಕಟವಾಗಲು ಕಳುಹಿಸಿದ್ದೇನೆ. ಇವು ಕೇವಲ ನನಗೆ ಸಂಬಂಧಪಡುವ ಮತ್ತು ನನ್ನ ಆಯಾ ದಿನದ ಮನಸ್ಸಿನ ಹಂಬಲಿಕೆಯನ್ನು ವ್ಯಕ್ತಪಡಿಸತಕ್ಕ ನನ್ನ ಸ್ವಂತ ಪ್ರಾರ್ಥನೆಗಳಾದುದರಿಂದ ಅವುಗಳನ್ನು ಬಯಲಿಗೆ ತರುವ ಆಲೋಚನೆಯು ಯಾವಾಗಲೂ ಇರಲಿಲ್ಲ. ಆದರೆ ಶಿಬಿರವಾಸಿಗಳಲ್ಲಿ ಕೆಲವರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಇವುಗಳನ್ನು ಹೊರಪಡಿಸಿದ್ದೇನೆ. ಇವುಗಳ ಮೇಲೆ ವಿಮರ್ಶೆ ಮತ್ತು ಇವುಗಳ ವಿಚಾರದಲ್ಲಿ ತರ್ಕ ಇವುಗಳಿಗೆ ಕಾರಣವಿಲ್ಲ. ಇನ್ನು ಕೆಲವನ್ನು ಮುಂದಿನ ಸಂಚಿಕೆಗಳಲ್ಲಿ ಓದಬಹುದು. ಇವುಗಳಿಂದ ಇತರರಿಗೆ ಉಪಯೋಗವಾಗುವುದಾದರೆ ನನ್ನ ಆನಂದಕ್ಕೆ ಮಿತಿಯಿಲ್ಲವೆಂದು ನನ್ನ ಭಾವನೆ.]

—ಸೇವಕ.

೧. ಜಗದಾದಿ ದೇವನೆಂದು ಜನರೆಲ್ಲರೂ ನಿನ್ನ ಕರೆಯುವರು. ಅಂತ್ಯ ದೇವನು ಬೇರೊಬ್ಬನುಂಟೆ? ಆದ್ಯಂತಗಳು ನೀನಾಗಿ ಮಧ್ಯದಲ್ಲಿ ತುಂಬಿ ಪರಿಪೂರ್ಣನಾಗಿರುವೆ.

ಜನರು ಆರಂಭದಲಿ ಕಣ್ಗೆ ಕಾಣುವ ದೇವನನು ಬೇಡಿದರು. ಕೆಲವರಿಗೆ ಕಾಣಿಸಿದೆ; ಉಳಿದವರು ನಿನ್ನನ್ನಿನ್ನೂ ಗುಡಿ ಮಠಗಳಲ್ಲಿ ತೀರ್ಥ ಕ್ಷೇತ್ರಗಳಲ್ಲಿ ಅರಸಿ ಕಾಣದೆ ಬೆಂದು ಬಳಲುತಲಿಹರು: ಆಮೇಲೆ ಕಿವಿಗೆ ಕಾಣುವ ದೇವನನು ಬಯಸಿದರು. ಗೀತ, ಪುರಾಣ, ಪುಣ್ಯ ಕಥೆಗಳಲಿ ನಿನ್ನನಾಲೈಸಿದರು. ಕೆಲವರಿಗೆ ನಿನ್ನ ಕೂಗು ಕೇಳಿಸಿತು. ಉಳಿದವರು ಕಿವಿದೆರೆದು ಇನ್ನೂ ಕೇಳುತಲಿಹರು. ಮುಂದೆ

ಜನರು ಬುದ್ಧಿಯಲಿ ನಿನ್ನ ಕೂಡಲೆಳಸಿದರು: ತರ್ಕ ವಿತರ್ಕಗಳು, ಶುಷ್ಕ ವೇದಾಂತಗಳು ಬೆಟ್ಟದೊಲು ಹಿರಿದಾಗಿ ಬೆಳೆದುಬಿದ್ದವು. ಸಿಕ್ಕಿದೆ ಕೆಲವರಿಗೆ; ಉಳಿದವರ ಕಂಠಶೋಷಣೆಯು ಈಗಲೂ ನಿಂತಿಲ್ಲ. ಕೊನೆಯಲ್ಲಿ ಬಂದವರು —ವಿಶ್ವಪ್ರೇಮಿಗಳು— ಕಾಣಬಯಸಿದರು ನಿನ್ನನೆಲ್ಲೆಡೆಯಲ್ಲಿ; ತಮ್ಮಲ್ಲಿ, ಪರರಲ್ಲಿ, ಸರ್ವ ಸೃಷ್ಟಿಯಲ್ಲಿ. ಕಣ್ದೆರೆಯ ತೆಗೆದರು; ಕಾಣಿಸಿದೆ ನೀನೆಲ್ಲೆಡೆಯಲ್ಲಿ—ಆತ್ಮಗೋಚರನು ನೀನು.

ಮರುಳುತನವೆಂತಹುದು! ಹುಡುಕಲೇನಿದು ನಿನ್ನ; ಬಗಲಲ್ಲಿ ಕಂದನನು ಪೊತ್ತು ಊರನರಸುವ ನಾರಿಯಂತೆ! ಮನದ ಭ್ರಾಂತಿಯನುಳಿದು ಕಣ್ದೆರೆದು ನೋಡಿದರೆ ಕಾಣಿಸುವೆ ನೀನೆಲ್ಲೆಲ್ಲಿ. ನೀನಲ್ಲದಲೆ ಬೇರೊಂದು ಕಾಣಿಸದು ತೆರೆಯೊರೆದ ಕಂಗಳಿಗೆ. ನಾವು ಆಡುವ ಆಟದಲಿ, ನಾವು ಊಡುವ ಊಟದಲಿ, ನಾವು ಮಾಡುವ ಪಾಠದಲಿ, ನಾವು ನೋಡುವ ನೋಟದಲಿ, ನಮ್ಮ ಬದಿಯಲ್ಲಿರುವ ಗೆಳೆಯನಲಿ, ನಮ್ಮೆದುರು ನಿಂದಿರುವ ಮರದಲ್ಲಿ, ಇಲ್ಲಿ ಜ್ವಲಿಸುವ ಶಿಬಿರಾಗ್ನಿಯಲಿ ನಿನ್ನ ಕಾಣಲುಬಹುದು. ಕಣ್ಣ ತಿರುಗಿಸಲೊಳಗೆ ತುಂಬಿ ಕಾಣುವೆ ನೀನು. ನಾನೆಂಬ ಅಹಂಕಾರವನು ಬಿಟ್ಟು, ನಟ್ಟ ಮನದಿಂದ ಬಿಟ್ಟ ಕಂಗಳಿಂದ ಕಟ್ಟು ಸಡಲಿಸಿ ನೋಡೆ ಎಲ್ಲೆಲ್ಲಿಯೂ ನೀನೆ.

ನಮ್ಮ ಕಣ್ಮುಂದಿರುವ ಹಿರಿಯ ತೆರೆಯನು ಹರಿದು ನಿನ್ನ ನೋಡುತೆ ಹಿಗ್ಗಿ ಹಿರಿದಾಗಿ ನಿನ್ನೊಳ್ಬೆರೆವ ದಾರಿಯನು ತೋರೆಮಗೆ. ಬೇರೊಂದು ಬಯಕೆಯನು ನಾವು ಬೇಡುವರಲ್ಲ. ಕರುಣಿಸೆಮ್ಮೊಳು ನೀನು, ಕರುಣಾಸಮುದ್ರ.

೨. ಧರ್ಮಸ್ವರೂಪ,

ಭವದ ಬಂಧನವ ಪರಿಹರಿಸೆಂದು ಜಗವೆಲ್ಲ ನಿನ್ನ ಬೇಡುವುದು; ಕಾಡುವುದು. ಕಾಡಲೊಲ್ಲೆವು ನಾವು. ಬೇಡಲೇಂಭಿಕ್ಷುಕರೆ? ಭವದೂರರು ನಾವು. ನಿನ್ನ ದಶಧರ್ಮಗಳ ನೆತ್ತಿಯಲಿ ಹೊತ್ತು ಮೆರೆವೆಮಗೆ ಭವದಸೋಂಕೆತ್ತಣದು. ನಿಷ್ಕಾಮ ಕರ್ಮದಲಿ ನಿಷ್ಕಪಟ ಹೃದಯದಲಿ ನಮ್ಮ ಮನ ಮುಟ್ಟಿ ಹೊರುವವರು ನಿನ್ನಾಣತಿಯ ನಾವು. ಕಜ್ಜವನು ಇಬ್ಭಾಗ ಮಾಡಿ ನಮಗರ್ಧವನು ಕೊಟ್ಟು ಉಳಿದರ್ಧವನು ಹೊತ್ತಿರುವೆ ನೀನು.

ನಿನ್ನ ದಶಧರ್ಮಗಳ ಶಿರದಲ್ಲಿ ತಳೆದು ಜಗಕೆಲ್ಲ ಮೆರೆಸುವುದು ನಮಗೆ: ನಾವೆಡವಿ ಮುಗ್ಗರಿಸಿ ನಿನ್ನ ಧರ್ಮಗಳು ನೆಲಕುರುಳಿ ಮಣ್ಣುಗೂಡುವ ವೇಳೆ ನಡುದಾರಿಯಲಿ ಬಂದು ಹಿಡಿದವುಗಳನ್ನೆತ್ತಿ ನಗುತ ಸಂತಸದಿಂದ ಮತ್ತವನು ನೆತ್ತಿಯಲಿ ಹೊರಿಸುವುದು ನಿನಗೆ. ನಿನ್ನ ಕಾರ್ಯವನು ನೀಗೈವೆ; ನಮ್ಮ ಕಾರ್ಯವನು ನಾವೆಸಗಲೆಮಗೆ ದೃಢಮತಿಯ ಕೊಡು.

ಇದು ನಮ್ಮ ಬಯಕೆ; ಇದು ನಿನ್ನ ಲೀಲೆ.

೩. ವಿಶ್ವಂಭರ.

ನಿನ್ನ ಜಾಣ್ಮೆಯಲ್ಲಿ ದೃಢವಾದ ನಂಬುಗೆಯಿಟ್ಟು ನಾವಿಲ್ಲಿಗೆ ಬಂದೆವು. ದಿನಗಳು ಕಳೆದಂತೆಲ್ಲ ದೈಹಿಕ ಮಾನಸಿಕ ಕ್ಲೇಶಗಳಲ್ಲದೆ ಮತ್ತೇನನ್ನೂ ಕಾಣಲಿಲ್ಲ. ಶಿಬಿರವು ಸುಖದ ಸಂಸಾರವೆಂದು ಬಲ್ಲವರು ಹೇಳಿಹರು. ಅದರ ನೆಲೆಯು ನಮಗಿದುವರೆಗೂ ಸಿಕ್ಕಲಿಲ್ಲ. ಉಳಿದಿರುವ ದಿನಗಳು ಹೆಚ್ಚಿಲ್ಲ. ನಿನ್ನನ್ನು ನೆಚ್ಚಿದ ನಮಗೆ ಅಂಧಕಾರವನು ತಂದೊಡ್ಡಿರುವೆ ನಮ್ಮ ಮುಖದಲ್ಲಿ ನಗುವಿನ ಹೊಳೆಯನ್ನು ಬತ್ತಿಸಿರುವೆ. ನಮ್ಮ ಸರ್ವಾಪರಾಧಗಳನ್ನು ಕ್ಷಮಿಸಿ ಸುಖವ ಪರಮಾವಧಿಯು ಕಾಣುವ ಮನವನ್ನು ನಮ್ಮೊಳನುಗೊಳಿಸು. ನಿನ್ನಿಚ್ಛೆಗೆ ಮೀರಿ ನಡೆಯಲಾರೆವು ನಾವು. ನಮ್ಮ ಬಯಕೆಯ ನಿನಗೆ ತಿಳಿಸುವ ಧೈರ್ಯವನು ನಮಗೆ ಕೃಪೆಮಾಡು.

ಮರಿಗಳು.

(ಮುಂದುವರಿದದ್ದು)

ಅಧ್ಯಾಯ ೧೫.

ತಾರೆಯ ಕೆಲಸ ಮತ್ತು ಪದಕಗಳು.

ಕೆಲವು ಪುಟಗಳ ಹಿಂದೆ ಆಟದಲ್ಲಿ ಎಷ್ಟು ಮಟ್ಟಿಗೆ ನಡತೆಯ ಶಿಕ್ಷಣದ ಗುಣವಿದೆಯೋ ಕೆಲಸದಲ್ಲಿಯೂ ಅಷ್ಟೇ ಮಟ್ಟಿನ ಗುಣವಿದೆಯೆಂದು ಹೇಳಿದ್ದೇನೆ. ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡಿಸಿದರೆ ಮಾತ್ರ ಈ ಮಾತು ನಿಜವಾಗುತ್ತದೆ. ಕೆಲಸದಲ್ಲಿ ಅವರಿಗೆ ಅಭಿರುಚಿಯುಂಟಾಗುವಂತೆ ಮಾಡುವುದೇ ದೊಡ್ಡ ಕೆಲಸ. ಈ ವಿಚಾರದಲ್ಲಿ ನಿಮ್ಮ ಪ್ರಯತ್ನವು ಸಫಲವಾದರೆ ಹುಡುಗರಿಗೆ ಕೆಲಸಮಾಡಬೇಕೆಂತ ಬಲಾತ್ಕಾರ ಮಾಡಬೇಕಾದುದಿಲ್ಲ. ನಾವು ತೊಡಗತಕ್ಕ ಪ್ರತಿಯೊಂದು ಕೆಲಸಕ್ಕೂ ತಕ್ಕ ಮಾರ್ಗಗಳು ಮತ್ತು ಸಾಧನಗಳು ಬೇರೆ ಬೇರೆಯಾಗಿರುತ್ತವೆಯಾದರೂ ಹಿಂಡಿನ ತತ್ವಗಳು ಇತರ ಕಾರ್ಯಕ್ರಮಗಳಿಗನ್ವಯಿಸುವಂತೆ ಇವುಗಳಿಗೂ ಅನ್ವಯಿಸುತ್ತವೆ. ಹುಡುಗನಿಗಿರುವ ಅದ್ಭುತಕಲ್ಪನೆಯ ದಾಹ, ಕಥೆ ಮತ್ತು ಕಥಾಭಿನಯಗಳಲ್ಲಿ ಅವನಿಗಿರುವ ಪ್ರೀತಿ, ಆಟಗಳ ಮೇಲೆ ಅವನಿಗಿರುವ ಉತ್ಕಟವಾದ ಪ್ರೇಮ ಮತ್ತು ಸ್ವಭಾವವಾದ ಉದ್ಯೋಗಪರತೆ ಇವುಗಳನ್ನು ನೆನಪಿನಲ್ಲಿಟ್ಟುಕೊಂಡು ನೀವು ಅವನಿಗೆ ಜ್ಞಾನವನ್ನುಂಟುಮಾಡುವ ವಿಧಾನವನ್ನು ಅದಕ್ಕೆ ಸರಿಯಾಗಿ ಹೊಂದುವಂತೆ ಮಾಡಿಕೊಳ್ಳಿ. ಸ್ವಲ್ಪ ಶ್ರಮವನ್ನು ತೆಗೆದುಕೊಂಡರೆ ಬಹಳ ಕೆಲಸಗಳು ಕಥೆಗಳು, ಅಭಿನಯ, ಆಟಗಳು ಮತ್ತು ಸ್ಪರ್ಧೆಗಳ ಮೂಲಕವೇ ನಡೆಯುವಂತೆ ಮಾಡಬಹುದು. ಇವುಗಳ ಮೂಲಕ ಅವನ ಆಸಕ್ತಿಯು ಜಾಗ್ರತವಾಗಿ ಅವನು ನಿಸ್ಸಾರವಾದ ಮತ್ತು ಕಷ್ಟವಾದ ಕೆಲಸಗಳನ್ನೂ ಮಾಡುವುದಕ್ಕೆ ಸಿದ್ಧನಾಗುವಂತೆ ಮಾಡಬಹುದು. ಬಹಳಕಾಲ ಅವನು ಕೆಲಸಕ್ಕೆ ಗಮನಕೊಡುವಂತೆ ಮಾಡಬೇಡಿ. ಸಾಧಾರಣ ಕೂಟಗಳಲ್ಲಿ ಇಂಥಾ ವಿಚಾರಗಳಿಗೆ ಹತ್ತು ನಿಮಿಷಗಳ ಕಾಲವನ್ನು ಮಾತ್ರ ಉಪಯೋಗಿಸಿಕೊಳ್ಳಬೇಕು. ಕೆಲಸದ ಜೊತೆಗೆ ಸ್ವಲ್ಪ ಅದ್ಭುತ ಕಲ್ಪನೆಯನ್ನು (ಅದು ಎಷ್ಟು ಸ್ವಲ್ಪವಾದರೂ ಆಗಲಿ) ಬೆರಸಿದರೆ ಉತ್ತಮ. ಇದಕ್ಕೆ ಜಾಗರೂಕತೆ ಬಹಳ ಬೇಕು ಈ ವಿಷಯದಲ್ಲಿ ಸಾಮಾನ್ಯವಿಧಿಗಳನ್ನುಮಾಡುವುದಕ್ಕಾಗುವುದಿಲ್ಲ. ಉದಾಹರಣೆಗಾಗಿ, ಉತ್ತರ ಮುಖಿಯ ದಿಕ್ಕುಗಳನ್ನು ಹೇಳಿಕೊಡಬೇಕಾದರೆ ಆಸಕ್ತಿಯನ್ನುಂಟುಮಾಡುವಂತಹ "ನಿಧಿಯ ಬೇಟೆ" ಗಳ (Treasure Hunts) ಮೂಲಕ ಹೇಳಿಕೊಡಬಹುದು. ಆಕೇಲನೊಂದಿಗೆ ಮಾತನಾಡುವುದಕ್ಕಾಗಿ ಉಪಯೋಗಿಸುವುದರ ಮೂಲಕ ಸೆಮಾಫೋರ್ ಸಂಕೇತವನ್ನು ಹೇಳಿಕೊಡಬಹುದು. ಗಂಟು ಹಾಕುವುದನು ಹೇಳಿಕೊಡುವಾಗ ಒಡೆದ ಹಡಗಿನಿಂದ ಪಾರಾಗಿ ಬರುವುದೋ ಅಥವಾ ಬೆಂಕಿಬಿದ್ದ ಮನೆಯಿಂದ ಈಚೆಗೆ ಬರುವುದೋ ಇಂಥಾ ಯಾವುದಾದರೂ ಕಲ್ಪನೆಗಳ ಮೂಲಕ ಕಲಿಸಬಹುದು.

ಹಿಂಡಿನಲ್ಲಿ ಮಾಡುವ ಕೆಲಸಗಳು ಬಹಳ ಮಟ್ಟಿಗೆ ಒಂದು ಮತ್ತು ಎರಡನೆಯ ತಾರೆಗಳಿಗೆ ಸೇರಿದವುಗಳಾಗಿರುತ್ತವೆ. ಅವುಗಳ ವಿಚಿತ್ರ

ವಾದ ಪರೀಕ್ಷೆಗಳಲ್ಲಿ ಯಾವ ಕ್ರಮವೂ ಇರುವಂತೆ
ಕಣ್ಣಿಗೆ ಕಾಣುವುದಿಲ್ಲ. ಆದರೆ ಹುಡುಗನ ಸರ್ವ
ತೋಮುಖವಾದ ಶಿಕ್ಷಣದ ಅಭಿವೃದ್ಧಿಗಾಗಿಯೂ
ಮತ್ತು ಅವನ ಅಭಿರುಚಿಯನ್ನು ಬಂಧಿಸಿ ಹಿಡಿ
ಯುವುದಕ್ಕಾಗಿಯೂ ನಿಜವಾಗಿಯೂ ಬಹಳ
ಜಾಗರೂಕತೆಯಿಂದ ಆರಿಸಲ್ಪಟ್ಟಿವೆ. ಪ್ರತಿ
ಯೊಬ್ಬ ಆಕೇಲನೂ ಈ ಎರಡು ರೀತಿಗಳಲ್ಲಿಯೂ
ಇವು ಫಲಕಾರಿಗಳೆಂದು ಹೇಳುವುದರಲ್ಲಿ ಸಂದೇಹ
ವಿಲ್ಲ. ಈ ಕೆಲಸಗಳಿಂದ ಪ್ರತಿಯೊಬ್ಬ ಮರಿ
ಯೂ ಸಂತೋಷಪಡುತ್ತಾನೆ. ಅವನು ಮುಖಂ
ಡನಾದ ಮೇಲೆ ಅವುಗಳನ್ನು ಇತರರಿಗೆ ಹೇಳಿ
ಕೊಡುವುದರ ಮೂಲಕ ಸಂತೋಷಪಡುತ್ತಾನೆ.
ಇದರ ಜೊತೆಗೆ ಅವು ಅವನಿಗೆ ನಾನಾ ಮುಖ
ವಾದ ಶಿಕ್ಷಣವನ್ನು ಕೊಡುತ್ತವೆ. ಬಾವುಟದ
(ಧ್ವಜದ) ವಿಚಾರದ ಪರೀಕ್ಷೆಯು ರಾಜನಲ್ಲಿಯೂ
ದೇಶದಲ್ಲಿಯೂ ಭಕ್ತಿವಿಶ್ವಾಸಗಳ ತಳಹದಿಯನ್ನು
ಹಾಕುತ್ತದೆ. ಗಂಟುಗಳು ಕೈಕೆಲಸದ ಕಡೆಗೆ
ಪ್ರಥಮ ಸೋಪಾನವಾಗಿವೆ. ಹಗ್ಗದ
ಹಾರು (skipping) ಕಪ್ಪೆನೆಗೆತ (leap frog)
ಕುಂಟುವುದು ಮತ್ತು ಲಾಗ ಹೊಡೆಯುವುದು
ಇವುಗಳು ಅವನ ಶರೀರಕ್ಕೆ ಬಲವನ್ನೂ ವೃದ್ಧಿ
ಯನ್ನೂ ಕೊಡುತ್ತವೆ. ಪುಸ್ತುಕಗಳನ್ನು ಹೊರ
ವುದು ಹಲಗೆಯ ಮೇಲೆ ನಡೆಯುವುದು ಇವುಗಳು
ವಾಸರ ಹಿಡಿಯುವುದು, ಆತ್ಮಸಂಯಮ, ಗಮನ
ವನ್ನು ಒಂದೇ ವಿಷಯದಲ್ಲಿ ನಿಲ್ಲಿಸುವುದು ಇವುಗ
ಳನ್ನು ಕಲಿಸುತ್ತವೆ. ಆಕೃತಿಗಳ ನಿರ್ಮಾಣವು
ಹುಡುಗನನ್ನು ಕೈಗಾರಿಕೆಗಳ ಹಾದಿಯಲ್ಲಿ
ಮುಂದಕ್ಕೆಳೆದುಕೊಂಡು ಹೋಗುತ್ತದೆ. ಪಾದ
ರಕ್ಷೆಗಳನ್ನು ಶುಭ್ರಮಾಡುವುದು. ಬೆಂಕಿಹತ್ತಿಸಿ
ಉರಿಮಾಡುವುದು, ಬಟ್ಟೆಗಳನ್ನು ಮಡಿಸುವುದು
ಮತ್ತು ವರ್ತಮಾನಗಳನ್ನು ತೆಗೆದುಕೊಂಡು
ಹೋಗುವುದು ಇವುಗಳು ಮನೆಯಲ್ಲಿ ಉಪಯೋ
ಗಕಾರಿಯಾಗಲು ಸಹಾಯ ಮಾಡುತ್ತವೆ.

ಈ ಮುದ್ದಾದ ಚಿಕ್ಕಚಿಕ್ಕ ಪರೀಕ್ಷೆಗಳನ್ನು
ಬಹಳ ಮುಖ್ಯವಾದವುಗಳನ್ನಾಗಿ ನಾವು ಭಾವಿಸ
ಬೇಕು. ಇವುಗಳ ವಿಚಾರದಲ್ಲಿ ನಾವು ಕೇವಲ
ಕನಿಷ್ಠಾಂಶ (minimum) ದಿಂದಲೇ ತೃಪ್ತ
ರಾಗಬಾರದು. ಇವುಗಳ ಮೂಲಕ ದೊಡ್ಡ
ದೊಡ್ಡ ವಿಚಾರಗಳು ಬೆಳೆಯುವಂತೆಮಾಡಬೇಕು.
ಲಾಗಹೊಡೆಯುವುದು ಮುಂದೆ ದೊಡ್ಡ ದೊಡ್ಡ
ಸಾಧನೆಗಳಿಗೆ ಮೂಲವಾಗಬೇಕು. ಗಂಟು
ಹಾಕುವ ವಿಚಾರಗಳು ಬರುವ ಕಥೆಗಳು ಮತ್ತು
ಅಭಿನಯಗಳು ಇವುಗಳನ್ನು ಏರ್ಪಡಿಸಿಕೊಳ್ಳ
ಬೇಕು. ಉತ್ತರ ಮುಖಿಯ ದಿಕ್ಕನ್ನು ತಿಳಿಯು
ವಾಗ ಬೇರೆಬೇರೆ ಹಾದಿಗಳನ್ನು ಗುರುತು ಹಿಡಿ
ದುಹೋಗುವುದಕ್ಕೆ ಒಂದು ಮಧ್ಯಾಹ್ನವನ್ನೆಲ್ಲಾ
ಉಗಯೋಗಿಸಬೇಕು. "ಹಗ್ಗದ ಹಾರು"
(skipping) ಎಂಬುವುದರಲ್ಲಿ ಎಷ್ಟೆಷ್ಟು ರೀತಿ
ಗಳಿವೆಯೋ ಅವೆಲ್ಲವನ್ನೂ ಮಾಡಿಸಬೇಕು. ಆಕೃ
ತಿಗಳನ್ನು ಮಾಡಿಸುವಾಗ ಕಾಡಿನಲ್ಲಿ ಒಂದು
ಷಟ್ಕದ ಗವಿಯನ್ನಾಗಲಿ ಅಥವಾ ರಟ್ಟುಗಳಿಂದ
ಒಂದು ಹಳ್ಳಿಯನ್ನಾಗಲಿ ಮಾಡಿಸಬಹುದು. ಈ
ತಾರೆಯ ಪರೀಕ್ಷೆಗಳ ಸಂಬಂಧದಲ್ಲಿ ಮಾಡಿಸ
ಬಹುದಾದ ಕೆಲಸಗಳಿಗೆ ಮಿತಿಯೇ ಇರುವುದಿಲ್ಲ.
ಇವು ಅವರ ಮನಸ್ಸಿಗೆ ಉಲ್ಲಾಸವನ್ನುಂಟು
ಮಾಡುವುದಲ್ಲದೆ ಅವರಿಗೆ ಒಳ್ಳೆಯ ಶಿಕ್ಷಣವನ್ನು
ಸಹ ಕೊಡುತ್ತವೆ. ಮರಿಗಳಿಗೆ ಇದರಿಂದ ಪದ
ಕಗಳಿಗಾಗಿ ಬೇಟೆಯಾಡುವ ಭಾವನೆಯು ತಪ್ಪು
ವುದು. ಅಲ್ಲದೆ ನಾವು ಎರಡನೆಯ ತಾರೆಯ
ಪರೀಕ್ಷೆಗಳ ವಿಚಾರದಲ್ಲಿ ನಮ್ಮ ಎಲ್ಲೆಯನ್ನು
ಮೀರಿ ಸ್ಕ್ಯಾಟ್ ಕ್ರಮಕ್ಕೆ ಸೇರಿದ ವಿಚಾರಗಳಿಗೆ
ಹೋಗದಂತೆ ಮಾಡುವುವು.

ಈ ತಾರೆಯ ಪರೀಕ್ಷಾಂಶಗಳು ಸಾಮಾನ್ಯವಾಗಿ ಹಿಂಡಿನ ಕೂಟದಲ್ಲಿ ಮುಖಂಡರಿಂದಾಗಲಿ, ಶಿಕ್ಷಕ (instructors) ರಿಂದಾಗಲಿ ಕಲಿಸಲ್ಪಡುತ್ತವೆ. ಪುಸ್ತಕಗಳನ್ನು ತಲೆಯಮೇಲೆ ಹೊರುವುದು, ಹಲಗೆಯ ಮೇಲೆ ನಡೆಯುವುದು ಇಂಥಾ ವಿಚಾರಗಳನ್ನು ಆಕೇಲನು ಮನಸ್ಸಿಗೆ ಹೆಚ್ಚಾಗಿ ತಂದುಕೊಳ್ಳಬೇಕಾದ ಅವಶ್ಯಕತೆಯಿಲ್ಲ. ಈ ವಿಚಾರಗಳಲ್ಲಿ ಹುಡುಗರಿಗೆ ಅಭಿರುಚಿಯನ್ನು ಹುಟ್ಟಿಸುವುದಕ್ಕಾಗಿ ಪ್ರಾರಂಭದಲ್ಲಿ ಒಂದೆರಡು ಮಾತುಗಳನ್ನು ಹೇಳಿದರೆ ಸಾಕು. ಧ್ವಜದ ವಿಚಾರದಲ್ಲಿ ಅದಕ್ಕೆ ಸಂಬಂಧಪಟ್ಟ ಕಥೆಗಳನ್ನು ಹೇಳಬಹುದು. ಮತ್ತು ಗಂಟುಗಳನ್ನು ಹಾಕುವುದರಲ್ಲಿ ಗಿಲ್‌ವೆಲ್ ಶಿಬಿರದಿಂದ ಪ್ರಕಟವಾಗಿರುವ ಕಥೆಗಳನ್ನು ಹೇಳಬಹುದು. ಆದರೆ ಈ ವಿಚಾರಗಳಲ್ಲೆಲ್ಲಾ ಒರಟು ಕೆತ್ತನೆ ಕೆಲಸವನ್ನೂ ಮೇಲ್ವಿಚಾರಣೆ ಕೆಲಸವನ್ನೂ ಮುಖಂಡರಿಗೇ ಬಿಡಬೇಕು. ಗೊತ್ತಾದ ಕಾಲವು ಮುಗಿದ ಮೇಲೆ ಹಿಂಡನ್ನು ಒಟ್ಟಿಗೆ ಕರೆದು ಮಾಡಿದ ಕೆಲಸದಲ್ಲಿ ಒಂದು ಸ್ಪರ್ಧೆಯನ್ನಿಡಬಹುದು. ಇವುಗಳಲ್ಲಿ ಕೆಲವು ಎಂದರೆ "ಹಗ್ಗದ ಹಾರು," ಕುಂಟುವುದು, ವರ್ತಮಾನ ತೆಗೆದುಕೊಂಡು ಹೋಗುವುದು, ಇವುಗಳನ್ನು ಮಕ್ಕಳಿಗೆ ಯಾವಾಗಲೂ ರುಚಿಕರವಾದ ಮಜಲಿನ ಆಟಗಳ ಮೂಲಕ ನಡೆಸಬಹುದು. ತಾರೆಯಕೆಲಸಗಳನ್ನು ಮುಖಂಡರಿಗೇ ಬಿಡುವ ವಿಚಾರದಲ್ಲಿ ಸಾಮಾನ್ಯ ವಿಧಿಗೆ ಒಂದು ಪ್ರತಿಷೇಧ (exception) ವುಂಟು. ಎರಡನೆಯ ತಾರೆಯ ಪರೀಕ್ಷಾಂಶಗಳಾದ ಅಂಗಸಾಧನೆಗಳನ್ನೂ ಮತ್ತು ಇತರ ವ್ಯಾಯಾಮಗಳನ್ನೂ ಪ್ರತಿಯೊಬ್ಬರಿಗೂ ಬೇರೆ ಬೇರೆಯಾಗಿ ಆಕೇಲನೇ ನಡೆಸಬೇಕು. ಇವುಗಳನ್ನು ಸರಿಯಾದ ರೀತಿಯಲ್ಲಿ ಕಲಿಸದೆಹೋದರೂ ಅಥವಾ ಕವಾತು ಮಾಡುವ ರೀತಿಯಲ್ಲಿ ಬಹಳ ಮಂದಿಗೆ ಒಟ್ಟಿಗೆ ಹೇಳಿಕೊಟ್ಟರೂ ಅವು ಮರಿಯ ಶರೀರಕ್ಕೆ ಹಾನಿಯನ್ನುಂಟುಮಾಡಬಹುದು.

ಹುಡುಗರನ್ನು ಈ ಅಂಶಗಳಲ್ಲಿ ತೇರ್ಗಡೆ ಹೊಂದಿಸುವುದರಲ್ಲಿ ಕೆಲವು ಸಾಮಾನ್ಯ ವಿಧಿಗಳನ್ನನುಸರಿಸಬೇಕು. (೧) ಫಲಿತಾಂಶಕ್ಕಿಂತಲೂ ಪ್ರಯತ್ನಕ್ಕೆ ಹೆಚ್ಚು ಬೆಲೆಯನ್ನು ಕೊಡಬೇಕು ಮತ್ತು (೨) ಈ ಪರೀಕ್ಷಾಂಶಗಳನ್ನು ಕೆಲಸಗಳಲ್ಲಿ ಉಪಯೋಗಿಸುವುದು ಚೆನ್ನಾಗಿ ತಿಳಿದಿರಬೇಕು. ಉದಾಹರಣೆಗಾಗಿ ದಿನಚರಿಯ ಕ್ರಮದಲ್ಲಿ ಯಾವ ಯಾವ ಗಂಟುಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಹಾಕಬೇಕೆಂಬುದು ಗೊತ್ತಿಲ್ಲದ ಪಕ್ಷದಲ್ಲಿ ಗಂಟುಗಳನ್ನು ಕಲಿತು ಏನೂ ಪ್ರಯೋಜನವಿಲ್ಲ. ಹೀಗೆ ತಿಳುವಳಿಕೆಯನ್ನು ಹೊಂದದಿರುವ ಮರಿಗಳ ಸಂಖ್ಯೆಯನ್ನು ನೋಡಿದರೆ ನಮಗೇ ಆಶ್ಚರ್ಯವಾಗುತ್ತದೆ. ಅಲ್ಲದೆ ಎರಡನೆಯ ತಾರೆಯ ಪರೀಕ್ಷಾಂಶಗಳಲ್ಲಿ ಅಂದರೆ ಪಾದರಕ್ಷೆಗಳನ್ನು (shoes) ಶುಭ್ರ ಮಾಡುವುದು, ಬಟ್ಟೆಗಳನ್ನು ಸರಿಯಾಗಿ ಮಡಿಸುವುದು ಮುಂತಾದವುಗಳಲ್ಲಿ ತಂದೆ ತಾಯಿಗಳ ಸಹಾಯವನ್ನು ಪಡೆಯಬೇಕು. ಮತ್ತು ಮನೆಯಲ್ಲಿ ಈ ಕೆಲಸಗಳನ್ನು ಆಚರಣೆಗೆ ತರುವುದು ತೇರ್ಗಡೆ ಹೊಂದುವುದರಲ್ಲಿ ಒಂದು ಮುಖ್ಯಾಂಶವಾಗಿರಬೇಕು.

ಪ್ರವೀಣತೆಯ ಪದಕಗಳಿಗೂ ಮತ್ತು ತಾರೆಯ ಪರೀಕ್ಷಾಂಶಗಳಿಗೂ ಬಹಳ ವ್ಯತ್ಯಾಸಗಳಿವೆ. ಪ್ರವೀಣತೆಯ ಪದಕಗಳು ಬೇರೆ ವರ್ಗಕ್ಕೆ ಸೇರಿದವುಗಳು. ಅವು ಹಿಂಡಿನ ಸಾಮಾನ್ಯ ಕಾರ್ಯಕ್ರಮದಲ್ಲಿ ಸೇರಬಾರದು. ಅವುಗಳಿಗಾಗಿ ಬೇರೆ ಕೂಟಗಳನ್ನೇ ಏರ್ಪಡಿಸಿಕೊಳ್ಳಬೇಕು. ಸಾಮಾನ್ಯ ಕೂಟಗಳಲ್ಲಿ ಅವುಗಳನ್ನು ಸೇರಿಸಿ ಅವುಗಳ ಕಡೆಗೆ ಗಮನ ಕೊಟ್ಟರೆ ಹಿಂಡಿನ ಕೆಲಸಕ್ಕೆ ತೊಂದರೆ

ಯುಂಟಾಗಿ ಸಂಕೇತ (Signalling) ಪ್ರಥಮ ಚಿಕಿತ್ಸೆ ಮುಂತಾದ ಕೆಲಸಗಳೇ ಹೆಚ್ಚಾಗುತ್ತದೆ. ಹೀಗೆ ಅವಧಾರಣೆ (Emphasis) ಯನ್ನು ಬದಲಾಯಿಸುವುದರಿಂದ ನಾವು ಹಿಂಡಿನ ಕೆಲಸದ ಎಲ್ಲೆಯನ್ನು ಮೀರಿ ಸ್ಕೌಟ್ ಕ್ರಮಕ್ಕೆ ಹೋಗಿ ಬಿಡುತ್ತೇವೆ. ಚೀಫ್ ಸ್ಕೌಟ್‌ರವರು ಮೊದಲು ಪ್ರಕಟಪಡಿಸಿದ ಹಿಂಡಿನ ಶಿಕ್ಷಣ ಕ್ರಮದಲ್ಲಿ ಈ ಪದಕಗಳಿರಲೇ ಇಲ್ಲವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಂಡಿದ್ದರೆ ಈ ಪದಕಗಳಿಗೆ ಉಚಿತವಾದ ಸ್ಥಾನವನ್ನು ನಾವು ಕೊಡುವುದಕ್ಕೆ ತುಂಬಾ ಸಹಾಯವಾಗುತ್ತದೆ.

ಹೀಗೆ ಹೇಳಿದರೆ ಪದಕಗಳನ್ನು ಹಿಂಡಿನ ಕ್ರಮದಿಂದ ಕಿತ್ತು ಹಾಕಲೇಬೇಕೆಂದು ವಾದ ಮಾಡುವ ಕೆಲವರಿಗೆ ಇದು ಸಂಪೂರ್ಣವಾಗಿ ಸಾಕ್ಷೀಭೂತವಾದಂತೆ ತಿಳಿಯಬಹುದು. ಈ ಸಮಸ್ಯೆಯು ಬಹಳ ಕಾಲದಿಂದಲೂ ಇದ್ದೇ ಇದೆ. ಅಲ್ಲದೆ ಅನೇಕ ಸಮ್ಮೇಳನಗಳಲ್ಲಿಯೂ ಈ ವಿಚಾರವಾದ ಚರ್ಚೆಗಳು ನಡೆದಿವೆ. ಅವುಗಳಿರಲೇಬೇಕೆಂತ ಈಗ ನಿರ್ಧಾರವಾಗಿದೆ. ಸರಿಯಾದ ರೀತಿಯಲ್ಲುಪಯೋಗಿಸಿದರೆ ಅವು ಎರಡು ತಾರೆಯ ಮರಿಯ ಆಸಕ್ತಿಯು ಕುಂದದಂತೆ ಕಾಪಾಡುವುದಕ್ಕೂ ಮತ್ತು ವಿಶೇಷ ಶಕ್ತಿಗಳಿರುವ ಹುಡುಗರಿಗೆ ಒಂದು ಕೆಲಸವನ್ನು ಕಲ್ಪಿಸುವುದಕ್ಕೂ ಸಹಾಯ ಮಾಡುತ್ತವೆ. ಅಲ್ಲದೆ ನೀತಿ ಶಿಕ್ಷಣದ ವಿಚಾರದಲ್ಲಿ ಅವುಗಳಿಗಿರುವ ಬೆಲೆಯಂತೂ ತಿಳಿದೇ ಇದೆ. ಈ ಪದಕಗಳು ಇರುವುದಕ್ಕೇ ಬಂದಿವೆ; ಹೋಗುವುದಕ್ಕೆ ಬಂದಿಲ್ಲ. ಚೀಫ್ ಸ್ಕೌಟ್‌ರವರು ಸಾಮಾನ್ಯವಾಗಿ ತಪ್ಪಾಗಿ ಆಲೋಚಿಸುವುದಿಲ್ಲ. ಅವರು ಈಚೆಗೆ ಅವುಗಳನ್ನನುಮೋದಿಸಿರುವುದು • ಸರಿಯಾಗಿದೆಯೆಂದು ನಮ್ಮ ಅನುಭವದಿಂದಲೇ ಗೊತ್ತಾಗುತ್ತದೆ. ಅಲ್ಲದೆ ಬಹಳ ಮಂದಿ ಆಕೇಲರು ಈಗೀಗ ಇವುಗಳ ವಿಚಾರದಲ್ಲಿ ಸರಿಯಾದ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಪ್ರವೀಣತೆಯ ಪದಕಗಳನ್ನು ಮೈಗೆಲ್ಲಾ ತಗಲು ಹಾಕಿಕೊಂಡಿರುವ ಹಿಂಡುಗಳನ್ನು ಕಾಣುವುದು ಈಗ ಬಹಳ ಅಪೂರ್ವವಾಗಿದೆ.

ಹಿಂಡಿನಲ್ಲಿ ಈ ಪದಕಗಳಿಂದ ಲಾಭವನ್ನು ಹೊಂದುವ ಮರಿಗಳು ಕೆಲವರಿದ್ದೇ ಇರುತ್ತಾರೆ. ಅವರು ಎರಡನೆಯ ತಾರೆಯ ಕೆಲಸಗಳನ್ನು ಸಮರ್ಪಕವಾಗಿ ಮಾಡಿರುವ ಪಕ್ಷದಲ್ಲಿ ಪದಕಗಳ ವಿಚಾರದಲ್ಲಿ ಅವರಿಗೆ ಬಹಳ ಮಟ್ಟಿಗೆ ತಿಳುವಳಿಕೆಯಿದ್ದೇ ಇರುತ್ತದೆ. ಮೊದಲಿನಲ್ಲಿ ಅವರಿಗೆ ಪದಕವನ್ನು ಸಂಪಾದಿಸುವ ಆಶೆಯನ್ನೇ ಹುಟ್ಟಿಸದಂತೆ ಅದಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಮಾಡಿಸಬೇಕು. ಕೈಕೆಲಸ ಮತ್ತು ಪ್ರಕೃತಿ ವಿಮರ್ಶೆ ಇವುಗಳಮೇಲೆ ತುಂಬಾ ಅಭಿರುಚಿಯಿರುವುದರಿಂದ (ಪದಕಗಳನ್ನು ಸಂಪಾದಿಸಬೇಕೆಂದಲ್ಲ) ಅವರಿಗೆ ಇವೆರಡೂ ಹೇರಳವಾಗಿ ದೊರೆಯುವಂತೆ ನೋಡಿಕೊಳ್ಳಬೇಕು. ಅಂತ್ಯದಲ್ಲಿ ಅವರಿಗೆ ಪದಕದ ಅಭಿಪ್ರಾಯವು ಬರಬೇಕು. ಈಜುವುದನ್ನು ಉದಾಹರಣೆಯಾಗಿ ತೆಗೆದುಕೊಳ್ಳಿ: ಈ ಕೆಲಸಕ್ಕೆ ಸಾಮಾನ್ಯವಾಗಿ ಪ್ರತಿಯೊಬ್ಬ ಮರಿಯೂ ತನ್ನ ಮನಸಾ ಪ್ರವೇಶಿಸುತ್ತಾನೆ. ಎಲ್ಲೋ ಕೆಲವರ ವಿಚಾರದಲ್ಲಿ ಪದಕದ ಆಶೆಯು ಬೇಕಾಗಬಹುದು. ಅದೂ ಕೊನೆಕೊನೆಗೆ ಬರಬೇಕು.

ಪದಕಗಳ ಕ್ರಮವು ಮೇಲೆ ಹೇಳಿದ ರೀತಿಯಲ್ಲಿರಬೇಕೆಂಬುದನ್ನು ತಿಳಿದ ನಂತರ ಹುಡುಗನನ್ನು ತೇರ್ಗಡೆ ಹೊಂದಿಸಬೇಕಾದರೆ ಅವನಿಂದ ಬಹಳ ಪ್ರೌಢಿಮೆಯನ್ನಪೇಕ್ಷಿಸಬೇಕು. ಒಂದೊಂದು ತಿಂಗಳಿಗೆ ಒಂದೊಂದರಂತೆ ಪದಕಗಳನ್ನು ಸಂಪಾದಿಸುವುದಕ್ಕೆ ಬಿಡಬಾರದು. ಸಾಮಾನ್ಯವಾಗಿ ಎಲ್ಲಾ ಮರಿಗಳೂ (ಅದರಲ್ಲಿಯೂ ಪದಕಗಳನ್ನು

ಪಡೆಯಬೇಕೆಂಬ ಮರಿಗಳು) ಇನ್ನೊಬ್ಬರ ವಿಚಾರವನ್ನೇ ಮನಸ್ಸಿಗೆ ಹಚ್ಚಿಕೊಳ್ಳತಕ್ಕವರಲ್ಲ. ಈ ವಿಚಾರದಲ್ಲಿ ನೀವು ಎಚ್ಚರಿಕೆಯಿಂದಿರದಿದ್ದರೆ ಅವರು ಪದಕಗಳ ಬೇಟೆಗಾರ (Badge-Hunters) ರಾಗಿ ಪರಿಣಮಿಸುತ್ತಾರೆ. ಹಿಂದಿನ ಸಾಮಾನ್ಯ ಕೂಟಗಳು ಪದಕಗಳ ಪರೀಕ್ಷಾಂಶಗಳನ್ನು ಹೇಳಿಕೊಡುವುದಕ್ಕಾಗಿ ಉಪಯೋಗಿಸಲ್ಪಡಕೂಡದು. ಅದಕ್ಕಾಗಿ ಮರಿಯು ತಾನಾಗಿ ಶ್ರಮಪಡಬೇಕು. ಅವಶ್ಯಕತೆ ತೋರಿಬಂದರೆ ಆಗಾಗ ಅವನಿಗೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡಬೇಕು. ಯಾವುದಾದರೂ ಒಂದೇ ಪಂಗಡದ ಪದಕಗಳಿಗಾಗಲಿ ಅಥವಾ ಸುಲಭವಾಗಿ ಸಂಪಾದಿಸಬಹುದಾದ ಪದಕಗಳನ್ನೇ ಹುಡುಕಿ ಅವುಗಳಿಗಾಗಲಿ ಪ್ರಯತ್ನ ಮಾಡುವ ಅಭ್ಯಾಸವನ್ನು ತಪ್ಪಿಸಬೇಕು. ಆರೀತಿ ಮರಿಯು ಮಾಡುವನೆಂಬುದು ಗೊತ್ತಾದಕೂಡಲಿ ಅವನು ಪದಕದ ಭೂತನಾಗುವನೆಂದು ತಿಳಿಯಬೇಕು. ಉಳಿದ ಪದಕಗಳಿಗೆ ಪ್ರಯತ್ನ ಮಾಡುವುದಕ್ಕೆ ಮುಂಚೆ ಮರಿಯು ಮನೆಗೆಲಸದವ (House Orderly) ಅಥವಾ ಪ್ರಥಮ ಚಿಕಿತ್ಸಕ (First Aider) ಈ ಎರಡರಲ್ಲಿ ಯಾವುದಾದರೂ ಒಂದನ್ನು ಪಡೆಯಲೇಬೇಕೆಂತ ನನ್ನ ಹಿಂದಿನಲ್ಲಿ ಯಾವಾಗಲೂ ಕಟ್ಟು ಮಾಡಿದ್ದೆನು.

ಭೀಲ್.

(ಮುಂದುವರಿಯುವುದು)

ಪೆಟ್ರೋಲ್ ಲೀಡರಿಗೊಂದು ಕಾಗದ.

(ರೊಲ್ಯಾಂಡ್ ಇ. ಫಿಲಿಪ್ಸ್‌ರವರ ಪುಸ್ತಕದ ಅನುವಾದ)

ಶ್ಯಾಮೂ,

ನಿಮ್ಮ ಸ್ಕೌಟ್ ಮಾಸ್ಟರು ಇದುವರೆಗೆ ನೋಡಿರುವ ಎಲ್ಲರಿಗಿಂತಲೂ ನಿಮ್ಮ ಪೆಟ್ರೋಲಿನವರ ಕೋಮಲ ಪಾದನ ಪರೀಕ್ಷಾಂಶಗಳ ವಿಚಾರದಲ್ಲಿ ಹೆಚ್ಚಾಗಿ ತಿಳಿದುಕೊಂಡಿದ್ದಾರೆಂಬುದನ್ನು ಅವರಿಂದ ಕೇಳಿ ತುಂಬಾ ಸಂತೋಷವಾಯಿತು.

ಮೂರು ವಾರಗಳ ಅಭ್ಯಾಸ ಮಾತ್ರದಿಂದ ನಿಮ್ಮ ಪೆಟ್ರೋಲಿನವರು ಅವುಗಳನ್ನು ಅಷ್ಟು ಚೆನ್ನಾಗಿ ತಿಳಿದುಕೊಳ್ಳುವವರಾಗಿರುವಾಗ, ನಾಲ್ಕೈದು ತಿಂಗಳು ಕಾಲ ಅಭ್ಯಾಸ ಮಾಡಿದರೆ ಎರಡನೆಯ ದರ್ಜೆಯ ಪರೀಕ್ಷಾಂಶಗಳಲ್ಲಿ ಉತ್ತಮ ರೀತಿಯಲ್ಲಿ ಉತ್ತೀರ್ಣರಾದರೂ ಆಗಬಹುದು.

ನಾಳೆಯ ರಾತ್ರಿಯಿಂದ ನೀವು ಎರಡನೆಯ ದರ್ಜೆಯ ಕೆಲಸಕ್ಕೆ ಪ್ರಾರಂಭಿಸುವಿರಿ. ನೀನು ಮೊದಲು ಮಾಡಬೇಕಾದ ಕೆಲಸವೆಂದರೆ, ನಿಮ್ಮ ಸ್ಕೌಟುಗಳೆಲ್ಲರನ್ನೂ ಸುತ್ತಲೂ ಕೂರಿಸಿಕೊಂಡು ಆದಷ್ಟು ಜಾಗ್ರತೆಯಾಗಿ ಅವರು ಎರಡನೆಯ ದರ್ಜೆಯ ಸ್ಕೌಟುಗಳಾಗಲೇಬೇಕೆಂಬುದು.

ಒಳ್ಳೆಯ ಸ್ಕೌಟಾದವನು ಒಂದನೆಯ ದರ್ಜೆಯ ಸ್ಕೌಟಾಗಬೇಕೆಂತ ಅಪೇಕ್ಷಿಸುತ್ತಾನೆ, ಆದರೆ ಎರಡನೆಯ ದರ್ಜೆಯ ಸ್ಕೌಟಾದ ಹೊರತು

ಒಂದನೆಯ ದರ್ಜೆಯ ಸ್ಕೌಟಾಗುವಂತಿಲ್ಲ. ಎರಡನೆಯ ದರ್ಜೆಯಲ್ಲಿ ಮೊದಲನೆಯವನಾದ ಹೊರತು ಮೊದಲನೆಯ ದರ್ಜೆಯಲ್ಲಿ ಎರಡನೆಯವನಾಗುವಂತಿಲ್ಲ. ಈಗ ಅವರೆಲ್ಲಾ ಕೋಮಲಪಾದರು ಅಂದರೆ ಮೂರನೆಯ ದರ್ಜೆಯವರಾಗಿದ್ದಾರೆ.

ಅನೇಕವೇಳೆ ರೈಲು ಗಾಡಿಯಲ್ಲಿ ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡುವವರಲ್ಲಿ ಅನೇಕರು ಒಳ್ಳೆಯವರಾಗಿರುತ್ತಾರೆ. ಎಷ್ಟೋ ವೇಳೆ ಹೆಚ್ಚು ಹಣ ಕೊಟ್ಟು ಬೇರೆ ತರಗತಿಯ ಗಾಡಿಯಲ್ಲಿ ಪ್ರಯಾಣ ಮಾಡುವವರಷ್ಟೇ ಒಳ್ಳೆಯವರಾಗಿರುತ್ತಾರೆ.

ಸ್ಕೌಟಾದವನು ತಾನು ಮಾಡಬೇಕಾದ ಅಭ್ಯಾಸಗಳನ್ನು ರೈಲು ಗಾಡಿಯಲ್ಲಿ ಮಾಡುವುದಿಲ್ಲ. ದಟ್ಟವಾದ ಕಾಡುಗಳ ಮಧ್ಯೆ ಮಾಡುತ್ತಾನೆ.

ಒಬ್ಬ ಸ್ಕೌಟನ್ನು "ಕೋಮಲಪಾದ" ನೆಂದು ಕರೆಯುವುದು ಅವನಿಗೆ ಮೂರನೆಯ ತರಗತಿಯ ಪಾದಗಳಿರುವುದರಿಂದ. ಮೊದಲನೆಯ ದರ್ಜೆಯ ಸ್ಕೌಟಿನ ಪಾದಗಳು ಗಾಯಪಡುವುದಿಲ್ಲ. ಯಾಕೆಂದರೆ ಅವುಗಳನ್ನು ಹೇಗೆ ನೋಡಿಕೊಳ್ಳಬೇಕೆಂಬುದು ಅವನಿಗೆ ಗೊತ್ತು.

ಒಬ್ಬ ಮನುಷ್ಯನಾಗಲಿ ಹುಡುಗನಾಗಲಿ ಹೊಲದಲ್ಲಿ ಕೆಲಸ ಮಾಡುವುದಕ್ಕೆ ಹೊರಟಾಗ ಪ್ರಾರಂಭದಲ್ಲಿ ಅವನ ಹೆಜ್ಜೆಗಳೆಲ್ಲಾ ನೋವಾಗುತ್ತವೆ. ಅದರಿಂದಲೇ ನಮ್ಮ ಹುಡುಗರಿಗೆ "ಕೋಮಲಪಾದ" ರೆಂಬ ಹೆಸರು ಬಂದುದು.

ನೀನು ತಂದಿದ್ದ ಪುಸ್ತಕದಲ್ಲಿ ಎರಡನೆಯ ದರ್ಜೆಯ ಸ್ಕೌಟಿಗೆ ವಿಧಾಯಕವಾದ ಒಂಭತ್ತು ಅಂಶಗಳಿವೆ. ಅದರಿಂದಾಗಲಿ ಅಥವಾ ಅವುಗಳನ್ನು ಒಂದು ಕಾಗದದಮೇಲೆ ಬರೆದುಕೊಂಡಾಗಲಿ ನಿನ್ನ ಸ್ಕೌಟುಗಳಿಗೆ ಅವುಗಳ ವಿಚಾರದಲ್ಲಿ ತಾವು ಏನೇನು ಮಾಡಬೇಕಾದ ಅವಶ್ಯಕತೆಯುಂಟೆಂಬ ವಿಚಾರದಲ್ಲಿ ಸ್ಪಷ್ಟವಾದ ಅಭಿಪ್ರಾಯವು ಬರುವುದಕ್ಕಾಗಿ ನಿನ್ನ ಸ್ಕೌಟುಗಳಿಗೆ ಚೆನ್ನಾಗಿ ಓದಿ ಹೇಳಬೇಕು.

ನಿನ್ನ ಪೆಟ್ರೋಲಿನವರು ವಾರಕ್ಕೆರಡುಬಾರಿ ಒಂದೊಂದು ದಿನವೂ ಎರಡೆರಡು ಗಂಟೆಗಳಕಾಲ ಸೇರುವುದಾದರೆ, ಒಂದೊಂದು ದಿನವೂ ನಾಲ್ಕು ನಾಲ್ಕರಂತೆ ಆರಿಸಿಕೊಂಡು ಒಂದೊಂದಕ್ಕೂ ಅರ್ಧ ಗಂಟೆಯನ್ನು ವಿನಿಯೋಗಿಸುವುದು ಒಳ್ಳೆಯದು. ಹೀಗೆ ಮಾಡುವುದರಿಂದ ಒಂದೇ ವಿಚಾರವನ್ನು ಬಹಳಕಾಲ ಮಾಡಿ ಬೇಜಾರು ಹೊಂದುವ ಸಂಭವವಿರುವುದಿಲ್ಲ.

ಈ ಅಂಶಗಳಲ್ಲಿ ಮೊದಲನೆಯದು ನೀನು ಒಂದು ತಿಂಗಳ ಕಾಲ "ಕೋಮಲ ಪಾದ" ನಾಗಿರಬೇಕೆಂದು ಹೇಳುತ್ತದೆ.

ಕೆಲವರು ಪೆಟ್ರೋಲ್ ಲೀಡರುಗಳು ಇದು ಒಂದು ಪರೀಕ್ಷಾಂಶವಲ್ಲವೆಂದೂ ಒಂದು ತಿಂಗಳಲ್ಲಿ ಯಾರೂ ಎರಡನೆಯ ದರ್ಜೆಯ ಸ್ಕೌಟಾಗುವುದು ಸಾಧ್ಯವಲ್ಲವೆಂತಲೂ ಹೇಳುತ್ತಾರೆ. ಆದ್ದರಿಂದ ಇದನ್ನು ಗಣನೆಗೆ ತೆಗೆದುಕೊಳ್ಳಬೇಕಾದ್ದಿಲ್ಲವೆಂತ ಅವರ ಅಭಿಪ್ರಾಯ.

ಹೀಗೆ ಮಾಡಬೇಕೆಂಬುದು ಚೀಫ್ ಸ್ಕೌಟ್‌ರವರ ಅಭಿಪ್ರಾಯವಲ್ಲ. ಉಳಿದ ಪರೀಕ್ಷಾಂಶಗಳಿಗೆ ಎಷ್ಟುಮಟ್ಟಿಗೆ ಗಮನವನ್ನು ಕೊಡುತ್ತೀರೋ ಇದಕ್ಕೂ ಅಷ್ಟೇ ಮಟ್ಟಿಗೆ ಗಮನ ಕೊಡಬೇಕೆಂಬುದು ಅವರ ಅಭಿಪ್ರಾಯ.

ಈ ಪರೀಕ್ಷಾಂಶದ ವಿಚಾರದಲ್ಲಿ ನೀವು ಆಗಾಗ್ಗೆ ಕೋಮಲ ಪಾದನ ಪರೀಕ್ಷಾಂಶಗಳನ್ನು ಜ್ಞಾಪಕಕ್ಕೆ ತಂದುಕೊಳ್ಳುತ್ತಿರಬೇಕು. ಮತ್ತು ನನ್ನ ಹಿಂದಿನ ಕಾಗದದಲ್ಲಿ ಸೂಚಿಸಿರುವಂತೆ ಅವುಗಳಿಗೆ ಸಂಬಂಧಪಟ್ಟಂತೆ ಹೆಚ್ಚು

ಹೆಚ್ಚಿನ ತಿಳುವಳಿಕೆಯನ್ನು ಪಡೆಯಬೇಕು. ಅಂದರೆ ಎರಡನೆಯ ದರ್ಜೆಯ ಪರೀಕ್ಷಾಂಶಗಳಲ್ಲಿ ತೇರ್ಗಡೆಯಾಗುವ ಕಾಲಕ್ಕೆ ಆರು ಗಂಟುಗಳಿಗೆ ಬದಲಾಗಿ ಹದಿನಾರನ್ನೂ, ನಾಲ್ಕು ಸ್ಕೌಟ್ ಚಿನ್ಹೆಗಳಿಗೆ ಬದಲಾಗಿ ಹತ್ತನ್ನೂ ನಿಮ್ಮ ಧ್ವಜದ ವಿಚಾರಗಳ ಜೊತೆಗೆ ಇತರ ಕೆಲವು ರಾಷ್ಟ್ರಗಳ ಧ್ವಜಗಳ ವಿಚಾರಗಳನ್ನೂ ಮತ್ತು ಪ್ರತಿದಿನದ ನಡವಳಿಕೆಯ ಮೂಲಕ ಸ್ಕೌಟ್ ನಿಯಮಗಳನ್ನನುಸರಿಸುವ ನಾಲ್ಕಾರು ಬೇರೆ ಬೇರೆ ರೀತಿಗಳನ್ನೂ ಕಲಿಯಬೇಕು.

ಕೋಮಲ ಪಾದನೆಂದರೆ ಹಿಂದೆ ಯಾವಾಗಲೋ ಕೆಲವು ವಿಚಾರಗಳಲ್ಲಿ ತೇರ್ಗಡೆ ಹೊಂದಿದವನಲ್ಲ. ಯಾವಾಗಬೇಕಾದರೂ ಆ ಅಂಶಗಳಲ್ಲಿ ಆಯಾಸವಿಲ್ಲದೆ ತೇರ್ಗಡೆ ಹೊಂದತಕ್ಕವನಾಗಿರಬೇಕು.

ಒಂದು ದಿನ ಒಬ್ಬನನ್ನು ಉರಿಯುತ್ತಿರುವ ಮಹಡಿಯಿಂದ ಕೆಳಕ್ಕೆ ಹಗ್ಗದ ಮೂಲಕ ಇಳಿಸಬೇಕಾದರೆ ನೀನು ಸದ್ಯದಲ್ಲಿ "ಕುಣಿಕೆ ಗಂಟು" (Bowling) ಹಾಕುವುದನ್ನು ಮರೆತುಬಿಟ್ಟಿದ್ದೀಯೆಂತಲೂ ಇನ್ನು ಕೆಲವು ದಿನಗಳಲ್ಲಿ ಅದನ್ನು ಕಲಿತುಕೊಂಡು ಬರುತ್ತೀಯೆಂತಲೂ ಹೇಳುವುದರಿಂದ ಪ್ರಯೋಜನವಿಲ್ಲ.

ಅಷ್ಟರೊಳಗಾಗಿ ನೀನು ಬಂಬುಗಳನ್ನು ಸೇರಿಸಿ ನಾನಾ ವಿಧವಾಗಿ ಕಟ್ಟಿ ಚಟ್ಟವನ್ನು ತಯಾರ್ಮಾಡುವುದು ಹೇಗೆಂಬುದನ್ನು ಕಲಿತುಕೊಂಡು ಬರಬೇಕಾಗುತ್ತೆ. ಅದಕ್ಕೆ ಬದಲಾಗಿ ಎರಡನೆಯ ದರ್ಜೆಯ ಮೊದಲನೆಯ ಅಂಶವು ಆಚರಣೆಯಲ್ಲಿದ್ದರೆ ಅಷ್ಟಕ್ಕೆ ಅವಕಾಶವೇ ಆಗುವುದಿಲ್ಲ.

ಪ್ರಥಮ ಚಿಕಿತ್ಸೆ (First Aid) ಸಂಕೇತಕ್ರಮ (Signalling) ಸ್ಕೌಟ್ ನಡಿಗೆ (Scout's Pace) ಜ್ಞಾಪಕ ಶಕ್ತಿಯ ಆಟ (Kim's Game) ಮತ್ತು ಉತ್ತರಮುಖಿ (Compass) ಈ ಐದು ಅಂಶಗಳಲ್ಲಿ ಮುಂದೆ ನಿನಗೆ ಕಾಗದಗಳನ್ನು ಬರೆಯಬೇಕೆಂದು ಅಪೇಕ್ಷೆಯಿದೆ.

ಉಳಿದ ಮೂರು ವಿಚಾರಗಳಲ್ಲಿ ಎಂದರೆ ಬೆಂಕಿ ಹತ್ತಿಸುವುದು (Fire Lighting) ಅಡಿಗೆ ಮಾಡುವುದು (Cooking) ಮತ್ತು ಉಳಿಸೋಣ (Thrift) ಈ ಮೂರು ವಿಚಾರಗಳಲ್ಲಿ ನಿನಗೆ ಹೆಚ್ಚು ಸಹಾಯವು ಅವಶ್ಯಕವಿಲ್ಲವೆಂದು ನನಗೆ ತೋರುತ್ತದೆ. ಆದರೂ ಮೊದಲೆರಡನ್ನು ನಿನ್ನ ಸ್ಕೌಟುಗಳು ಅದೃಷ್ಟದ ಮೇಲೆ ಭಾರ ಹಾಕದೆ ಆದಷ್ಟು ಮಟ್ಟಿಗೆ ಅಭ್ಯಾಸ ಮಾಡುವುದೊಳ್ಳೆಯದು.

ಸಣ್ಣ ಸಣ್ಣ ಕಡ್ಡಿಗಳನ್ನು ಗುಡ್ಡೆ ಹಾಕಿ ಅವುಗಳಿಗೆ ಬೆಂಕಿ ಹತ್ತಿಸಿ ಆಮೇಲೆ ಅವುಗಳ ಮೇಲೆ ಸ್ವಲ್ಪ ಸ್ವಲ್ಪವಾಗಿ ದೊಡ್ಡ ಕಡ್ಡಿಗಳನ್ನಿಟ್ಟು ಉರಿ ಮಾಡುವುದು ಉತ್ಸಾಹವನ್ನುಂಟು ಮಾಡುವ ಅಭ್ಯಾಸ.

ಅಡಿಗೆ ಮಾಡುವುದಾದರೋ ಬಹಳ ಪ್ರಯೋಜನಕಾರಿಯಾದ ವಿಚಾರ. ಪ್ರತಿಯೊಬ್ಬ ಸ್ಕೌಟೂ ಶಿಬಿರದಲ್ಲಿ ತಾನೇ ಅಡಿಗೆ ಮಾಡಿಕೊಳ್ಳಲು ಶಕ್ತನಾಗಿರಬೇಕು. ಈ ಶಕ್ತಿಯು ಬರಬೇಕಾದರೆ ತಾನು ಮಾಡಿದ ಅಡಿಗೆಯು ತನಗೆ ಊಟಮಾಡುವುದಕ್ಕೆ ಅರ್ಹವಾಗಿರುವಂತೆ ಮಾಡಿಕೊಳ್ಳುವುದನ್ನು ಅಭ್ಯಾಸ ಮಾಡಲೇಬೇಕು. ಅಡಿಗೆಯನ್ನು ಪರೀಕ್ಷೆ ಮಾಡಲು ಬಂದವನಿಗೆ ಊಟ ಮಾಡಿದ ನಂತರ ಹೊಟ್ಟೆನೋವು ಬಂದರೆ ನಿಮ್ಮ ಅಡಿಗೆಯ ವಿಚಾರದಲ್ಲಿ ಅವನು ಒಳ್ಳೆಯ ಅಭಿಪ್ರಾಯವನ್ನು ಕೊಡುವುದೇ ಇಲ್ಲ.

ನಿನ್ನ ಹುಡುಗರು ಶುಚಿಯಾಗಿರುವ ಕೈಗಳಿಂದ ಶುಚಿಯಾಗಿರುವ ಪಾತ್ರೆಗಳಲ್ಲಿ ಅಡಿಗೆ ಮಾಡುತ್ತಾರೆಂಬುದನ್ನು ಅವಶ್ಯಕವಾಗಿ ನೀನು ನೋಡ

ಬೇಕು. ಕೊಳಕಾಗಿರುವ ಪಾತ್ರೆಗಳಲ್ಲಿ ಅಡಿಗೆ ಮಾಡುವುದೂ ಮತ್ತು ಕಶ್ಮಲದಿಂದ ಕೂಡಿದ ಕೈಗಳಿಂದ ಆಹಾರವನ್ನು ಮುಟ್ಟುವುದೂ ಹತ್ತನೆಯ ನಿಯಮದ ಭಂಗವೆಂದು ಭಾವಿಸಲ್ಪಡಬೇಕು.

ಒಂಭತ್ತನೇ ನಿಯಮಕ್ಕೆ ಅನುಸಾರವಾಗಿ ನಡೆಯುವ ವಿಚಾರದಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿಡುವ ಆ ಎಂಟಾಣೆಯು ಮೊದಲನೇ ಹೆಜ್ಜೆ. ನಿನ್ನ ಸ್ಕೌಟುಗಳು ಪ್ರತಿವಾರವೂ ಸ್ವಲ್ಪ ಹಣವನ್ನು ಕೊನೆಗೆ ಅರ್ಧಾಣೆಯನ್ನಾದರೂ ಉಳಿಸುವಂತೆ ಅವರಿಗೆ ಉತ್ತೇಜನ ಕೊಡು. ಕೆಲವು ಕಾಲದ ನಂತರ ಹಣವು ಹೇಗೆ ಬೆಳೆಯುತ್ತದೆಂಬುದು ಅವರಿಗೇ ಆಶ್ಚರ್ಯವನ್ನುಂಟುಮಾಡುತ್ತದೆ.

ಸ್ವಲ್ಪ ಹಣವನ್ನುಳಿಸಿಟ್ಟುಕೊಂಡಿರುವ ಸ್ಕೌಟು ಬಹಳ ಅದ್ಭುತವಾದ ರೀತಿಯಲ್ಲಿ ಪರೋಪಕಾರವನ್ನು ಮಾಡಲು ಶಕ್ತನಾಗಬಹುದು. ಆ ಹಣವನ್ನು ಅವನು ಕೆಲಸಕ್ಕೆ ಬಾರದ ಪದಾರ್ಥಗಳಿಗಾಗಿ ವೆಚ್ಚಮಾಡಿದ್ದಕ್ಕಿಂತಲೂ ಇದರಿಂದ ಹೆಚ್ಚು ಆನಂದವುಂಟಾಗುತ್ತದೆ. ಅಲ್ಲದೆ ತನ್ನಲ್ಲಿ ಕಷ್ಟಕಾಲಕ್ಕೆ ಒದಗಿಬರುವಂತೆ ಹತ್ತಿಪ್ಪತ್ತು ರೂಪಾಯಿಗಳಿದ್ದರೆ ಎಂಥವನಿಗಾದರೂ ಒಂದು ವಿಧವಾದ ಸ್ವಾತಂತ್ರ್ಯ ಭಾವನೆಯುಂಟಾಗುತ್ತದೆ. ಈಗಂತೂ ಈ ಉಳಿಸೋಣವು ನಮಗೆ ಒಂದು ರಾಷ್ಟ್ರೀಯ ಕರ್ತವ್ಯವಾಗಿದೆ.

ನಿನ್ನ ಪ್ರೀತಿಯ ಭ್ರಾತೃ
ಎಸ್. ಬಿ.

ರೋವರ್ ಸ್ಕೌಟುಗಳೂ ಗ್ರಾಮ ಪುನರುಜ್ಜೀವನವೂ.

(ಮುಂದುವರಿದಿದೆ)

(ಸರ್ವ ಹಕ್ಕೂ ಕಾದಿಡಲಾಗಿದೆ)

ಹಳ್ಳಿಯ ಕ್ಷೇಮಲಾಭಕ್ಕೋಸ್ಕರ ಸಹಸ್ರಮುಖವಾದ ಪ್ರಯತ್ನಗಳು ನಡೆಯಬೇಕಾಗಿರುವಲ್ಲಿ ನಮ್ಮ ಹಳ್ಳಿಯವರು ಬಹಳಮಟ್ಟಿಗೆ ವಿದ್ಯಾಶೂನ್ಯರಾಗಿಯೂ ಉದಾಶೀನರಾಗಿಯೂ ಇರುವರು. ವಿದ್ಯಾವಂತರಲ್ಲಿಯೂ ಕೂಡ ಅನೇಕರು ಕಾರ್ಯನಿರ್ವಾಹಕ ಶಕ್ತಿಯನ್ನೂ ಸಮಯವನ್ನೂ ಪಡೆದಿದ್ದರೂ ಹಳ್ಳಿಗಳ ಅಭಿವೃದ್ಧಿಗೋಸ್ಕರ ಯಾವ ಪ್ರಯತ್ನವನ್ನೂ ಮಾಡದೆ ಸ್ವಸುಖದಲ್ಲಿಯೇ ಆಸಕ್ತರಾಗಿರುವರು. ಇಂಥಾ ಜನರ ಪ್ರವರ್ತನೆಗಳಲ್ಲಿ ಜನ್ಮಸಾರ್ಥಕ್ಯದ ಚಿನ್ಹೆಗಳು ಸ್ವಪ್ನಪ್ರಾಯವಾಗಿರುವವು. ಭಕ್ತಿಮಾರ್ಗಕ್ಕೆ ಸಂಬಂಧಪಟ್ಟವುಗಳೆನ್ನಿಸುವ ಆಚರಣೆಗಳಲ್ಲಿ ಕೂಡ ಜನರು ಕೇವಲ ವಿನೋದಾಕಾಂಕ್ಷಿಗಳಾಗಿ ಕಾರ್ಯಗಳನ್ನು ನೆರವೇರಿಸುವರೇ ಹೊರತು ನಿಜವಾದ ಪಾರಮಾರ್ಥಿಕತೆಯನ್ನು ವ್ಯಕ್ತಗೊಳಿಸುವುದಿಲ್ಲ. ಹಳ್ಳಿಗಳ ಹಿತಕ್ಕೆ ಸಂಬಂಧಿಸುವ ಕಾರ್ಯಗಳಲ್ಲೆಲ್ಲಾ ಮುಂದಾಳುಗಳಾಗಿರಲು ಸಮರ್ಥರಾದವರೇ ತಟಸ್ಥರಾದಲ್ಲಿ ಎಂಥಾ ಸ್ಥಿರಚಿತ್ತನಾದ ದೇಶವತ್ಸಲನಿಗಾದರೂ ಉತ್ಸಾಹವು ಕಡಮೆಯಾಗುವುದು.

ಮೇಲೆ ಹೇಳಿದಂತೆ ಸತ್ಕಾರ್ಯಗಳಲ್ಲಿ ಉದಾಶೀನರಾದ ಜನಮಾತ್ರವೇ ಅಲ್ಲದೆ ಅಂಥಾ ಕಾರ್ಯಗಳಿಗೆ ಪ್ರತಿಬಂಧಕಗಳನ್ನುಂಟುಮಾಡುವ ಜನರು ಸಹ ಅಲ್ಲಲ್ಲಿ ತಲೆದೋರುವರು. ಇವರು ಅನೇಕ ಭಾಗಗಳಲ್ಲಿ ಸತ್ಕಾರ್ಯಪ್ರವರ್ತಕರಂತೆ ಕಪಟವೇಷವನ್ನು ಧರಿಸಿ ಸ್ವಕಾರ್ಯಧುರಂಧರರಾಗಿರುವರು. ಈ ವೇಷಧಾರಿಗಳು ಕಷ್ಟಪರಂಪರೆಗಳಿಗೆ ಸಿಕ್ಕಿರುವ ದೇಶವತ್ಸಲರಂತೆಯೂ,

ಪರಲೋಕದ ಕಡೆಗೇ ದೃಷ್ಟಿಯನ್ನು ತಿರುಗಿಸಿರುವ, ಭಾಗವತ ಶ್ರೇಷ್ಠರಂತೆಯೂ, ಪರೋಪಕಾರಕ್ಕಾಗಿ ಮನೋವಾಕ್ಕಾಯಗಳನ್ನು ಅರ್ಪಿಸಿರುವ ಸಾಧುಗಳಂತೆಯೂ, ಆಶ್ಚರ್ಯಕರವಾದ ರೀತಿಯಲ್ಲಿ ನಟಿಸುತ್ತ ಜನರನ್ನು ಮರುಳುಮಾಡಿ, ಅವರ ಪ್ರೀತಿ ವಿಶ್ವಾಸಗಳನ್ನು ಮೋಸದಿಂದ ಸಂಪಾದಿಸುವುದರಮೂಲಕ ಸ್ವಪ್ರಯೋಜನವನ್ನು ಸಾಧಿಸುವರು. ಸ್ವಲ್ಪ ಕಾಲದಲ್ಲಿಯೇ ಈ ಮೋಸವು ಬಹಿರಂಗಕ್ಕೆ ಬಂದು ಕ್ರಮೇಣ ಜನವಿಶ್ವಾಸವು ತಪ್ಪಿಹೋಗುವುದು. ಹೀಗೆ ಜನರು ಅನೇಕರನ್ನು ಮಾಯಾವಿಗಳೆಂದು ತಿಳಿಯುವುದರಿಂದ ಕೊನೆಗೆ ಅವರು ನಿಷ್ಕಾಪಟ್ಯವುಳ್ಳ ದೇಶವತ್ಸಲರನ್ನು ಕೂಡಾ ನಂಬದೆ ದೇಶಹಿತಕಾರ್ಯಗಳಿಗೆ ತ್ರಕ್ಕಷ್ಟು ಒತ್ತಾಸೆಯನ್ನು ಮಾಡಲು ಹಿಂದೆಗೆಯುವರು.

ಯಾವುದೊಂದು ಕಾರ್ಯದ ಋಜುತ್ವವನ್ನಾದರೂ ನಿರ್ಧರಿಸಬೇಕಾದರೆ ಅದು ಬಹುಮಂದಿಗೆ ಎಷ್ಟರಮಟ್ಟಿಗೆ ಹಿತವರ್ಧಕವಾಗಿರುವುದೆಂಬುದನ್ನು ಯೋಚಿಸಬೇಕು. ಅಲ್ಪ ಸ್ವಲ್ಪಮಂದಿಗೆ ಮಾತ್ರ ಹಿತಕಾರಿಯಾಗಿದ್ದರೂ, ಜನಸಾಮಾನ್ಯಕ್ಕೆ ನಿಷ್ಪ್ರಯೋಜನವಾಗಿ ಅಥವಾ ಹಾನಿಕರವಾಗಿಯೇ ಇರುವ ಪಕ್ಷಕ್ಕೆ, ಅಂಥಾ ಯಾವ ಕೆಲಸವಾದರೂ ಗಣನಾರ್ಹವಾಗಲಾರದು. ಅಭ್ಯುದಯಕ್ಕೋಸ್ಕರ ಸಾಹಸಪಡುವ ಕೆಲವರು ತಾವು ಕೃತಾರ್ಥರಾದೆವೆಂದ ಮಾತ್ರಕ್ಕೇ ಲೋಕಕ್ಕೆ ನಿಜವಾದ ಶ್ರೇಯಸ್ಸುಂಟಾಗಲಾರದು. ಬೆಟ್ಟದ ಶಿಖರವನ್ನು ತಲಪಿದವರು ಇನ್ನೂ ಎತ್ತರವಾದ ಶಿಖರಗಳನ್ನು ತಮ್ಮ ಮಟ್ಟಿಗೆ ಹುಡುಕಿಕೊಳ್ಳುವುದಕ್ಕಿಂತಲೂ ಕೆಳಗಡೆ ಕಷ್ಟಪಡುತ್ತಿರುವ ಅನೇಕಾನೇಕರನ್ನು ಮೇಲಕ್ಕೆ ಬರಮಾಡಿಕೊಳ್ಳುವ ಚಿಂತೆಯಲ್ಲಿರುವುದೇ ಶ್ರೇಯಸ್ಕರ. ಪೂರ್ವಪದ್ಧತಿಗಳನ್ನು ಒಂದೊಂದಾಗಿ ಬಿಡುತ್ತ ನವನಾಗರಿಕತೆಯ ಅಲ್ಲಕಲ್ಲೋಲದಲ್ಲಿ ನುಗ್ಗಿನುಸುಳುತ್ತಿರುವ ನಮ್ಮ ದೇಶಬಾಂಧವರು ಈ ಅಂಶಕ್ಕೆ ಗಮನಕೊಟ್ಟು, ಹಳ್ಳಿಗಳಿಗೆ ಕೀರ್ತಿಯನ್ನು ತರುವ ಮಾರ್ಗದಲ್ಲಿ ಪ್ರವರ್ತಿಸುವ ಉದ್ಯಮದಲ್ಲಿ ಭಾಗಿಗಳಾಗಬೇಕು.

ಪ್ರತಿಭೆಯಿಂದ ಮನಸ್ಸು ಪರಿಪಕ್ವವಾಗಲು ಪಂಚಾಂಗವಿರಬೇಕು. ಜ್ಯೋತಿಷ್ಕರ ಪಂಚಾಂಗವಲ್ಲ ವೀಕ್ಷಣ, ಪಠಣ, ಬೋಧಾ, ಸಂಭಾಷಣ, ಮನನ ಎಂಬ ಪಂಚಾಂಗ. ಪ್ರಾಪಂಚಿಕವಾಗಿರುವ, ಶ್ಲಾಘನೀಯವೋ, ಚತುರವೋ, ದೇಹಸಂಬಂಧಿಯೋ, ವಸ್ತುಸಂಬಂಧಿಯೋ, ನಮ್ಮದೋ, ಇತರರದೋ ಅಂತು ಎಲ್ಲಾ ನಡವಳಿಕೆಗಳನ್ನೂ ತಿಳಿದುಕೊಳ್ಳುವದೇ ವೀಕ್ಷಣವೆನಿಸುವುದು. ಇದು ನಮಗೆ ಬಾಲ್ಯದಾರಭ್ಯ ವಿವಿಧವಾದ ಅಭಿಪ್ರಾಯಗಳನ್ನೂ, ಅಭಿಮತಗಳನ್ನೂ ವಾಗ್ಝರಿಗಳನ್ನೂ ಒದಗಿಸುವುದು. ಇದರಿಂದಲೇ ಅಗ್ನಿಯ ತೀಕ್ಷ್ಣತೆ, ಛಾಯಾಪತಿಯ ತೇಜಸ್ಸು ಇತ್ಯಾದಿ ಅಂಶಗಳು ತಿಳಿಯುವವು. ಇದರಿಂದಲೇ ಕುದುರೆಗೆ ಹುಲ್ಲಿನಿಂದಲೇ ಜೀವನವೆಂತಲೂ, ಬಿತ್ತಿದ ಬೀಜಕ್ಕೆ ತಕ್ಕ ಪೈರಾಗುವುದೆಂತಲೂ, ನ್ಯಾಯಾನ್ಯಾಯ ವಿಮರ್ಶನಾಶಕ್ತಿಯೂ, ಸಂಭಾಷಣಾಯೋಗ್ಯತೆಯೂ, ಮನುಜನಿಗಿರುವುದೆಂಶಲೂ, ಎಲ್ಲವೂ ಗೊತ್ತಾಗುವುದು. ಊಹೆಯನ್ನು ಉಪಯೋಗಿಸದೆ, ಇಂದ್ರಿಯ ಮನೋಗೋಚರಗಳಾಗುವವೆಲ್ಲವೂ ವೀಕ್ಷಣದಿಂದುಂಟಾದವೆಂದರಿಯಬೇಕು.

ಪಠಣವೆಂದರೆ ಮಹನೀಯರ ಗ್ರಂಥಗಳಿಂದ ಪ್ರಪಂಚದ ವ್ಯವಹಾರಗಳನ್ನು ತಿಳಿಯುವ ಬಗೆ. ಓದುಬರಹಗಳೆಂಬ ವಿದ್ಯೆಯ ಉಪಯೋಗವು ಅಷ್ಟಿಷ್ಟೆಂದು ಹೇಳಲಾದೀತೇ? ಸಾರ್ವಕಾಲಿಕ, ಸಾರ್ವದೇಶೀಯ ವಿದ್ವನ್ಮಂಡಲಿಯ ಅಭಿಮತ, ವೀಕ್ಷಣ, ಪರ್ಯಾಲೋಚನಾ ಇತ್ಯಾದಿಗಳು ನಮಗೆ ಗೊತ್ತಾಗುವುದು ಅದರಿಂದಲೇ.

ಬಾಹ್ಯವಾಗಿಯೂ ಅಂತರಂಗವಾಗಿಯೂ ಗುರುವಿನಿಂದ ಉಪದೇಶಿಸಲ್ಪಟ್ಟು, ಶಿಷ್ಯನು ಗಮನಿಸಿ ತಿಳಿದುಕೊಳ್ಳತಕ್ಕ ಕ್ರಮವು ಬೋಧೆ ಎಂದೆನಿಸುವುದು. ಈ ರೀತಿಯಾಗಿ ಗುರುವಿನಿಂದ ತತ್ವವನ್ನೂ ಪಂಡಿತನಿಂದ ವ್ಯವಹಾರವನ್ನೂ, ಶಾಸ್ತ್ರಿಯಿಂದ ಶಾಸ್ತ್ರವನ್ನೂ, ಭಾಷಜ್ಞನಿಂದ ಭಾಷೆಯನ್ನೂ ಅರಿಯುವೆವು.

ಒಬ್ಬರನ್ನೊಬ್ಬರು ಕಲೆತು ತರ್ಕಮಾಡುವುದರಿಂದ ಪರಸ್ಪರ ಅಭಿಮತಗಳನ್ನು ತಿಳಿದು ನಮ್ಮ ಅಭಿಪ್ರಾಯವನ್ನು ಇತರರಿಗೆ ತಿಳಿಸುವುದೇ ಸಂಭಾಷಣವೆನಿಸುವುದು. ಇದು ಮನಸ್ಸು ಪರಿಪಕ್ವವಾಗಲು ಒಂದು ಸಾಧನ.

ಮನಸ್ಸನ್ನು ಪರಿಪಕ್ವಮಾಡಿ ಪರಿಪೂರ್ಣಗೊಳಿಸುವ, ಮೇಲೆ ಹೇಳಿದ ನಾಲ್ಕು ಸಾಧನಗಳು ಸಫಲವಾಗುವು

ದಕ್ಕೆ ಮನನವು ಆವಶ್ಯಕ. ಇದರಿಂದ ಪದಾರ್ಥಜ್ಞಾನ, ಅನುಭವ, ವೀಕ್ಷಣ ಇತ್ಯಾದಿ ವಿಷಯಗಳು ನಿರ್ದೇಶಿಸಲ್ಪಡುವವು. ಇದರಿಂದಲೇ ಇತರರಿಂದ ಉಕ್ತವಾದ ಅಥವಾ ಲಿಖಿತವಾದ ಅಂಶಗಳ ವಿಷಯದಲ್ಲಿ ಯೋಗ್ಯತಾಯೋಗ್ಯತೆಯ ವಿಮರ್ಶೆಯೂ, ನ್ಯಾಯಾನ್ಯಾಯ ಪರಿಶೀಲನೆಯೂ ಉಂಟಾಗುವವು. ಸತ್ತರ್ಕಸರಣಿಯನ್ನು ಅನುಗೊಳಿಸಿ ಅಜ್ಞಾನಾಂಧಕಾರದಿಂದ ಕದಿಯಲ್ಪಟ್ಟ ಅಮೋಘವಾದ ಮಹಾ ತತ್ವಗಳನ್ನು ಬೆಳಕಿಗೆ ತಂದು ಪ್ರಕಾಶಪಡಿಸುವದಕ್ಕೆ ಮನನವು ಮುಂದುವರಿಯುವುದು. ಈ ವಿಧವಾದ ಪಂಚಾಂಗ ಸಾಧನದಿಂದ ಮನಸ್ಸನ್ನು ಪರಿಪಕ್ವಮಾಡಿಕೊಂಡಾತನು ಐಹಿಕದಲ್ಲಿ ವಂಶಚೂಡನೆನ್ನಿಸಿಕೊಂಡು ಪಂಚತ್ವವನ್ನೈದಿದಮೇಲೆ ಪರಲೋಕದಲ್ಲಿಯೂ ಸುಖಿಯಾಗಿ ಬಾಳುವುದು ಒಂದು ಆಶ್ಚರ್ಯವೆ ?

ಕೆಲವರು ಕೈಗೊಂಡ ಕೆಲಸಗಳೆಲ್ಲವೂ ಈಡೇರುವವು. ಇತರರು ತೊಡಗಿದೆಲ್ಲವೂ ಕೆಟ್ಟುಹೋಗುವುದು. ಇವರು ತಮಗೆ ತಕ್ಕ ಅನುಕೂಲಗಳಿರಲಿಲ್ಲವಾಗಿ ಅದರಂತೆ ಸಾಧಿಸಲು ಆಗಲಿಲ್ಲವೆಂಬ ನೆಪಹೇಳಿ ಸಮಾಧಾನ ಮಾಡಿಕೊಳ್ಳುವರು. ಆ ಅನುಕೂಲಗಳನ್ನು ಒದಗಿಸಿಕೊಳ್ಳಲು ಮನಃಪೂರ್ವಕವಾಗಿ ಪ್ರಯತ್ನಿಸಿದವರು ಯಾರು? ದುರ್ವಾರ್ನ ಪಾತಗಳಿಗೆ ಮನವೀಯದೆ ಸತ್ಕಾರ್ಯ ಪ್ರವರ್ತನೆಯಲ್ಲಿಯೇ ಆಸಕ್ತನಾಗುವುದಕ್ಕೆ ಉಪಕ್ರಮಿಸುವದೀಗ ಪ್ರಯತ್ನ.

ಕೈ ಕೆಸರಾಗದೆ ಬಾಯಿ ಮೊಸರಾಗಬೇಕೆಂದು ಇಷ್ಟಪಟ್ಟು ಅದಕ್ಕೆ ತಕ್ಕ ಸಮಯವನ್ನು ಕಾಯತಕ್ಕವರಿಗೆ ಅಂತಹ ಸಮಯವೆಂದಿಗೂ ದೊರಕಲಾರದು. ಆಕಸ್ಮಿಕವಾಗಿ ಒದಗಿದ ಸಂದರ್ಭಗಳು ಅವನ ಕೆಲಸಗಳನ್ನು ಈಡೇರಿಸಬೇಕು. ಚರಿತ್ರೆಗಳನ್ನು ನೋಡಿದರೆ ಇಂತಹ ಜನಗಳಿಂದ ಮಹಾತ್ಕಾರ್ಯಗಳೆಂದೂ ನೆರವೇರಿಸಲ್ಪಟ್ಟಿಲ್ಲ. ಸಮಯ ಸಂದರ್ಭಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಚಿತ್ತಸ್ಥೈರ್ಯವನ್ನು ಬಿಡದೆ ಕಂಟಕಗಳಾಗಿ ಕಾಣುವವುಗಳನ್ನು ಸಾಧನಗಳನ್ನಾಗಿ ಮಾಡಿಕೊಂಡು ತೊಡಗಿದ ಕೆಲಸಗಳನ್ನು ಈಡೇರಿಸುವವನೇ ದೊಡ್ಡವನು.

ಪಾಶ್ಚಾತ್ಯರು ಬಹಳ ಧೈರ್ಯಶಾಲಿಗಳೆಂಬದಾಗಿಯೂ ಸಾಹಸಿಗಳೆಂಬದಾಗಿಯೂ ಪ್ರಸಿದ್ಧಿಗೆ ಬಂದಿರುವರು. ಇವರು ಯಾವ ಕೆಲಸದಲ್ಲಿ ಪ್ರವರ್ತಿಸಿದರೂ ಕಾರ್ಯಸಿದ್ಧಿಯಲ್ಲಿ ಸಂಪೂರ್ಣ ದೃಷ್ಟಿ ಇಟ್ಟು ಸರ್ವ ಪ್ರಯತ್ನ ಮಾಡುವವರ ಹೊರತು ವಿಘ್ನಗಳಿಗೆ ಬೇಗ ಬೆದರುವವರಲ್ಲ. ರಾಜಕೀಯವೇ ಮೊದಲಾದ ವಿಶಿಷ್ಟ ವಿಷಯಗಳಲ್ಲಿ ಇವರು ತೋರ್ಪಡಿಸುವ ಸಾಹಸಕ್ಕೂ ನಮ್ಮ ದೇಶೀಯರು ತೋರ್ಪಡಿಸುವ ಸಾಹಸಕ್ಕೂ ಎಷ್ಟೋ ವ್ಯತ್ಯಾಸವಿರುವುದು. ಧರ್ಮಕಾರ್ಯಗಳಲ್ಲಿ ಇವರಿಗಿರುವ ದೃಢಭಕ್ತಿಯು ಚರಿತ್ರ ಪ್ರಸಿದ್ಧವಾಗಿರುವುದು. ಇವರ ಧರ್ಮಗುಣದಲ್ಲಿ ಮತ್ತೊಂದು ವಿಶೇಷವುಂಟು. ಲೋಕೋಪಕಾರಕ್ಕೆ ದುಷ್ಟಸಂಹಾರವು ಒಂದು ಮುಖ್ಯಭಾಗವೆಂದು ನಮ್ಮದೇಶೀಯರು ಭಾವಿಸುವರೆ ಹೊರತು ದುಷ್ಟ ಸಂಸ್ಕರಣವು ಅದಕ್ಕಿಂತಲೂ ಘನತರವಾದದ್ದೆಂದು ಪ್ರಾಯಶಃ ಎಣಿಸುವುದಿಲ್ಲ. ಪಾಶ್ಚಾತ್ಯರಾದರೋ ಈ ಭಾಗದಲ್ಲಿ ವಿಶೇಷ ಶಕ್ತಿಯನ್ನುವಹಿಸುವರು. ದೋಷಿಗಳಲ್ಲಿ ಕನಿಕರವಿಟ್ಟು ಅವರನ್ನು ಪುನೀತರನ್ನಾಗಿ ಮಾಡಬೇಕೆಂಬುದು ಅವರ ಪರೋಪಕಾರ ಸಂಕಲ್ಪಗಳಲ್ಲಿ ಅಡಗಿರುವುದು. ಎಂದೂ ದೋಷಮಾಡದಿದ್ದ ನೂರು ಮಂದಿ ಜನರು ಸ್ವರ್ಗಲೋಕಕ್ಕೆ ಬರುವುದಕ್ಕಿಂತ ಪುನೀತನಾದ ಒಬ್ಬ ದೋಷಿಯು ಬರುವದೇ ದೇವತೆಗಳಿಗೆ ಸಂತೋಷಕರವೆಂದು ಒಬ್ಬ ಆಂಗ್ಲೇಯ ಕರ್ತೃಳು ಹೇಳುವುದು ಅತಿಶಯೋಕ್ತಿಯಾಗಲಾರದು. ಇಂಥಾ ಸಂಸ್ಕರಣಗಳು ಪ್ರತಿ ಹಳ್ಳಿಯಲ್ಲಿಯೂ ಅತಿ ಆವಶ್ಯಕ.

ದೋಷಿಗಳನ್ನು ದೂಷಿಸುವುದರಲ್ಲಿಯೂ, ಶಿಕ್ಷಿಸುವುದರಲ್ಲಿಯೂ ಜನರು ಆಸಕ್ತರಾಗುವರೇ ಹೊರತು ಅಂಥವರನ್ನು ಸನ್ಮಾರ್ಗಕ್ಕೆತರುವ ಯೋಚನೆಯನ್ನೇ ಮಾಡುವುದಿಲ್ಲ. ಆದರೆ ಪಾಶ್ಚಾತ್ಯರಲ್ಲಿ ದಯಾಳುಗಳಾದ ಅನೇಕರು ದೋಷಿಗಳ ವಿಷಯದಲ್ಲಿ ಮನಮರುಗಿ ಕಾರಾಗೃಹಗಳಿಗೆ ಹೋಗಿ ಸದ್ಬೋಧೆಯಿಂದ ಖೈದಿಗಳ ಮನಸ್ಸನ್ನು ಸಂಸ್ಕರಿಸಲು ಪ್ರಯತ್ನಿಸುವರು. ಈ ವಿಧವಾದ ಪ್ರಯತ್ನಗಳು ನಮ್ಮ ದೇಶದಲ್ಲಿಯೂ ನಡೆಯಬೇಕು.

ಈ ಕಾರ್ಯವನ್ನು ಮುಖ್ಯವಾಗಿ ಮತಾಚಾರ್ಯರು ನಡೆಯಿಸಬೇಕಾಗಿರುವುದು. ಆದರೆ ಅವರಲ್ಲಿ ಯಾರೂ

ಪ್ರಯತ್ನಿಸಿದಂತೆ ಕಾಣುವುದಿಲ್ಲ. ಆದಕಾರಣ ರೋವರ್ ಸ್ಕೌಟುಗಳು ದೋಷಿಗಳ ಬಳಿಗೆ ಹೋಗಿ ತಮ್ಮ ಉಪದೇಶ ಬಲದಿಂದ ಅವರಲ್ಲಿ ಕೆಲವರನ್ನಾದರೂ ಶುದ್ಧರನ್ನಾಗಿ ಮಾಡಿದರೆ ಮಹೋಪಕಾರವಾಗುವುದು. ಇವರ ದರ್ಶನ ಸ್ಪರ್ಶದಿಂದ ಕಾರಾಗೃಹದಲ್ಲಿರುವ ಖೈದಿಗಳ ಮನಸ್ಸು ಕೂಡ ಪಾವನವಾಗುವುದರಲ್ಲಿ ಸಂಶಯವಿಲ್ಲ.

ಭಗವಂತನ ಸೃಷ್ಟಿಯಲ್ಲಿ ನಾವು ಅಸಡ್ಡೆಯಿಂದ ವ್ಯರ್ಥಮಾಡತಕ್ಕಷ್ಟು ಹೆಚ್ಚಾಗಿರುವ ಪದಾರ್ಥವು ಯಾವುದೂ ಇಲ್ಲ. ಅದು ಹೇಗೆಂದರೆ—ಜನರು ಗಣಿಯಿಂದ ಚಿನ್ನವನ್ನು ತೆಗೆಯಲು ತೊಡಗಿದಾಗ ಮೊದಲು ಮೊದಲು ಗಣಿಗಳಲ್ಲಿ ಅಪಾರವಾದ ಕಪ್ಪು ಮರಳು ಅಡ್ಡಬಿದ್ದು ಗಣಿಯವರ ಲಾಭಕ್ಕೆ ವಿಘ್ನವಾಗಿ ತೋರಿ ಅವರಿಗೆ ತುಂಬಾ ಚಿಂತೆಯನ್ನುಂಟುಮಾಡುತ್ತಿದ್ದಿತು. ಅವರು ಅತ್ಯಂತ ಸಾಹಸಪಟ್ಟು ಈ ಮರಳನ್ನು ಚೆಲ್ಲಿಬಿಡುತ್ತಿದ್ದರು. ಕೆಲವು ವರ್ಷಗಳ ನಂತರ ಈ ಮರಳೇ ಅತ್ಯುತ್ತಮವಾದ ಬೆಳ್ಳಿಯ ಅದುರೆಂದು ತಿಳಿದುಬಂದಿತು. ಆಗ ಅವರು ಅದುವರೆಗೂ ಅನಾಯಾಸವಾಗಿ ದೊರೆಯುತ್ತಿದ್ದ ಐಶ್ವರ್ಯವನ್ನು ತಾವು ತಿಳಿಯದೆ ಕಳೆದುಕೊಂಡೆವೆಂದು ಪಶ್ಚಾತ್ತಾಪಪಟ್ಟರು.

ಈ ಗಣಿಯವರ ಹಾಗೆ ಅನೇಕರು ತಮ್ಮ ಸಕಲ ಶ್ರೇಯಸ್ಸಿಗೂ ಸಾಧಕವಾದ ಕಾಲವನ್ನು ಹೀನಗಳೆಯುತ್ತಾರೆ. ಈ ಕಾಲವೇ ಕಾರ್ಯಸಿದ್ಧಿ ಎಂಬ ಬೆಳ್ಳಿಯ ಅದುರೆಂತಲೂ ಸಾರ್ವಕಾಲಿಕ ಸ್ಥಿತಿ ರಚನೆಗೆ ಮೂಲವಸ್ತುವೆಂತಲೂ ಅರಿಯರು. ಇಹಪರಗಳೆರಡಕ್ಕೂ ನಿಧಿಯನ್ನು ಕೂಡಿಡುವವರು ಯಾರೆಂದರೆ, ಕೆಲಸ ಮಾಡುವವರು, ಕಾಲವನ್ನುಪಯೋಗಿಸುವವರು, ಇವರೇ ಹೊರತು ಪಾಲುಮಾರುವವರೂ, ಕಾಲಹರಣ ಮಾಡುವವರೂ ಅಲ್ಲ.

ಪ್ರೌಢ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಖರ್ಚು ಮಾಡುವ ಹಣವು ಎಲ್ಲಿಂದ ಬರುತ್ತದೆಂಬುದನ್ನು ಕುರಿತು ಪ್ರಾಯಶಃ ಅನೇಕರು ವಿಚಾರ ಮಾಡುವುದಿಲ್ಲ. ಒಬ್ಬೊಬ್ಬ ವಿದ್ಯಾರ್ಥಿಗೆ ನೂರಾರು ರೂಪಾಯಿಗಳ ಮೇರೆಗೆ ಪ್ರತಿ ವರ್ಷವೂ ಖರ್ಚಾಗುವುದೆಂದು ಲೆಕ್ಕಿಸಲ್ಪಟ್ಟಿದೆ. ಇಷ್ಟೊಂದು ಹಣವು ವಿದ್ಯಾರ್ಥಿಗಳಿಂದ ವಸೂಲಾಗುವ ಫೀಜುಗಳ ಮೂಲಕವಾಗಿಯೇ ಭರ್ತಿಯಾಗುವುದಿಲ್ಲ. ಬಹಳ ಮಟ್ಟಿಗೆ ಸರ್ಕಾರದ ಹಣದಿಂದ, ಅಂದರೆ ರೈತರಿಂದ ಸಲ್ಲತಕ್ಕ ಕಂದಾಯ, ತೆರಿಗೆ ವಗೈರೆ ಮೂಲಕ ಉತ್ಪತ್ತಿಯಾಗುತ್ತದೆ. ಶ್ರಮಪಟ್ಟು ವಿದ್ಯೆ ಕಲಿಸಿ ಉದ್ಧಾರ ಮಾಡಿದ ತಾಯಿ ತಂದೆಗಳ ವಿಷಯದಲ್ಲಿ ಮಕ್ಕಳು ಕೃತಜ್ಞರಾಗಿರಬೇಕೆಂಬ ಲೋಕ ನೀತಿಯುಂಟಷ್ಟೆ. ಆದರೆ ವಿದ್ಯಾಭಿವೃದ್ಧಿಯನ್ನು ಹೊಂದಿ ತನ್ಮೂಲಕ ಐಶ್ವರ್ಯವನ್ನೂ ಪದವಿಯನ್ನೂ ಸಂಪಾದಿಸಿಕೊಂಡು ಸುಖ ಪಡುವುದಕ್ಕೆ ಯಾರ ಹಣವೇ ಮೂಲಕಾರಣವೋ ಅಂಥಾ ರೈತಾಪಿ ಜನರ ಸಹಾಯವನ್ನು ಎಣಿಸುವವರು ಮಾತ್ರ ಅಪೂರ್ವ. ಪ್ರೌಢ ವಿದ್ಯಾಪಾರಂಗತರಾದ ನಗರ ನಿವಾಸಿಗಳಿಗೂ ಸಾಮಾನ್ಯ ಗ್ರಾಮಸ್ಥರಿಗೂ ಇರುವ ಪರಸ್ಪರ ಋಣೀಭಾವವನ್ನು ಕುರಿತು ಯೋಚಿಸಿದರೆ ಯಾರು ಯಾರಿಗೆ ಸಾಲಗಾರರೋಪಾದಿಯಲ್ಲಿರುವರೆಂಬುದು ಮನಸ್ಸಿಗೆ ಸುಲಭವಾಗಿ ಹೊಳೆಯುವುದು. ವಿದ್ವೈಶ್ವರ್ಯಯುಕ್ತರಾಗಿ ಸುಖಿಸುವ ನಗರ ನಿವಾಸಿಗಳು ಅಜ್ಞಾನ ಜನಿತವಾದ ಅನೇಕ ಕಷ್ಟಗಳಿಗೆ ಸಿಕ್ಕಿ ಪೇಚಾಡುತ್ತಿರುವ ರೈತಾಪಿ ಜನರ ಋಣಕ್ಕೆ ಒಳಗಾಗಿರುವರು. ಈ ಋಣಕ್ಕೋಸ್ಕರವಾದರೂ ವಿದ್ಯಾವಂತರು ಅನುತಾಪ ಹೃದಯರಾಗಿ ಜನ ಸಾಮಾನ್ಯದ ಕೊರತೆಯನ್ನು ನಿವಾರಿಸಲು ಯತ್ನಿಸಬೇಕು. ನಮ್ಮ ಸಂವೃದ್ಧಿಗೆ ಕಾರಣಭೂತರಾದವರು ಅನೇಕ ಕಷ್ಟಗಳಿಗೆ ಗುರಿಯಾಗಿ ಅಭ್ಯುದಯ ಮಾರ್ಗದಲ್ಲಿ ಹಿಂದೆ ಬಿದ್ದಿರುವಾಗ ನಾವು ಅಂಥವರ ಹಿತವನ್ನು ಬಯಸದೆ ಸ್ವಪ್ರಯೋಜನದಲ್ಲಿಯೇ ದೃಷ್ಟಿಯುಳ್ಳವರಾದರೆ ಭಗವದನುಗ್ರಹವು ನಮಗೆ ಹೇಗೆ ತಾನೇ ಲಭಿಸೀತು!

ಸಾಧನೆಗೂ ಬೋಧನೆಗೂ ಇರುವ ತಾರತಮ್ಯ.

ಬೋಧನೆಗಿಂತಲೂ ಸಾಧನೆಯೇ ಶಕ್ತಿವತ್ತೆಂದು ಎಲ್ಲರಿಗೂ ತಿಳಿದೇ ಇದೆ. ಆದರೆ ವಿಶೇಷವಾಗಿ ಜನರು ಬೋಧನಾಶಕ್ತರಾಗಿರುವರೇ ಹೊರತು ಸಾಧನೆಗೆ ಮನ ಒಲಿಯುವವರು ಕಡಮೆ. ಬೋಧಿಸುವ ಕೆಲಸವು ಎಲ್ಲರಿಗೂ ಸುಲಭವಾಗಿರುವುದು, ಜನರ ಸ್ತುತಿಯನ್ನು ಸಂಪಾದಿಸಲು ಇದು ಸುಲಭೋಪಾಯವಾಗಿ ಎಣಿಸಲ್ಪಟ್ಟಿರುವುದು. ಧರ್ಮ ಶಾಸ್ತ್ರವನ್ನು ಕಣಿಯಂತೆ ಹೇಳು

ವುದು ಸುಲಭ. ಅದು ನಮ್ಮ ಅಹಂಕಾರವೆಂಬ ಜ್ವಾಲೆಗೆ ಅತ್ಯವಶ್ಯವಾದ ಸಾಧನ. "ಮಾತಿಗೇನು ಮುಟ್ಟಿಸಬೇಕು" ಎಂಬ ಗಾದೆಯು ವ್ಯರ್ಥವಲ್ಲ. ಹೇಳಿದಂತೆ ನಡೆಯುವುದು, ಬೋಧಿಸಿದಂತೆ ಸಾಧಿಸುವುದು ಇದೀಗ ಕಬ್ಬಿಣದ ಕಡಲೆ. ಹೇಳುವದೊಂದು ಮಾಡುವದು ಮತ್ತೊಂದು ಎಂಬ ವಿರೋಧಾಭ್ಯಾಸಕ್ಕೆ ನಮ್ಮಲ್ಲಿ ಗುರಿಯಾಗದಿರುವವರು ಬಹಳ ವಿರಳ. ಮಕ್ಕಳಿಗೆ ಶಮ, ದಮ, ನಯ, ವಿನಯ, ಗಾಂಭೀರ್ಯ, ಔದಾರ್ಯ, ಇವೇ ಮೊದಲಾದ ಗುಣಗಳನ್ನು ಬೋಧಿಸುತ್ತಾ ಆ ಗುಣಗಳನ್ನು ನಾವು ಮಾತ್ರ ಸಾಧಿಸದಿದ್ದರೆ, ನಮ್ಮ ಮಾತುಗಳಲ್ಲಿ ಗೌರವವು ಅವರಿಗೆ ಹೇಗೆ ಇದ್ದೀತು.

ಹೀಗೆ ಶುಷ್ಕೋಪನ್ಯಾಸದಿಂದ ಆ ಬಾಲರ ಮನಸ್ಸಿನ ಹದವನ್ನು ಕೆಡಿಸುವದಕ್ಕಿಂತಲೂ ಸುಮ್ಮನಿರುವುದು ಲೇಸಲ್ಲವೇ? ಇದೇ ವಿಚಾರದಲ್ಲಿ ಒಬ್ಬ ಜ್ಞಾನಿಯು ಹೇಳಿರುವುದೇನೆಂದರೆ—ತಮ್ಮ ಚರಿತವೆ ತಮ್ಮ ಸಂತಾನಕ್ಕೆ ಪಥಾನುಬಂಧಿ ಎಂಬುದನ್ನು ಹಿರಿಯರನೇಕರು ಸ್ವಪ್ನದಲ್ಲಿಯೂ ತಿಳಿದರಿಯರು. ಹೇಳಿಕೊಟ್ಟದಲ್ಲ, ತೋರಿಕೊಟ್ಟದ್ದೀಗ ನಮ್ಮ ನಡತೆಗೆ ಮೂಲ. ಬೋಧಿಸುವುದು ಮಾತಲ್ಲ. ನಡವಳಿಕೆ ಎಂದರಿಯಬೇಕು. ನಶ್ಯವನ್ನು ಮಗನು ಹಾಕದಂತೆ ಮಾಡಬೇಕೆಂದಿದ್ದ ಒಬ್ಬ ತಂದೆಯು ನಶ್ಯವನ್ನು ಹಾಕುವವರ ಸಹವಾಸವನ್ನು ಮಾಡಬೇಡವೆಂದನು. ಒಡನೆಯೇ ಮಗುವು "ಅಪ್ಪಾ, ಹಾಗಿದ್ದರೆ ನೆರೆಮನೇ ನಶ್ಯದಂಗಡಿ ಪುಟ್ಟಪ್ಪನವರನ್ನು ಯಾತಕ್ಕೆ ರುಕ್ಕಮ್ಮನ ಮದುವೆಯಲ್ಲಿ ಕರದೆ" ಎಂದಿತು.

ಮನೋಮಾಲಿನ್ಯವನ್ನು ನೀಗಲು ಪಡಬೇಕಾದ ಪ್ರಯಾಸಕ್ಕಿಂತ ಚಾತುರ್ಯವನ್ನುಪಯೋಗಿಸುವ ಪ್ರಯಾಸ ಬಹುಮಟ್ಟಿಗೆ ಸುಲಭವಲ್ಲವೇ? ನಮ್ಮ ಬರವಣಿಗೆಗಳಿಂದ ನಾವು ಒಳ್ಳೆಯವರೆಂದು ಕೆಲವರು ಊಹಿಸಿದರೂ ಊಹಿಸಬಹುದು. ಹಾಗೂ ವಾಚಕರನ್ನು ವಂಚಿಸಬಹುದು. ಒಳ್ಳೆಯವರಾಗಬೇಕೆಂಬ ಅಭೀಪ್ಸೆವು ನಮಗೆ ಇಲ್ಲದಿದ್ದರೆ ಮುಖ್ಯವಾಗಿ ನಮ್ಮನ್ನು ನಾವೇ ವಂಚಿಸಿಕೊಳ್ಳುವೆವಲ್ಲವೇ?

ನೆಂಟರಿಷ್ಟರಲ್ಲಿ ಒಳ್ಳೆಯವರೆನಿಸಿಕೊಳ್ಳಬೇಕೆಂಬ ಅಂಶವು ನಮ್ಮೆಲ್ಲರಿಗೂ ಇದೆಯಷ್ಟೆ. ಇತರರನ್ನು ಮೆಚ್ಚಿಸಬೇಕೆಂಬ ಕೋರಿಕೆಯು ಕಟ್ಟಕಡೆಗೆ ಮೋಸಕ್ಕೆ ಸಿಡುದಾರಿಯಾಗಿ ಪರಿಣಮಿಸುವುದನ್ನು ಅನೇಕ ವೇಳೆ ಕಂಡಿರುವೆವು.

ಇತರರ ಮನಸ್ಸನ್ನು ನೋಯಿಸಲು ಇಷ್ಟವಿಲ್ಲದೆ ಅವರು ಕೈಗೊಂಡಿರುವ ಕೆಲಸವು ಸರಿಯಲ್ಲದಿದ್ದರೂ ಅದರಲ್ಲಿ ಅವರನ್ನು ಪ್ರೋತ್ಸಾಹಿಸುತ್ತಾ ಅದು ಒಂದು ಬಗೆಯ ಮೋಸವಾದರೂ ಮಹಾಪ್ರಯೋಜನಕ್ಕಾಗಿ ಅಲ್ಪ ಪಾಪಕ್ಕೆ ಗುರಿಯಾದೆವೆಂದು ಮನಸ್ಸಿಗೆ ಸಮಾಧಾನತಂದುಕೊಳ್ಳುವುದುಂಟು. ಇದು ಕೇಳುವುದಕ್ಕೆ ಇಂಪು. ಸ್ವಪ್ರಯೋಜನಕ್ಕಾಗಿ ಆಡಿದಲ್ಲಿ ಸತ್ಯವಲ್ಲ. ಆದರೆ ಅಸತ್ಯವಾಡಿಯಾದರೂ ಇನ್ನೊಬ್ಬನನ್ನು ಉದ್ಧರಿಸಬೇಕೆಂಬುದು ಅವಿವೇಕ.

ಮನುಷ್ಯರ ಸ್ವಭಾವವಿಂಥಾದ್ದೆಂದು ತಿಳಿಯುವುದೇ ಬಹುಕಷ್ಟ. ನೈಜವಲ್ಲದ ಸ್ವಭಾವವನ್ನು ಆರೋಪಿಸುತ್ತಲೂ ಇರುವೆವು. ಜಡಾಯಿಯನ್ನು ಶಕ್ತಿ ಎಂದೂ, ನಮ್ರತೆಯನ್ನು ಅಶಕ್ತಿ ಎಂದೂ ಭ್ರಮಿಸಿ ಮೋಸಹೋಗುವೆವು. ಇದನ್ನರಿಯದೆ ಹಿರಿಯರು "ತುಂಬಿದ ಕೊಡ ತುಳುಕುವುದಿಲ್ಲ" ಹ್ಯನ್ನಮೋ ವಿಚಾರವಾಗಿ ಸತ್ಯವನ್ನು ಹೇಳುವವರೇ ಅಪೂರ್ವ. ಹೇಳಿದರೂ ಅದನ್ನು ಅಣಿ ಎಂದು ಭಾವಿಸುವೆವು. ಇದು ಎಂಥಹ ದೌರ್ಭಾಗ್ಯ. "ಕೆಲಸ ಮಾಡಲು ಬಲ್ಲ ಮಾತಾಡಲೊಲ್ಲ" ಮಾತೇಕೆ ಅವಗೆ? ಕಾರ್ಯಸಾಧನೆಯೇ ಅವನ ಅಭೀಷ್ಟ. ಅದೇ ಅವನ ಸಂಜೀವಿನಿ, ಎಂದು ಜ್ಞಾನಿಗಳೆಲ್ಲರು ಹೇಳಿರುವುದನ್ನು ಯಾರು ತಾನೆ ಅರಿಯರು? ಪ್ರಪಂಚಕ್ಕೆ ಇನ್ನು ಕವಿ ವಾಜ್ಮಿ ಪಾದರಿಗಳು ಬೇಡ, ಪರಮತತ್ವವನ್ನು ಅನುಭವಕ್ಕೆ ತರುವ ಜೀವಿಗಳು ಬೇಕು. ಆಡಿತೋರುವವರು ಸಾಕು ಮಾಡಿ ತೋರುವವರು ಬೇಕು. ಅಂತರಾತ್ಮನೆಲ್ಲರಲ್ಲೂ ಇರುವನು. ಅಜ್ಞಾನವನ್ನು ಗ್ರಹಿಸಿದ ತತ್ವವನ್ನು ನಿತ್ಯಾಚರಣೆಯಲ್ಲಿ ತರುವುದರ ಮೂಲಕ ಅಜ್ಞಾನವನ್ನು ನೀಗಲು ಸಾಧಿಸುತ ಬಂದರೆ ಆಗ ಆತ್ಮನ ವೈಖರಿಯು ತೋರುತ ಬರುವುದು.

ಮೂರು ತರದ ಬೋಧಕರು

ಪ್ರಪಂಚದಲ್ಲಿ ಮೂರು ತರದ ಬೋಧಕರು ವಾಕ್ಚಾತುರ್ಯದಿಂದಲೂ ಸಾಮರ್ಥ್ಯದಿಂದಲೂ ಸದಾ ಬೋಧಿ

ಸುತ್ತಿರುವರು. ಅವರಲ್ಲೊಬ್ಬನು ವೃದ್ಧನು; ಅವನ ಕೂದಲು ನೆರೆತು, ಚರ್ಮ ಮುದಡಿಕೊಂಡು, ಅವನೊಬ್ಬ ತಪಸ್ವಿಯೋಪಾದಿಯಲ್ಲಿ ಕೃಶಾಂಗನಾಗಿರುವನು. ಹಠವಾದಿಗೆ ಲಕ್ಷಣವಾದ ತಿರಸ್ಕಾರವೆಂಬ ಜ್ವಾಲೆಯನ್ನು ಕಾರುತ್ತಾ ಅವನು ಅನುದಿನವೂ ಕಿರುಚಿಕೊಂಡು ಹೇಳುವುದೇನೆಂದರೆ,— "ಎಲೈ! ದುರಭಿಮಾನಿಗಳಾದ ಜನಾಂಗಗಳಿರಾ ಹಿಂದಕ್ಕೆ ನಡೆಯಿರಿ; ಮನುಷ್ಯನು ಹುಟ್ಟಿರುವುದು ಕಷ್ಟಪಡುವುದಕ್ಕಾಗಿಯೇ. ಹೀನ ಸ್ಥಿತಿಯಲ್ಲಿ ದುಡಿದು ದುಡಿದು ಮೈ ಬೆವರಿಡುವುದಕ್ಕೂ, ಸಂಕಟ ಪಡುವುದಕ್ಕೂ, ಶ್ರಮಪಟ್ಟು ಜೀವಿಸುತ್ತಾ ದೇವರ ಧ್ಯಾನವನ್ನು ಮಾಡಿಕೊಂಡಿರುವುದಕ್ಕೂ ಮನುಷ್ಯನು ಹುಟ್ಟಿರುವನು. ಆದುದರಿಂದ ಹಿಮ್ಮೆಟ್ಟಿರಿ. ದೈನ್ಯವನ್ನು ಅವಲಂಬಿಸಿ ವಿಧೇಯರಾಗಿ ನಡೆದುಕೊಳ್ಳಿರಿ."

ಎರಡನೆಯ ಬೋಧಕನು ಮೃದುವಾಕ್ಯದವನು. ಗಾನ ಮಾಡುತ್ತಾನೋ ಎಂಬಂತೆ ಮಧುರವಾಗಿ ಮಾತಾಡುವನು. ಸದ್ವಿಷಯ ಚಿಂತೆಯಿಂದ ಕಳೆಗುಂದದ ಅವನ ಮುಖವು ಔದಾಸೀನ್ಯವನ್ನು ಸೂಚಿಸುತ್ತಿರುವುದು. ಅವನ ಮಾತುಗಳು ಪುಸ್ತಕವನ್ನು ಓದಿ ಒಪ್ಪಿಸುವವನ ಮಾತುಗಳಂತೆ ಬಡಬಡನೆ ನಿಸ್ಸಾರವಾಗಿ ಹೊರಡುತ್ತಿರುವುವು. ತನ್ನ ಮಾತನ್ನು ತಾನೇ ಮೆಚ್ಚಿಕೊಳ್ಳುತ್ತಾ ಕಷ್ಟವನ್ನರಿಯದ ತನ್ನ ಸೊಬಗಿನ ಕೈಗಳಿಂತ ಅಭಿನಯಿಸುತ್ತಾ ಅವನು ಹೇಳುವದೇನೆಂದರೆ:— "ಎಲೈ! ತಹತಹ ಪಡುವ ಜನಾಂಗಗಳಿರಾ! ನಿಮ್ಮ ಹಾರಾಟವನ್ನು ನಿಲ್ಲಿಸಿ ಸುಖವನ್ನು ಪಡೆಯಿರಿ; ಅದೃಷ್ಟವೇ ಈಶ್ವರಾಜ್ಞೆಯು, ಈ ಆಜ್ಞೆಯು ನಿರ್ದೋಷವಾದುದು; ಮಧ್ಯೆ ಕೈ ಹಾಕಿದರೆ ಕೆಲಸವು ಕೆಡುವುದು. ಬದಲಾವಣೆಯು ಅವಿವೇಕವೆಂಬುವದು ಎಂದಿಗೂ ನಿಶ್ಚಯವಾದುದು; ನಮ್ಮ ಈಗಿನ ಸ್ಥಿತಿಯೇ ಸುಖಪ್ರದವಾಗಿರುವುದು."

ಬಿ. ಯಂ. ಅಪ್ಪಯ್ಯ,
ಅ. ಡಿ. ಸ್ಕೌ. ಕ.
ಗುಂಡ್ಲುಪೇಟೆ,
ಮೈಸೂರು ಡಿಸ್ಟ್ರಿಕ್ಟ್.

(ಮುಂದುವರಿಯುವುದು)

ಮಹಾ ಪುರುಷರ ಜೀವನ ಚರಿತ್ರೆಗಳು.

ಪ್ರಿಯ ಸಹೋದರರೇ,

ನಾನು ತಮ್ಮಗಳಿಗೆ ಜನಾಂಗ ಸೇವೆಯನ್ನೂ, ದೇಶಸೇವೆಯನ್ನೂ ಬಹುವಾಗಿಮಾಡಿ ಲೋಕಕ್ಕೆಲ್ಲಾ ಪರಮ ಉಪಕಾರವನ್ನು ಮಾಡಿ ಯಶಸ್ವಿಯಾಗಿ ಬಾಳಿ ನಮ್ಮ ಸ್ಕೌಟುಗಳಿಗೆ ಒಂದು ಮಾದರಿಯಂತೆ ಇದ್ದ ಒಬ್ಬ ಮಹಾಪುರುಷನ ಜೀವನ ಚರಿತ್ರೆಯನ್ನು ಅತಿ ಸಂಕ್ಷೇಪವಾಗಿ ತಿಳಿಸಲು ಕುತೂಹಲವುಳ್ಳವನಾಗಿ ಈ ಲೇಖನವನ್ನು ಬರೆದಿರುವೆನು. ಸಾವಧಾನ ಚಿತ್ತದಿಂದ ತಾವುಗಳು ದಯವಿಟ್ಟು ಓದಿ ಆ ದಿವ್ಯಪುರುಷನ ಮೇಲ್ಪಂಕ್ತಿಯನ್ನನುಸರಿಸಿ ನಡೆಯಲು ಪ್ರಯತ್ನಿಸಿದರೆ ಅದೇ ಒಂದು ಸೌಭಾಗ್ಯವೆಂದು ಭಾವಿಸುವೆನು.

1847—1931

ಥಾಮಸ್ ಆಲ್ವಾ ಎಡಿಸನ್ ಎಂಬ ಮಹಾ ಪುರುಷನು 1847ನೇ ಇಸವಿ ಪೆಬ್ರವರಿ ತಾರೀಖು 11ರಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನದ ಓಹಿಯೋ ಜಿಲ್ಲಾ ಮಿಲಾರ್ ಪಟ್ಟಣದಲ್ಲಿ ಜನಿಸಿದನು. ಇವನ ತಂದೆಯು ಡಚ್ ವಂಶಸ್ಥನು, ತಾಯಿಯು ಸ್ಕಾಚ್ ವಂಶಸ್ಥಳು. ಇವನು ಮೂರೇ ತಿಂಗಳು ಪಾಠಶಾಲೆಯಲ್ಲಿ ಓದುತ್ತಿದ್ದದು. ಮಿಚಿರ್ಗ ಜಿಲ್ಲಾ ಪೋರ್ಟ್ ಹ್ಯೂರಾನ್ ಪಟ್ಟಣದ ಒಂದು ಪಬ್ಲಿಕ್ ಸ್ಕೂಲಿನಲ್ಲಿ ಮೂರೇ ತಿಂಗಳು ವ್ಯಾಸಂಗಮಾಡಿ ತನ್ನ ಹನ್ನೆರಡನೇ ವಯಸ್ಸಿನಲ್ಲಿ ರೈಲ್ವೇ ಸ್ಟೇಷರ್ನಗಳಲ್ಲಿ ವೃತ್ತಾಂತ ಪತ್ರಿಕೆಗಳನ್ನು ಮಾರಿ

ಜೀವನಮಾಡಲು ಪ್ರಾರಂಭಮಾಡಿ, ತನ್ನ ಹದಿನೈದನೇ ವರುಷದಿಂದೀಚೆಗೆ ಅನೇಕ ಪಟ್ಟಣಗಳಲ್ಲಿ ಟೆಲಿಫೋನ್ ಆಪರೇಟರ್ ಕೆಲಸ ಮಾಡಿಕ್ಕೊಂಡು ಜೀವಿಸುತ್ತಿದ್ದನು. ತನ್ನ ವಿರಾಮಕಾಲಗಳಲ್ಲಿ ಸೈಂಟಿಫಿಕ್ ವಿಚಾರಗಳಲ್ಲಿ ಆಸಕ್ತನಾಗಿ ಶೋಧನೆಗೆಉಪಕ್ರಮಿಸುವುದೂ, ವ್ಯಾಸಂಗ ಮಾಡುವುದೂ, ಚರ್ಚಿಸುವುದೂ ಇವೇ ಮುಂತಾದ ಕಾರ್ಯಭಾಗಗಳಲ್ಲಿ ಉದ್ಯುಕ್ತನಾಗುತ್ತಿದ್ದನು. ಮತ್ತು 1868 ಇಸವಿಯಲ್ಲಿ ಇವನು ಪ್ರಥಮತಃ ಎಲೆಕ್ಟ್ರಿಕ್ ವೋಲ್ಟ್ ರಿಕಾರ್ಡರ್ ಎಂಬ ಯಂತ್ರವನ್ನು ರಚಿಸಿ ಸರ್ಕಾರದ ಮೆಚ್ಚಿಗೆಗೆ ಪಾತ್ರನಾಗಿ ಅವರಿಂದ "ಪೇಟೆಂಟ್" ಪಡೆದನು. ನಂತರ "ಸ್ಟಾಕ್ ಟೀಕರ್ಸ್, ಡೂಪ್ಲೆಕ್ಸ್, ಕ್ವಾಡ್ರುಪ್ಲೆಕ್ಸ್ ಮತ್ತು ಅಟೋಮಾಟಿಕ್ ಟೆಲಿಗ್ರಾಫ್ ಸಿಸ್ಟಮ್‌ಗಳನ್ನೂ ಮತ್ತು ಎಲೆಕ್ಟ್ರಿಕ್ ಪೆನ್ ಮತ್ತು ಟೈಪ್ ರೈಟಿಂಗ್ ಅನುಕೂಲವಾಗುವಂತೆ ಯಂತ್ರಗಳನ್ನು ಕಂಡುಹಿಡಿದನು. 1877-78ರಲ್ಲಿ ಅವನು ಕಂಡುಹಿಡಿದ ಕಾರ್ಬ್‌ಟ್ರಾನ್ಸ್‌ಮಿಟ್ಟರ್ ಟೆಲಿಫೋನ್ ಯಂತ್ರಕ್ಕೆತುಂಬಾ ಸಹಾಯವಾಗುವಂತೆ ಅನುಕೂಲವಾಯಿತು. ಹೀಗೆಯೇ ಇವನು ಪ್ರತಿ ವರುಷವೂ ಯಾವುದಾದರೂ ಒಂದೊಂದು ಹೊಸ ಹೊಸ ಯಂತ್ರ ಕಂಡುಹಿಡಿದು ಜನಾಂಗಕ್ಕೆ ಬಹು ಉಪಕಾರವನ್ನು ಮಾಡುತ್ತಿರಲು ಸರ್ಕಾರದವರು, 1877ನೇ ಇಸವಿಯಲ್ಲಿ ಈ ಮಹಾ ಪುರುಷನು ಫೋನೋಗ್ರಾಫ್ ಎಂಬ ಯಂತ್ರವನ್ನು ಕಂಡು ಹಿಡಿಯಲು, ಅದುವರಿವಿಗೂ ಯಾರೂ ಕಂಡುಹಿಡಿಯದಿದ್ದ ಒಂದು ಹೊಸ ಯಂತ್ರವನ್ನು ಈತನು ಕಂಡು ಹಿಡಿದಿದ್ದಾನೆಂದು ತುಂಬಾ ಸಂತೋಷಪಟ್ಟು ಇವನಿಗೆ ಬಹುವಾಗಿ ಸನ್ಮಾನ ಮಾಡಿ ಅದಕ್ಕೆ ಒಂದು "ಪೇಟೆಂಟನ್ನೂ" ದಯಪಾಲಿಸಿದರು.

ಇದು ಸುಮಾರು 60 ರೂಪಾಯಿಗಳು ಬೆಲೆಬಾಳುವ ಯಂತ್ರವಾಗಿ ಇದ್ದಿತು. ಜೇನು ಮೇಣದ ಕೊಳವೆಗಳ ಮೇಲೆಗೆರೆಗಳಂತೆ ಗುರುತುಮಾಡಿ ಕೈಯಿಂದ ತಿರಿಗಿಸುವ ಯಂತ್ರವಾಗಿ ಪರಿಣಮಿಸಿ ಜನಗಳಿಗೆ ಅತಿ ಆಸಕ್ತಿಯನ್ನೂ ಆದರವನ್ನೂ ಆಹ್ಲಾದವನ್ನೂ ಉಂಟುಮಾಡಿತು. ಕೆಲವು ವರುಷಗಳು ಕಳೆದಮೇಲೆ ಕೊಳವೆಯ ಬದಲು ತಟ್ಟೆಯ ಮಾದ್ರಿ-ಡಿಸ್ಕ್-ಎಂಬ ರಿಕಾರ್ಡುಗಳನ್ನು ಮಾಡಿ ಅದರ ಮೇಲೆ ಸೂಜಿ ಮೊನೆಯಿಂದ ಶಬ್ದ ಹೊರಡುವಂತೆ ಏರ್ಪಾಡು ಮಾಡಿದನು. ಅದೂ ಅಲ್ಲದೆ "ಎಡಿಫೋನ್" ಎಂಬ ಆಫೀಸು ಯಂತ್ರವನ್ನು ಕಂಡುಹಿಡಿದನು.

ಹೀಗೆ ಅನೇಕ ವರುಷಗಳು ಕಷ್ಟಪಟ್ಟು. $1\frac{1}{2}$ ಲಕ್ಷ ರೂಪಾಯಿಗಳು ವೆಚ್ಚ ಮಾಡಿ ಕಾರ್ಯಶೋಧನೆಗಳನ್ನು ಮಾಡಲುಜ್ಜುಗಿಸಿದನು. ತದನಂತರ 1879ನೇ ಇಸವಿ ಅಕ್ಟೋಬರ್ ತಿಂಗಳು 21ನೇ ತಾರೀಖಿನಲ್ಲಿ ಇಕ್ಕ್ಯಾಂಡಿಸೆಂಟ್ ಎಲೆಕ್ಟ್ರಿಕ್ ಬಲ್ಬನ್ನು ಕಂಡುಹಿಡಿದು ಅದು 40 ಘಂಟೆಗಳಕಾಲ ಉರಿಯಲು ಅನುಕೂಲವಾಗುವಂತೆ ಮಾಡಿದನು. ತದನಂತರ ಹತ್ತುಹನ್ನೆರಡು ವರುರುಷಗಳ ಕಾಲ ಎಲೆಕ್ಟ್ರಿಕ್ ದೀಪ, ಶಾಖ ಮತ್ತು ಪವರ್ ಇವುಗಳ ಬಡಾವಣೆಗೆ ಹೆಚ್ಚು ಬುದ್ಧಿಯನ್ನು ಉಪಯೋಗಿಸಿ ಅನೇಕ ಯಂತ್ರಗಳನ್ನು ಕಂಡುಹಿಡಿದನು. ಅಲ್ಲದೆ ತ್ರಿವೈರ್ ಸಿಸ್ಟಮ್, ಅಂಡರ್ ಗ್ರೌಂಡ್ ಮೇನ್ (main) ಕೇಬಲ್ಸ್, ಡೈನಮೊಗಳು, ಮೋಟಾರುಗಳು ಸಾಮಾನುಗಳನ್ನೂ ಜನರನ್ನು ಸಾಗಿಸಲು ಎಲೆಕ್ಟ್ರಿಕ್ ರೈಲ್ವೆಯನ್ನು ಕಂಡುಹಿಡಿದನು. 1891ನೇ ಇಸವಿಯಿಂದ 1900 ವರಿವಿಗೆ ಅತಿ ಕಷ್ಟಪಟ್ಟು ಕಬ್ಬಿಣದ ಓರನ್ನು ಸ್ಟೀಲಾಗಿ ಮಾಡಲು ಮ್ಯಾಗ್ನೆಟಿಕ್ ಮೆಥಡನ್ನು ಕಂಡುಹಿಡಿದನು. 1900—1910 ವರಿವೆಗೆ ಸ್ಟೋರೇಜ್‌ಬ್ಯಾಟರಿ (Battery)ಗಳು ಮುಂತಾದ ಅನೇಕ ಯಂತ್ರಗಳನ್ನು ಸೈನ್ಸಿಗೆ ಉಪಯೋಗವಾಗುವಂತೆ ರಚಿಸಿದನು. ಮತ್ತು 1891ರಲ್ಲಿ ಸಿನಿಮೊಟಗ್ರಾಫ್ ಎಂಬ ಒಂದು ಸಣ್ಣ ಫೊಟೋಕ್ಯಾಮರವನ್ನು ಚಲನ ಚಿತ್ರವನ್ನು ತೆಗೆಯಲು ಅನುಕೂಲಿಸುವಂತೆ ರಚಿಸಿದನು. ಅದು ಮುಂಚೆ ಒಂದು ಪೆಟ್ಟಿಗೆಯೊಳಗೆ ನೋಡಲು ಅನುಕೂಲವಿದ್ದಿತು, ನಂತರ ಗೋಡೆಯಮೇಲೆ ಫೋಟೋಗಳನ್ನು ಪ್ರತಿಬಿಂಬಿಸುವಂತೆ ಮಾಡಿ ಜನರು ನೋಡಲು ಅನುಕೂಲಪಡಿಸಿ ಕೊಟ್ಟನು. 1885ನೇ ಇಸವಿಯಲ್ಲಿ ರೈಲಿನಲ್ಲಿ ಹೋಗುತ್ತಿರುವ ಜನಗಳಿಗೂ ಮತ್ತು ಸಮುದ್ರಯಾನ ಮಾಡುತ್ತಿರುವ ಜಹಜುಗಳಿಂದ ಟೆಲಿಗ್ರಾಮ್ ಹೋಗುವಂತೆ ಏರ್ಪಾಡು ಮಾಡಿದ ಯಂತ್ರವನ್ನು ಕಂಡುಹಿಡಿದನು.

ಅಲ್ಲದೆ ಈತೆರಿಕ್ ಫೋರ್ಸ್ (Etheric Force) ಮತ್ತು ಎಡಿರ್ಸ ಎಪೆಕ್ಟ್ ಎಂಬ ವಿದ್ಯುಚ್ಛಕ್ತಿಯ ಅತಿ ಅದ್ಭುತ ವ್ಯಾಪಾರದ ಶಕ್ತಿಯನ್ನು ಕಂಡುಹಿಡಿದನು.

ಈಗ ಇರುವ ರೇಡಿಯೋ ಕ್ರಮಕ್ಕೂ ಇವನೇ ಮೂಲ ಪುರುಷನೆಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ಹಿಂದೆ ನಡೆದ ಘೋರ ಯುದ್ಧದಲ್ಲಿ ಸರ್ಕಾರಕ್ಕೆ ಸಹಾಯ ವಾಗುವಂತೆ ರಸಾಯನ ಶಾಸ್ತ್ರದಲ್ಲಿ ಅತಿನೈಪುಣ್ಯವನ್ನು ತೋರಿಸಿ, ನಾವಿಕಶಾಸ್ತ್ರಕ್ಕೂ ಅನುಕೂಲಿಸುವಂತೆ ಬಹು ವಾಗಿ ಶ್ರಮಪಟ್ಟು ಫೆನಾಲ್ ಮುಂತಾದ ಅನೇಕ ಕೆಮಿ ಕಲ್ಸ್‌ಗಳನ್ನೂ ಕಂಡುಹಿಡಿದನು. 1927ರಲ್ಲಿ ಇವ ನನ್ನು ನ್ಯಾಷನಲ್ ಆಕೆಡಮಿ ಆಫ್ ಸೈನ್ಸಸ್ ಎಂಬ ಸಮಾಜಕ್ಕೆ ಸೇರಿಸಿದರು. ಹೀಗೆ ಈ ಮಹಾ ಪುರುಷನು ಐವತ್ತು ವರುಷಗಳ ಕಾಲ ಶ್ರಮಪಟ್ಟು ಕೆಲಸಮಾಡಿ ಸುಮಾರು ಸಾವಿರದಮೂವತ್ತುಮೂರು ಯಂತ್ರಗಳನ್ನು ಕಂಡುಹಿಡಿದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅದರಿಂದ ಕೋಟ್ಯಾಂತರ ರೂಪಾಯಿಗಳನ್ನೇ ಸಂಪಾದನೆ ಮಾಡಿ ಬಹುವಾಗಿ ದಾನ ಧರ್ಮ ಮಾಡಿ, ತನ್ನ ಯಶಸ್ಸನ್ನು ಪ್ರಪಂಚಕ್ಕೆಲ್ಲಾ ತನ್ನ ಯಂತ್ರಗಳ ಮೂಲಕ ಹರಡಿ, ಬಹುವಾಗಿ ಜನಾಂಗಕ್ಕೆ ಉಪಕಾರ ಮಾಡಿ 1931ರಲ್ಲಿ ದಿವಂಗತನಾದನು. ಈ ಮಹಾ ಪುರುಷನ ಜೀವನ ಚರಿತ್ರೆಯು ಪ್ರಪಂಚಕ್ಕೆ ಒಂದು ಮಾದರಿಯಾಗಿದೆ ಎಂದು ನಾನು ನಂಬುತ್ತೇನೆ. ನಮ್ಮ ಸ್ಕೌಟ್ ಪ್ರಪಂಚದಲ್ಲಿ ಯಾರಾದರೂ ಒಬ್ಬರಾದರೂ ಈರೀತಿ ಮುಂದಕ್ಕೆ ಬರುವರೆಂದು ನನಗೆ ಭರವಸೆ ಇದೆ.

F. C. Devaraja Urs.
Hd. Qrs. Commissioner for
Publicity & Propaganda.
The Boy Scouts of Mysore
MYSORE.

The Mysore Scout Co-operative Stores

THE ONLY INSTITUTION FROM WHICH TO GET YOUR SCOUT EQIPMENT

Uniforms, Flags, Whistles, Shoulder Knots and other equipment.

Books, Charts, Photographs and Registers.

Indian Scout Pocket Book	Each	1	0	0
Methods of Early Training	—	1	12	0
Gilcraft Series (Nos. 1 to 16)	—	1	2	0
Produx Calculater	—	3	0	0
ಮರಿಗಳ ಕೂಗು	—	1	0	0
Scouting for Boys in India	—	2	0	0
Wolf Cub Hand Book	—	1	15	0
All-India Boy Scout Diary in English	—	0	4	0
The Mysore Boy Scout Diary in Kannada	—	0	4	0
Law chart in Urdu	—	0	3	0
Law Charted in Urdu (Mounted)	—	1	6	0
Wall charts	—	0	4	6
Troop Register big size	—	2	8	0
do small size	—	0	7	0
Aid to Scoutmastership	—	1	8	0
Rovering to success	—	0	12	0
Scouting Games	—	1	2	0
Games for Camps and Club Rooms		1	2	0
Camping Standard	—	0	4	0

Boy Scout Tests and how to pass them	—	3	6	0
Complete Signalling Instructor	—	0	12	0
1st Steps in Scouting	—	0	4	0
1st Class Tests	—	0	4	0
How to run a Troop	—	1	2	0
How to run a Petrol	—	0	9	0
Letters to a Petrol Leader —Scout Law	—	0	6	0
" —Tenderfoot	—	0	6	0
Fire Side Stories	—	1	2	0
How to run Wolf Cubs	—	1	2	0
Games for Cubs	—	1	8	0
Sife's Suags	—	1	14	0
LAlIndia Poliey, Organisation and Rules	—	0	4	0

Other Equipment.

Scout Whistle with Mysore emblem	—	0	6	0
Shoulder Knots for Scouts	—	0	1	6
do Rovers	—	0	2	0
Shoulder Patches for Cubs	—	0	0	7
Scarves—(triangular, in cotton; supplied to order in required colour) from annas 0-4-0	to	0	10	0
Scarves Cotton; Green-square	each	0	13	0
do Woollen, Green, triangular	—	1	0	0
do Silk square	—	2	4	0
Woggle (Lacquer, wholesale rate)		0	0	10
Garter tabs, Green or Red	—	0	2	0
Belt, leat her	—	1	8	0
Belt, web from 0-6-6 to	—	0	8	6
Cub and Scout Caps	—	0	4	6
Woollen Khaki Hoses big size I quality	per pair	1	14	0
do II do	—	1	9	6
do III do	—	1	6	0
Cotton Hoses	—	0	7	0

Khaki Cotton Stockings plain top.

For Cubs Size 8½″	each	0	2	6
For Scouts and Rovers Size 9″, 9½″, 10″, 10½″, 11″	each —	0	4	6
Khaki thick cotton stockings Size 10″ to 11″	each —	0	7	9

Khaki mercerised stockings plain top

For ts and Scouters size 9½″ to 11″	each	0	11	3

Khaki wollen stockings plain top with mending wool

For Scouts and Scoute size 10″ to 10½″	each	0	15	6

Thick wollen stocking plain top with mending wore.

For Scouts and Scouters size 10″ to 10 1/2″	each	1	11	0
Haversack	each	1	6	0
Water bottle	—	1	10	3
Lanyard	—	0	4	6
Shoulder badges—Troop No. and name to be furnished; supplied to order	per 100	1	0	0
Mysore flag	each	4	6	0
Union jack	—	1	1	0
Troop flag	—	8	12	0
Morse signalling flag with stick complete	—	0	5	3
Semaphore Signalling flags with sticks complete	per pair	0	7	0
First Aid Box small size	each	1	9	0
do big size	—	6	8	0
Triangular Bandages	—	0	3	3
do printed	—	0	10	0
Splints	one set	2	4	0
Scout compass	each	1	8	0
Staves	per 100	15	0	0
Hammer	each	0	15	0
Scout knife, big size with a marlin's spike I quality	—	1	8	0
do II do	—	0	14	6
do small size	—	0	11	0
Scout knife, big size with Tin cutter and marlin's spike	—	1	10	0
Ordinary knife Scout pattern, small size with martin's spike	—	0	11	0
Same as above, nickel plated	—	0	1[illegible]	0
Scout knife and whistle, a combination, just the thing for a good Scout	—	0	12	6
Ordinary knife, big size, stainless steel blade with cork-screw	—	0	15	0
Ordinary knife, stainless steel blade, small size	—	0	6	9
Swadeshi knife	—	1	6	0
Scissors, best steel	—	0	14	0
Hand Axe American pattern	—	1	1	0
do Gilwell pattern	—	1	1	0
Bill Hook double-edged	—	1	9	0
Chopper	—	1	12	6

N. B.—A fresh stock of new Books, Wcollen and Cotton Stockings have just arrived. Ask for a detailed list. — — Prices moderate

Apply to The Secretary,

THE MYSORE SCOUT CO-OPERATIVE STORES. LTD.

Scout Headquarters, Irwin Circle, Bangalore City.